ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 9 ಬುಧವಾರ 2022

ಸಂಪುಟ: 43 | ಸಂಚಿಕೆ: 202 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ನಿವೃತ್ತ ಐಬಿ ಅಧಿಕಾರಿ ಆರ್.ಎನ್. ಕುಲಕರ್ಣಿ ಹತ್ಯೆ ಪ್ರಕರಣ ಬಯಲು: ಇಬ್ಬರ ಬಂಧನ; ಕಾರು, ಸ್ಕೂಟರ್ ವಶ

ನಿಯಮಾವಳಿ ಉಲ್ಲಂಘಿಸಿ ಕಟ್ಟಡ ನಿರ್ಮಾಣ ವಿವಾದ ವೈಷಮ್ಯವೇ ಕುಲಕರ್ಣಿ ಹತ್ಯೆಗೆ ಕಾರಣ



ಮೈಸೂರು ನಜರ್‌ಬಾದ್‌ನ ತಮ್ಮ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ. ವಿಶೇಷ ತನಿಖಾ ತಂಡದ ನೇತೃತ್ವ ವಹಿಸಿದ್ದ ಎನ್.ಆರ್.ಉಪವಿಭಾಗದ ಎಸಿಪಿ ಎಂ.ಶಿವಶಂಕರ (ಎಡಬದಿ), ಸಿಸಿಬಿ ಎಸಿಪಿ ಸಿ.ಕೆ.ಅಶ್ವಥನಾರಾಯಣರನ್ನು ಕಾಣಬಹುದು.

ಮೈಸೂರು,ನ.8(ಆರ್‌ಕೆ)–ಮಾನಸ ಗಂಗೋತ್ರಿ ಆವರಣದಲ್ಲಿ ವಾಯು ವಿಹಾರದ ವೇಳೆ ಕಾರು ಹರಿಸಿ ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ(82) ಅವರ ಹತ್ಯೆಗೈದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಟಿ.ಕೆ.ಲೇಔಟ್ 4ನೇ ಹಂತ, 13ನೇ ಮೇನ್ ನಿವಾಸಿ ಮಾದಪ್ಪ ಎಂಬುವರ ಮಗ ಮನು(30) ಹಾಗೂ ಆತನ ಸ್ನೇಹಿತ, ಕುವೆಂಪುನಗರ ನಿವಾಸಿ ವರುಣ್‌ಗೌಡ (29) ಬಂಧಿತ ಆರೋಪಿಗಳಾಗಿದ್ದು, ಕೃತ್ಯಕ್ಕೆ ಬಳಸಿದ್ದ ಹೋಂಡಾ ಕಾರನ್ನು ವಶಕ್ಕೆ ಪಡೆಯಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಮಂಗಳವಾರ ತಿಳಿಸಿದ್ದಾರೆ.

ಮೈಸೂರಿನ ನಜರ್‌ಬಾದ್‌ನ ತಮ್ಮ ಕಚೇರಿ ಸಭಾಂಗಣದಲ್ಲಿ ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ನಿವೃತ್ತ ಐಬಿ ಅಧಿಕಾರಿ ಹತ್ಯೆ ಪ್ರಕರಣದ ತನಿಖೆ ಮುಂದುವರೆದಿದ್ದು, ಈ ಕೃತ್ಯದಲ್ಲಿ ಬೇರೆಯಾರಾದರೂ ಭಾಗಿಯಾಗಿದ್ದಲ್ಲಿ ಅವರನ್ನೂ ಬಂಧಿಸಿ, ಕಾನೂನಿನ ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದರು.

ಇಬ್ಬರೂ ಸ್ನಾತಕೋತ್ತರ ಪದವೀಧರರು: ಹತ್ಯೆ ಆರೋಪಿಗಳಿಬ್ಬರೂ ಸ್ನಾತಕೋತ್ತರ ಪದವೀಧರರಾಗಿದ್ದಾರೆ. ಹತ್ಯೆಯಾದ ಕುಲಕರ್ಣಿ ಅವರ ಪಕ್ಕದ ಮನೆಯ ನಿವಾಸಿ ಮಾದಪ್ಪನ ಕಿರಿಯ ಮಗ ಮನು ಎಂಬಿಎ ಪದವೀಧರನಾಗಿದ್ದು, ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ. ಕೊಲೆಗೆ ಸಹಕರಿಸಿದ ಆತನ ಸ್ನೇಹಿತ ವರುಣ್‌ಗೌಡ ಎಂಸಿಎ ಪದವೀಧರ. ಸೆಟ್‌ಬ್ಯಾಕ್ ಬಿಡದೇ ಮನೆ ನಿರ್ಮಿಸುತ್ತಿದ್ದ ಮಾದಪ್ಪ ವಿರುದ್ಧ ಕುಲಕರ್ಣಿ ಅವರು ಕಾನೂನು ಮೊರೆ ಹೋಗಿದ್ದರು. ಈ ಕಾರಣಕ್ಕೆ ಉಂಟಾದ ವೈಷಮ್ಯ ತಾರಕ್ಕಕೇರಿದ್ದೇ ಕುಲಕರ್ಣಿ ಅವರನ್ನು ಕೊಲೆ ಮಾಡಲು ಪ್ರಮುಖ ಕಾರಣ ಎಂದು ಈವರೆಗಿನ ತನಿಖೆಯಿಂದ ತಿಳಿದು ಬಂದಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದರು.

▶ 8ನೇ ಪುಟಕ್ಕೆ



ಮನು




ವರುಣ್‌ಗೌಡ

ಪೂರ್ವ ಯೋಜಿತ ಕೊಲೆ ಎಂಬುದನ್ನು ಪುಷ್ಟೀಕರಿಸಿದ ಅಂಶಗಳು

- ಉದ್ದೇಶಪೂರ್ವಕವಾಗಿ ಕಾರು ಹರಿಸಿದ್ದು
- ಕಾರಿಗೆ ಹಿಂದೆ–ಮುಂದೆ ನಂಬರ್ ಪ್ಲೇಟ್ ಇಲ್ಲದೇ ಇರುವುದು
- ಸ್ಥಳದಲ್ಲಿ ಲಭ್ಯವಾದ ಹಲವಾರು ಸಾಕ್ಷ್ಯ–ಪುರಾವೆಗಳು
- ಸಿಸಿ ಕ್ಯಾಮರಾದಲ್ಲಿ ಸೆರೆಯಾದ ದೃಶ್ಯಾವಳಿಗಳು
- ಘಟನೆ ಪೂರ್ವೋತ್ತರ ಪ್ರಕರಣಗಳು (ಸೆಟ್‌ಬ್ಯಾಕ್ ಬಿಡದ ಸಂಬಂಧ ಉಂಟಾಗಿದ್ದ ವ್ಯಾಜ್ಯ)

ಅಕ್ರಮ ಪ್ರಶ್ನಿಸಿದ್ದೇ ಸಂಚಕಾರವಾಯ್ತು...

ಮೈಸೂರು: ಸೆಟ್‌ಬ್ಯಾಕ್ ಬಿಡದೇ ನಿಯಮ ಉಲ್ಲಂಘಿಸಿ ಮಾದಪ್ಪ ಅವರು ಕಟ್ಟಡ ನಿರ್ಮಿಸುತ್ತಿದ್ದು, ಈ ವಿವಾದದಿಂದ ಉಂಟಾಗಿದ್ದ ವೈಷಮ್ಯವೇ ನಿವೃತ್ತ ಸೆಂಟ್ರಲ್ ಇಂಟೆಲಿಜೆನ್ಸ್ ಬ್ಯೂರೋ ನಿವೃತ್ತ ಅಧಿಕಾರಿ ಆರ್.ಎನ್.ಕುಲಕರ್ಣಿ ಹತ್ಯೆಗೆ ಪ್ರಮುಖ ಕಾರಣ ಎಂಬುದು ತನಿಖೆಯಿಂದ ದೃಢಪಟ್ಟಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಸ್ಪಷ್ಟಪಡಿಸಿದ್ದಾರೆ.



ಆರ್.ಎನ್.ಕುಲಕರ್ಣಿ

ಈ ಪ್ರಕರಣಕ್ಕೆ ಬೇರೆ ಬೇರೆ ಆಯಾಮಗಳಿವೆ ಎಂಬ ಮಾತು ಕೇಳಿ ಬರುತ್ತಿತ್ತು. ಆದರೆ, ತೀವ್ರ ತನಿಖೆ ಮಾಡಿ, ಮಾದಪ್ಪನ ಮಗ ಮನು ಬಂಧಿಸಿ ವಿಚಾರಣೆ ನಡೆಸಿದಾಗ ನಿಯಮಾವಳಿ ಧಿಕ್ಕರಿಸಿ, ಮಾದಪ್ಪ ನಿರ್ಮಿಸುತ್ತಿದ್ದ ಕಟ್ಟಡ ತೆರವಿಗೆ ನೋಟಿಸ್ ಜಾರಿಯಾಗಿರುವುದೇ ನಿವೃತ್ತ ಐಬಿ ಅಧಿಕಾರಿ ಆರ್.ಎನ್. ಕುಲಕರ್ಣಿ ಅವರ ಹತ್ಯೆಗೆ ಪ್ರಮುಖ ಕಾರಣ ಎಂಬುದು ಖಚಿತವಾಯಿತು ಎಂದರು.

ಕುಲಕರ್ಣಿ ಅವರು ವಾಸ ಮಾಡುತ್ತಿದ್ದ ಟಿ.ಕೆ.ಲೇಔಟ್ ಮನೆಗೆ ಹೊಂದಿಕೊಂಡಂತೆ ಮಾದಪ್ಪ ಮನೆ ನಿರ್ಮಿಸುತ್ತಿದ್ದು, ಕಟ್ಟಡ ಬೈಲಾಗಳ ಪ್ರಕಾರ ಗಾಳಿ–ಬೆಳಕಿಗೆ ಸೆಟ್‌ಬ್ಯಾಕ್ ಬಿಡದೇ, ನಿಯಮಗಳನ್ನು ಉಲ್ಲಂಘಿಸಿ ಅನಧಿಕೃತವಾಗಿ ಕಟ್ಟಡ ನಿರ್ಮಿಸಿದ್ದಾರೆ. ಅದಕ್ಕೆ ಕುಲಕರ್ಣಿ ಅವರು ಮೈಸೂರು ಮಹಾನಗರ ಪಾಲಿಕೆ, ಸಿಟಿ ಸಿವಿಲ್ ಕೋರ್ಟ್ ಹಾಗೂ ಹೈಕೋರ್ಟ್‌ಗಳಲ್ಲಿ ದಾವೆ ಹೂಡಿದ್ದರು. ಅದರನ್ವಯ ▶ 8ನೇ ಪುಟಕ್ಕೆ

ತನಿಖಾ ತಂಡಕ್ಕೆ 50,000 ರೂ. ಬಹುಮಾನ

ಮೈಸೂರು: ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಅವರ ಹತ್ಯೆ ಪ್ರಕರಣವನ್ನು ಕೇವಲ ಮೂರು ದಿನದಲ್ಲಿ ಭೇದಿಸಿರುವ ಎನ್.ಆರ್.ಉಪ ವಿಭಾಗದ ಎಸಿಪಿ ಶಿವಶಂಕರ್, ಸಿಸಿಬಿ ಎಸಿಪಿ ಸಿ.ಕೆ.ಅಶ್ವತ್ಥನಾರಾಯಣ ನೇತೃತ್ವದ ವಿಶೇಷ ತನಿಖಾ ತಂಡಕ್ಕೆ 50 ಸಾವಿರ ರೂ. ನಗದು ಬಹುಮಾನ ಘೋಷಿಸಲಾಗಿದೆ.

ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಈ ಪತ್ತೆ ಕಾರ್ಯವನ್ನು ಶ್ಲಾಘಿಸಿ, ನಗದು ಬಹುಮಾನ ಘೋಷಿಸಿದ್ದಾರೆ. ಆರಂಭದಲ್ಲಿ ಹಿಟ್ ಅಂಡ್ ರನ್ ಕೇಸ್ ▶ 8ನೇ ಪುಟಕ್ಕೆ

ಸಿಸಿ ಕ್ಯಾಮರಾದಿಂದ ಮಹತ್ವದ ಮಾಹಿತಿ

ಮೈಸೂರು: ಆರ್.ಎನ್.ಕುಲಕರ್ಣಿ ಅವರ ಹತ್ಯೆ ಸಂಬಂಧ ಮಾನಸಗಂಗೋತ್ರಿ ಆವರಣದ ಸಿಸಿ ಕ್ಯಾಮರಾಗಳಿಂದ ಮಹತ್ವದ ಮಾಹಿತಿ ಲಭ್ಯವಾಗಿದೆ. ಕೃತ್ಯ ನಡೆದ ಬಯೋ ಟೆಕ್ನಾಲಜಿ ವಿಭಾಗದ ಬಳಿ ರಸ್ತೆ ಕಾರ್ನರ್‌ನಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದ ದೃಶ್ಯಗಳಿಂದಾಗಿ ಅಪರಿಚಿತ ವಾಹನ ಕುಲಕರ್ಣಿ ಅವರಿಗೆ ಡಿಕ್ಕಿ ಹೊಡೆದು ಪರಾರಿಯಾಗಿಲ್ಲ, ಉದ್ದೇಶಪೂರ್ವಕವಾಗಿ ಕಾರಿನಲ್ಲಿ ಬಂದು ಡಿಕ್ಕಿ ಹೊಡೆದು, ಹತ್ಯೆಗೈಯ್ಯಲಾಗಿದೆ ಎಂಬುದು ತಿಳಿಯಿತು.

ಕಾರು ಯಾವ ಬಣ್ಣದ್ದು, ಯಾವ ಕಂಪನಿಯದ್ದು, ಯಾವ ಕಡೆಯಿಂದ ಬಂದು ಡಿಕ್ಕಿ ಹೊಡೆದು ಎತ್ತ ಹೋಯಿತು ಎಂಬುದನ್ನು ಸಿಸಿ ಕ್ಯಾಮರಾ ಫುಟೇಜ್‌ನಿಂದ ಗಮನಿಸಿದ ಪೊಲೀಸರು, ಮುಂದೆ ಕಾರು ಸಾಗಿರಬಹುದಾದ ಮಾರ್ಗಗಳಲ್ಲಿಯೂ ಇರುವ ಕ್ಯಾಮರಾಗಳಲ್ಲಿಯೂ ಕಾರು ಹಾದು ಹೋಗಿರುವ ಬಗ್ಗೆ ಮಾಹಿತಿ ದೊರೆಯಿತು. ಸ್ಥಳದಲ್ಲಿ ಸಿಸಿ ಕ್ಯಾಮರಾಗಳಿಲ್ಲದಿದ್ದಲ್ಲಿ ಅಪರಿಚಿತ ವಾಹನ ಡಿಕ್ಕಿ ▶ 8ನೇ ಪುಟಕ್ಕೆ

ಜನತಾ ದನಿ... ದೇವರ ದನಿ...

ಅನಧಿಕೃತ ನಿರ್ಮಾಣದ ವಿರುದ್ಧ ಧ್ವನಿ ಎತ್ತಿದ್ದಕ್ಕೇ ಹಿರಿಯ ನಿವೃತ್ತ ಐಬಿ ಅಧಿಕಾರಿ ಹತ್ಯೆಯಾಯ್ತಲ್ಲಾ...

ಆತ್ಮೀಯ ಮೈಸೂರಿನ ನಾಗರಿಕರೇ,

ಮೈಸೂರು ಮಹಾನಗರ ಪಾಲಿಕೆ(ಎಂಸಿಸಿ) ಅಧಿಕಾರಿಗಳು ಮತ್ತು ಇನ್ನಿತರ ಸಂಬಂಧಿಸಿದ ಅಧಿಕಾರಿಗಳ ನಿರ್ಲಕ್ಷ್ಯವು ಕೇಂದ್ರ ಗುಪ್ತಚರ ಇಲಾಖೆ ನಿವೃತ್ತ ಅಧಿಕಾರಿ ಆರ್.ಎನ್.ಕುಲಕರ್ಣಿ ಅವರ ಸಾವಿಗೆ ಕಾರಣವಾಯಿತು ಎಂಬುದು ಅತ್ಯಂತ ದುಃಖಕರ. ಕೋರ್ಟ್‌ನಲ್ಲಿ 16 ಬಾರಿ ವಿಚಾರಣೆ ನಡೆದರೂ ಯಾವುದೇ ನಿರ್ಧಾರವಾಗದೇ ಇರುವುದು ಹಾಗೂ ತಪ್ಪಿತಸ್ಥರ ವಿರುದ್ಧ ಯಾವುದೇ ಕ್ರಮ ಜರುಗಿಸಿಲ್ಲ.

ಅತ್ಯಂತ ನೇರ ನುಡಿಯ ವ್ಯಕ್ತಿತ್ವ ಹೊಂದಿದ್ದ ಕುಲಕರ್ಣಿ ಅವರು ಕಾನೂನು ಪಾಲನೆಯಲ್ಲಿ ಬದ್ಧತೆ ಹೊಂದಿದ್ದವರು. ಮೇಲಾಗಿ ಭಾರತ ಸರ್ಕಾರದ ಮಾಜಿ ಐಬಿ ಅಧಿಕಾರಿ. ಅನಧಿಕೃತ ಕಟ್ಟಡ ನಿರ್ಮಾಣದ ವಿರುದ್ಧ ಆರ್.ಎನ್.ಕುಲಕರ್ಣಿ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ದೂರು ನೀಡಿದ್ದರೂ ಸಕಾಲದಲ್ಲಿ ಸೂಕ್ತ ಕ್ರಮ ಕೈಗೊಳ್ಳದೇ ಕೇವಲ ನೆರೆಮನೆಯವರಿಗೆ ನೋಟಿಸ್ ನೀಡಿರಬಹುದು. ವಾಸ್ತವದಲ್ಲಿ ಇಂತಹ ದೂರುಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಇದು ವ್ಯಾಪಕ ಭ್ರಷ್ಟಾಚಾರಕ್ಕೆ ಎಡೆಮಾಡಿದಂತಾಗಿದೆ.

ಪರವಾನಗಿ ನಿಯಮಾವಳಿ ಮೀರಿ ಅನಧಿಕೃತ ನಿರ್ಮಾಣಗಳು ಮತ್ತು ಕಟ್ಟಡಗಳನ್ನು ನಿರ್ಮಿಸುವುದು ಸಾಮಾನ್ಯವಾಗಿದೆ. **ಅನಧಿಕೃತ ನಿರ್ಮಾಣದ ವಿರುದ್ಧ ಧ್ವನಿ ಎತ್ತಿದ್ದ ಕಾರಣಕ್ಕೆ ಭಾರತ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರ ಹತ್ಯೆ ನಡೆಯುತ್ತದೆ ಎಂದರೆ, ಕಾನೂನು ಪರಿಪಾಲಿಸುವ ಸಾಮಾನ್ಯ ನಾಗರಿಕನ ಗತಿಯೇನು?**

ಅನಧಿಕೃತ ಕಟ್ಟಡ ನಿರ್ಮಾಣ ಗಮನಕ್ಕೆ ಬಂದ ಕೂಡಲೇ ಅನಧಿಕೃತ ನಿರ್ಮಾಣ ಸಂಸ್ಥೆ ಕೋರ್ಟ್‌ಗೆ ಹೋಗುವ ಮುನ್ನವೇ ಅದನ್ನು ನೆಲಸಮಗೊಳಿಸುವ ಅಧಿಕಾರ ಮಹಾನಗರ ಪಾಲಿಕೆಗೆ ಇದೆ. ಅದಾಗ್ಯೂ ಅಗತ್ಯ ಕ್ರಮ ಕೈಗೊಳ್ಳದ ಅಧಿಕಾರಿಗಳು, ಮಾತ್ರವಲ್ಲದೆ ಇವರ ಜೊತೆಗೆ ನಿರ್ಮಾಣ ಏಜೆನ್ಸಿಯನ್ನು ಕೋರ್ಟ್ ಕಟಕಟೆಯಲ್ಲಿ ನಿಲ್ಲಿಸಬೇಕು.

ಅನುಮೋದಿತ ನಕ್ಷೆಯಂತೆ ಕಟ್ಟಡಗಳನ್ನು ನಿರ್ಮಿಸದ ಮಾಲೀಕರಿಗೆ ಕೇವಲ ನೋಟಿಸ್ ನೀಡಿ ಮೌನ ವಹಿಸುವ ಪಾಲಿಕೆಗೆ ನಾಚಿಕೆಯಾಗಬೇಕು. ಕನಿಷ್ಠ ಪಕ್ಷ ಈ ಪ್ರಕರಣವನ್ನಾದರೂ ಗಂಭೀರವಾಗಿ ಪರಿಗಣಿಸಿ ನ್ಯಾಯ ಕೊಡಿಸಬೇಕೆಂದು ವಿನಂತಿಸುತ್ತೇನೆ. ಇಲ್ಲಿ ಹಣದ ಪ್ರಭಾವ ಕೆಲಸ ಮಾಡದೇ ಇರಲಿ.

–ಎಂ.ಎಸ್. ವಿಜಯಶಂಕರ್,
ವಿಜಯಶಂಕರ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್,
ಮೈಸೂರು. 8.11.2022

ಮುರುಘಾಮಠಕ್ಕೆ ಆಡಳಿತಾಧಿಕಾರಿ ನೇಮಿಸಲು ಮನವಿ
ವರದಿ ಬಂದ ಬಳಿಕ ಮುಂದಿನ ಕ್ರಮ: ಸಿಎಂ


ಚಿತ್ರದುರ್ಗ: ಚಿತ್ರದುರ್ಗದ ಮುರುಘಾಮಠಕ್ಕೆ ಆಡಳಿತಾಧಿಕಾರಿ ನೇಮಿಸಲು ಮನವಿ ಮಾಡಿದ್ದಾರೆ. ಈ ಬಗ್ಗೆ ಕಂದಾಯ ಇಲಾಖೆಯಿಂದ ಜಿಲ್ಲಾಧಿಕಾರಿಗೆ ವರದಿ ಕೇಳಿದ್ದೇವೆ. ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳುತ್ತೇವೆ ಎಂದು ಚಿತ್ರದುರ್ಗದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಚಿತ್ರದುರ್ಗದ ಸಾಣೇಹಳ್ಳಿ ಬಳಿಯ ಹೆಲಿಪ್ಯಾಡ್‌ನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, ಮುರುಘಾಶ್ರೀಗಳಿಂದ ಅಕ್ಷಮ್ಯ ಅಪರಾಧ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು ಪ್ರಕರಣ ನ್ಯಾಯಾಲಯದಲ್ಲಿದೆ. ಈಗ ಏನೂ ಹೇಳಲಾಗದು ಎಂದು ಜಾರಿಕೊಂಡರು.

ಶತಮಾನಗಳ ನಂಬಿಕೆಗೆ ಕೊಡಲಿ ಪೆಟ್ಟು ಕೊಡುವ ಕೆಲಸ ನಡೆದಿದೆ: ಹಿಂದೂ ಪದದ ಬಗ್ಗೆ ಸತೀಶ್ ಜಾರಕಿಹೊಳಿ ಅವಹೇಳನಕಾರಿಯಾಗಿ ಹೇಳಿಕೆ ನೀಡಿದ ಕುರಿತು ಮಾತನಾಡಿದ ಸಿಎಂ ಬೊಮ್ಮಾಯಿ, ಶತಮಾನಗಳ ನಂಬಿಕೆಗೆ ಕೊಡಲಿ ಪೆಟ್ಟು ಕೊಡುವ ಕೆಲಸ ನಡೆದಿದೆ. ನಂಬಿಕೆ, ವಿಶ್ವಾಸದ ಮೇಲೆ ಧರ್ಮ ನಡೆಯುತ್ತಿದೆ. ▶ 6ನೇ ಪುಟಕ್ಕೆ

ಗುಜರಾತ್ ಚುನಾವಣೆ ನಂತರ ಸಂಪುಟ ವಿಸ್ತರಣೆ

ಬೆಂಗಳೂರು: ಗುಜರಾತ್ ವಿಧಾನಸಭಾ ಚುನಾವಣೆ ನಂತರ ರಾಜ್ಯ ಸಚಿವ ಸಂಪುಟ ವಿಸ್ತರಣೆಯಾಗುವ ಸಾಧ್ಯತೆಯಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಡಿ. 1 ಮತ್ತು 5 ರಂದು ಎರಡು ಹಂತಗಳಲ್ಲಿ ಗುಜರಾತ್ ವಿಧಾನಸಭೆಗೆ ಚುನಾವಣೆ ನಡೆಯಲಿದ್ದು, ಡಿ. 8 ರಂದು ಮತಗಳ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ.



ಸಂಪುಟ ವಿಸ್ತರಣೆ ಕುರಿತು ಈಗಾಗಲೇ ಮಾತನಾಡಿದ್ದೇನೆ. ವರಿಷ್ಠರು ಗುಜರಾತ್ ಚುನಾವಣೆಯಲ್ಲಿ ಬ್ಯುಸಿಯಾಗಿದ್ದಾರೆ. ಚುನಾವಣೆ ಮುಗಿದ ನಂತರ ಸಂಪುಟ ವಿಸ್ತರಣೆ ಕುರಿತ ಚರ್ಚೆಗೆ ನನ್ನನ್ನು ದೆಹಲಿಗೆ ಕರೆಯುತ್ತಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಸಂಪುಟ ವಿಸ್ತರಣೆ ಕುರಿತು ಚರ್ಚಿಸಲು ಬಿಜೆಪಿ ವರಿಷ್ಠರೊಂದಿಗೆ ಮಾತುಕತೆಗಾಗಿ ಶೀಘ್ರದಲ್ಲೇ ನವದೆಹಲಿಗೆ ತೆರಳುವುದಾಗಿ ಸಿಎಂ ಇತ್ತೀಚಿಗೆ ಹೇಳಿದ್ದರು.

ಮುಂದಿನ ವರ್ಷ ಕರ್ನಾಟಕ ವಿಧಾನಸಭಾ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಸಂಪುಟದಲ್ಲಿ ಹೊಸ ಮುಖಗಳಿಗೆ ಅವಕಾಶ ನೀಡಲು ಸಂಪುಟ ವಿಸ್ತರಣೆ, ಪುನರ್‌ರಚನೆ ಬಗ್ಗೆ ಆಕಾಂಕ್ಷಿಗಳು ಸಿಎಂ ಮೇಲೆ ಒತ್ತಡ ಹೇರುತ್ತಲೇ ಬಂದಿದ್ದಾರೆ. ಖಾಲಿಯಿರುವ ಆರು ಖಾತೆಗಳ ಭರ್ತಿಗೆ ಸಂಪುಟ ವಿಸ್ತರಣೆ ಅಥವಾ ಕೆಲವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡಲು ಸಂಪುಟ ಪುನರ್ ರಚನೆಯಾಗುವ ಸಾಧ್ಯತೆಯಿರುವುದಾಗಿ ಕೆಲವು ವರದಿಗಳು ಹೇಳಿವೆ.

ಗುಜರಾತಿನಂತೆಯೇ ರಾಜ್ಯದಲ್ಲಿಯೂ ಖಾತೆಗಳಲ್ಲಿ ಸಂಪೂರ್ಣವಾಗಿ ಬದಲಾವಣೆಯಾಗಬಹುದು ಎಂಬಂತಹ ಮಾತುಗಳು ಕೇಳಿಬರುತ್ತಿದೆ. ಚುನಾವಣೆಗಳು ಸಮೀಪಿಸುತ್ತಿರುವುದರಿಂದ ಇದು ತುಂಬಾ ತಡವಾಗಿದೆ ಎಂದು ಅನೇಕ ಆಕಾಂಕ್ಷಿಗಳು ಭಾವಿಸಿದ್ದಾರೆ.

ಜಾರಕಿಹೊಳಿ ಸಹೋದರರು ಜೆಡಿಎಸ್ ಸೇರ್ಪಡೆಗೆ ಸಿದ್ಧತೆ

- ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಭೇಟಿಯಾಗಿ ಚರ್ಚೆ
- ದಕ್ಷಿಣ ಭಾರತದ ಪ್ರಭಾವಿ ಸಿಎಂಗಳ ಸಲಹೆಯಂತೆ ರಮೇಶ್ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ ಮುಂದಿನ ರಾಜಕೀಯ ನಡೆ

ಬೆಂಗಳೂರು, ನ.8(ಕೆಎಂಶಿ)– ಮಾಜಿ ಸಚಿವ ಹಾಗೂ ಹಾಲಿ ಶಾಸಕರಾದ ರಮೇಶ್ ಜಾರಕಿಹೊಳಿ, ಬಾಲಚಂದ್ರ ಜಾರಕಿಹೊಳಿ ಸೇರಿದಂತೆ ಅವರ ಕುಟುಂಬದವರು ಹಾಗೂ ಅವರ ಬೆಂಬಲಿಗರು ಬಿಜೆಪಿ ತೊರೆದು ಜೆಡಿಎಸ್ ಸೇರಲು ಮುಂದಾಗಿದ್ದಾರೆ. ಸರ್ಕಾರ ಮತ್ತು ಪಕ್ಷ ತಮ್ಮನ್ನು ಕಡೆಗಾಣಿಸುತ್ತಿದೆ ಎಂದು ಈ ಕುಟುಂಬ ಪಕ್ಷ ತೊರೆದು ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಸೇರಲು ಸಿದ್ಧತೆ ನಡೆಸಿದ್ದಾರೆ.



ಕರ್ನಾಟಕ ಹಾಲು ಒಕ್ಕೂಟದ ಅಧ್ಯಕ್ಷರೂ ಆಗಿರುವ ಬಾಲಚಂದ್ರ ಜಾರಕಿಹೊಳಿ, ಜೆಡಿಎಸ್ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಜೊತೆ ಎರಡು ಮೂರು ಸುತ್ತಿನ ಮಾತುಕತೆ ನಡೆಸಿದ್ದಾರೆ. ಈ ಕುಟುಂಬ ಜೆಡಿಎಸ್ ಸೇರಲು ದಕ್ಷಿಣ ಭಾರತದ ಪ್ರಭಾವಿ ಮುಖ್ಯಮಂತ್ರಿಯೊಬ್ಬರು ಕೈಜೋಡಿಸಿದ್ದಾರೆ. ಬಿಜೆಪಿಯಿಂದ ತಮ್ಮ ಕುಟುಂಬಕ್ಕಾಗಿರುವ ಅನ್ಯಾಯಗಳನ್ನು ಕುಮಾರಸ್ವಾಮಿ ಅವರ ಮುಂದೆ ಎಳೆ ಎಳೆಯಾಗಿ ಬಿಡಿಸಿಟ್ಟಿರುವ ಬಾಲಚಂದ್ರ ಜಾರಕಿಹೊಳಿ, ಹಿಂದೆ ತಮ್ಮಿಂದ ನಿಮಗೆ ಆಗಿರುವ ತೊಂದರೆಯ ಬಗ್ಗೆ ಕ್ಷಮಿಸಿ ಎಂದು ಕೇಳಿಕೊಂಡಿದ್ದಾರೆ. ▶ 6ನೇ ಪುಟಕ್ಕೆ

ಮೈಸೂರಲ್ಲಿ ರಕ್ತ ಚಂದ್ರ 25 ನಿಮಿಷ ಗೋಚರ



ಚಿತ್ರ: ಲಕ್ಷ್ಮಿನಾರಾಯಣ ಯಾದವ್

ದಸರಾ ವಸ್ತುಪ್ರದರ್ಶನದಲ್ಲಿ ಗ್ರಹಣಗ್ರಸ್ತ ಚಂದ್ರನ ಚಿತ್ರಣವಿದು.


ಮೈಸೂರು,ನ.8(ಜಿಎ)–ಮೈಸೂರು ಸೇರಿದಂತೆ ರಾಜ್ಯದ ಹಲವೆಡೆ ರಕ್ತ ಚಂದ್ರ ಗ್ರಹಣ ಗೋಚರಿಸಿದ್ದು, ಅನೇಕ ಮಂದಿ ಖಗೋಳ ವಿಸ್ಮಯವನ್ನು ಕಣ್ತುಂಬಿಕೊಂಡರು. ದೀಪಾವಳಿ ಕಳೆದು 15 ದಿನಗಳ ನಂತರ ಸಂಭವಿಸಿದ ಚಂದ್ರ ಗ್ರಹಣ ಮೈಸೂರಿನಲ್ಲಿ ಮಂಗಳವಾರ ಸಂಜೆ 5.54ರಿಂದ 6.19ರವರೆಗೂ ಸರಿ ಸುಮಾರು 25 ನಿಮಿಷಗಳ ಕಾಲ ಗೋಚರಿಸಿದ್ದು, ಹಾಸನ, ಮಂಡ್ಯ, ಬೆಂಗಳೂರು, ಮಂಗಳೂರು, ಉಡುಪಿ, ಶಿವಮೊಗ್ಗ, ಬೀದರ್, ಹುಬ್ಬಳ್ಳಿ, ಕೊಪ್ಪಳ, ಧಾರವಾಡ, ಬೆಳಗಾವಿ, ರಾಯಚೂರು, ಕಲಬುರುಗಿ, ಕೋಲಾರ, ಬಳ್ಳಾರಿ, ವಿಜಯಪುರ, ಬಾಗಲಕೋಟೆ ಸೇರಿದಂತೆ ವಿವಿಧೆಡೆ ಗ್ರಹಣ ಗೋಚರಿಸಿದೆ.

ಮೈಸೂರಿನ ಚಿತ್ರಣ: ರಕ್ತ ಚಂದ್ರ ಗ್ರಹಣದ ಹಿನ್ನೆಲೆಯಲ್ಲಿ ಶ್ರದ್ಧಾವಂತರು ಮನೆಯಲ್ಲೇ ದೇವರ ನಾಮ ಸ್ಮರಣೆ ಮಾಡಿದರು. ಹಲವು ದೇವಾಲಯಗಳನ್ನು ಬೆಳಗ್ಗೆಯಿಂದಲೇ ಬಂದ್ ಮಾಡಲಾಗಿತ್ತು. ಚಾಮುಂಡೇಶ್ವರಿ ದೇವಾಲಯ ಸೇರಿದಂತೆ ಕೆಲ ದೇವಾಲಯಗಳಲ್ಲಿ ಮಧ್ಯಾಹ್ನ 1 ಗಂಟೆಯವರೆಗೂ ಭಕ್ತರಿಗೆ ದರ್ಶನ ಅವಕಾಶ ನೀಡಿ, ನಂತರ ನಿರ್ಬಂಧಿಸಲಾಯಿತು. ಮೈಸೂರಿನಲ್ಲಿ ಸಂಜೆ 5.54ರಿಂದ 6.19ವರೆಗೂ ರಕ್ತ ಚಂದ್ರ ಗ್ರಹಣ ಗೋಚರಿಸಿತು. ಸರಿ ಸುಮಾರು 25 ನಿಮಿಷಗಳ ಕಾಲ ಭಾಗಶಃ ಮೈಸೂರಿನಲ್ಲಿ ಚಂದ್ರ ಕೆಂಪು ಬಣ್ಣದಲ್ಲಿ ಕಾಣಿಸಿಕೊಂಡಿದ್ದು, ಮೈಸೂರಿಗರು ಗ್ರಹಣ ಕಣ್ತುಂಬಿಕೊಂಡರಲ್ಲದೆ ಕ್ಯಾಮರಾಗಳಲ್ಲಿ ಚಂದ್ರನ ಚಿತ್ರಣವನ್ನು ಸೆರೆಹಿಡಿದರು. ಚಂದ್ರ ಗ್ರಹಣದ ನಂತರ ತಾಯಿ ಚಾಮುಂಡೇಶ್ವರಿ ದೇವಾಲಯವನ್ನು ಶುದ್ಧೀಕರಣ ಮಾಡಿ, ಮೂಲ ದೇವರು ಹಾಗೂ ಉತ್ಸವ ಮೂರ್ತಿಗೆ ಅಭಿಷೇಕ ಮಾಡಿ, ಮಹಾಮಂಗಳಾರತಿ ನೆರವೇರಿಸಲಾಯಿತು. ನಗರದಲ್ಲಿರುವ ಎಲ್ಲಾ ದೇವಾಲಯಗಳಲ್ಲೂ ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಹಾಗೆಯೇ ಸಾರ್ವಜನಿಕರು ತಮ್ಮ ಮನೆಯನ್ನೆಲ್ಲಾ ಶುದ್ಧ ಮಾಡಿ, ದೇವರಿಗೆ ಪೂಜೆ ಸಲ್ಲಿಸಿ ತಾಜಾ ಆಹಾರ ಸಿದ್ಧಪಡಿಸಿಕೊಂಡು ಸೇವಿಸಿದರು.

ದೀಪಾವಳಿಯ 15 ದಿನದ ನಂತರ ಚಂದ್ರ ಗ್ರಹಣ ಗೋಚರಿಸುವುದು ವಾಡಿಕೆ. ಅದರಂತೆ ಈ ಬಾರಿಯೂ ಚಂದ್ರ ಗ್ರಹಣ ಗೋಚರಿಸಿದ್ದು, ಮೋಡ ಕವಿದ ವಾತಾವರಣ ಇಲ್ಲದೆ, ಎಲ್ಲರೂ ರಕ್ತ ಚಂದ್ರ ಗ್ರಹಣವನ್ನು ಕಣ್ತುಂಬಿಕೊಂಡರು. ಮೈಸೂರಿನಲ್ಲಿ 2017ರಲ್ಲಿ ಭಾಗಶಃ ಚಂದ್ರ ಗ್ರಹಣ ಗೋಚರಿಸಿತ್ತು. ಹಾಗೇ 2018 ಮತ್ತು 19ರಲ್ಲಿ ಸಂಪೂರ್ಣ ಚಂದ್ರ ಗ್ರಹಣ ಸಂಭವಿಸಿತ್ತು. ಈ ಬಾರಿ ಭಾಗಶಃ ಚಂದ್ರ ಗ್ರಹಣ ಗೋಚರಿಸಿದ್ದು, 2023ರಲ್ಲಿ ಭಾಗಶಃ ಗೋಚರಿಸಲಿದೆ. ಸಂಪೂರ್ಣ ಚಂದ್ರ ಗ್ರಹಣವು 2028ರಲ್ಲಿ ಗೋಚರಿಸುವ ಸಂಭವವಿದೆ ಎಂದು ಮೈಸೂರು ಆಸ್ಟ್ರೋನಾಮಿಕಲ್ ಸೊಸೈಟಿಯ ಸಂಚಾಲಕರಾದ ಡಾ.ಎಸ್.ಎ.ಮೋಹನ್ ಕೃಷ್ಣ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕನ್ನಡ ಚಿತ್ರರಂಗದ ಹಿರಿಯ ನಟ ಟಿ.ಎಸ್. ಲೋಹಿತಾಶ್ವ ವಿಧಿವಶ

ಬೆಂಗಳೂರು: ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಕನ್ನಡ ಚಿತ್ರರಂಗದ ಹಿರಿಯ ನಟ ಟಿ.ಎಸ್.ಲೋಹಿತಾಶ್ವ ಅವರು ಮಂಗಳವಾರ ನಿಧನರಾಗಿದ್ದಾರೆ.



80 ವರ್ಷದ ಲೋಹಿತಾಶ್ವ ಅವರಿಗೆ ಇತ್ತೀಚೆಗೆ ತೀವ್ರ ಹೃದಯಾಘಾತವಾಗಿತ್ತು. ತಕ್ಷಣ ಅವರನ್ನು ಕುಮಾರಸ್ವಾಮಿ ಲೇಔಟ್‌ನಲ್ಲಿರುವ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಜೀವರಕ್ಷಕ ಸಾಧನ (ವೆಂಟಿಲೇಟರ್) ಅಳವಡಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ವಿಧಿವಶರಾಗಿದ್ದಾರೆ. ಲೋಹಿತಾಶ್ವ ಅವರು ಚಿತ್ರ ನಟ, ನಾಟಕಕಾರ ಮತ್ತು ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದು, 500ಕ್ಕೂ ಹೆಚ್ಚು ಕನ್ನಡ ಚಿತ್ರಗಳಲ್ಲಿ, ರಂಗ ನಾಟಕಗಳು ಮತ್ತು ದೂರದರ್ಶನ ಧಾರಾವಾಹಿಗಳಲ್ಲಿ ನಟಿಸಿದ್ದಾರೆ. ಲೋಹಿತಾಶ್ವರಿಗೆ ಮೂವರು ಮಕ್ಕಳು, ಅವರಲ್ಲಿ ಕನ್ನಡ ಚಿತ್ರರಂಗದಲ್ಲಿ ಉತ್ತಮ ಖಳ ನಟನಾಗಿ ಗುರುತಿಸಿಕೊಂಡಿರುವ ಶರತ್ ಲೋಹಿತಾಶ್ವ ಕೂಡ ಒಬ್ಬರು. ವತ್ಸಲಾ ಅವರ ಪತ್ನಿಯ ಹೆಸರು. ಅಭಿಮನ್ಯು, ಏಕೆ 47, ಅವತಾರ ಪುರುಷ, ಚಿನ್ನ, ಹೊಸ ನೀರು, ಗಜೇಂದ್ರ, ವಿಶ್ವ ಪ್ರತಾಪ್, ಪೊಲೀಸ್ ಲಾಕಪ್, ರೆಡಿಮೇಡ್ ಗಂಡ, ಸ್ನೇಹಲೋಕ, ಸುಂದರಕಾಂಡ, ಸಿಂಹದ ಮರಿ, ಮೂರು ಜನ್ಮ, ಸಾಂಗ್ಲಿಯಾನ, ಟೈಮ್ ಬಾಂಬ್, ಲಾಕಪ್ ಡೆತ್, ಸಂಭವಾಮಿ ಯುಗೇ ಯುಗೇ, ರಣಚಂಡಿ, ಸಮಯದ ಗೊಂಬೆ, ಸಂಗ್ರಾಮ, ನ್ಯೂ ಡೆಲ್ಲಿ, ಸಾರಥಿ ಸೇರಿದಂತೆ ಸಾಕಷ್ಟು ಜನಪ್ರಿಯ ಸಿನಿಮಾಗಳಲ್ಲಿ ಅವರು ನಟಿಸಿದ್ದಾರೆ.

ಇನ್ಫೋಸಿಸ್, ಬಿವಿಬಿ ಜಂಟಿ ಆಶ್ರಯದ ಸಾಂಸ್ಕೃತಿಕ ಉತ್ಸವದ ಚಿತ್ರಕಲಾ ಶಿಬಿರಕ್ಕೆ ಚಾಲನೆ

ಕುಂಚದ ಸ್ಪರ್ಶದಲ್ಲಿ ಭಾರತೀಯ ಹಬ್ಬಗಳ ಚಿತ್ತಾರ ಅನಾವರಣ

ಮೂರು ದಿನಗಳ ಶಿಬಿರ ಉದ್ಘಾಟಿಸಿದ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ

ಮೈಸೂರು,ನ.8(ಪಿಎಂ)– ಮೈಸೂರು ಅರಮನೆ ಉತ್ತರ ದ್ವಾರದ ಚಾಮರಾಜ ಒಡೆಯರ್ ವೃತ್ತದಲ್ಲಿ ಅಂಬಾರಿ ಹೊತ್ತ ಗಜರಾಜ... ಬೆಂಗಳೂರು ಕರಗ ಮಹೋತ್ಸವ... ಸೇರಿದಂತೆ ಭಾರತೀಯ ಪರಂಪರೆಯ ಹಬ್ಬಗಳ ಸಡಗರವು ಕಲಾವಿದರ ಕುಂಚದಲ್ಲಿ ಚಿತ್ತಾಕರ್ಷಕವಾಗಿ ಅನಾವರಣಗೊಂಡಿದ್ದವು.

ಮೈಸೂರಿನ ರಂಗಾಯಣದ ಅಂಗಳದಲ್ಲಿ ಮಂಗಳವಾರ ಇಂತಹ ಮನಮೋಹಕ ಚಿತ್ರಕಲೆಗಳು ಮನ ತಣಿಸುತ್ತಿದ್ದವು. ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ 'ಭಾರತೀಯ ಹಬ್ಬಗಳು' ಶೀರ್ಷಿಕೆಯಡಿ ಮೈಸೂರಿನ ಕಲಾಮಂದಿರದಲ್ಲಿ ನಡೆಯುತ್ತಿರುವ (ನ.4ರಿಂದ 10ರವರೆಗೆ) ಸಾಂಸ್ಕೃತಿಕ ಉತ್ಸವದ ಪ್ರಯುಕ್ತ ರಂಗಾಯಣದ ಆವರಣದಲ್ಲಿ ಹಮ್ಮಿಕೊಂಡಿರುವ (ನ.8ರಿಂದ 10) ಕಲಾ ಶಿಬಿರದಲ್ಲಿ (ಚಿತ್ರಕಲಾ ಶಿಬಿರ) ಭಾರತದ ವೈವಿಧ್ಯಮಯ ಹಬ್ಬಗಳ ಸಂಭ್ರಮ ಚಿತ್ರಕಲೆಯಲ್ಲಿ ಮೂಡಿದ್ದವು.

ಹಬ್ಬದ ಸಂಭ್ರಮದಲ್ಲಿ ಯಕ್ಷಗಾನ ಪ್ರದರ್ಶನ... ಕಾಶಿಯಲ್ಲಿ ಶಿವರಾತ್ರಿ ಹಬ್ಬದಲ್ಲಿ ತಲ್ಲೀನರಾದ ನಾಗಸಾಧು... ಪಶ್ಚಿಮ ಬಂಗಾಳದ ದುರ್ಗಾ ಪೂಜೆ.. ಬೆಂಗಳೂರು ಕರಗ ಮಹೋತ್ಸವ... ಗಣೇಶ ಉತ್ಸವದ ಸಡಗರ... ಮಲೆ ಮಹದೇಶ್ವರ ಬೆಟ್ಟದಲ್ಲಿ ಮಾದಪ್ಪನ ಜಾತ್ರೆ... ಹೀಗೆ ನಮ್ಮ ನೆಲದ ಹತ್ತು ಹಲವು ಹಬ್ಬಗಳ ದೃಶ್ಯಾವಳಿಗಳು ಚಿತ್ರಕಲೆಯಲ್ಲಿ ಹೊರಹೊಮ್ಮಿದ್ದವು.

ಕಲಾವಿದರು ತಮ್ಮ ಕಲ್ಪನಾ ಲೋಕದಲ್ಲಿ ಕಂಡಂತೆ ಹಬ್ಬಗಳ ದೃಶ್ಯಗಳನ್ನು ವರ್ಣರಂಜಿತವಾಗಿ ಮೂಡಿಸಿ ಗಮನ ಸೆಳೆದರು. ಇದಕ್ಕೂ ಮುನ್ನ ರಂಗಾಯಣದ ಬಿ.ವಿ. ಕಾರಂತ ಶಿಲ್ಪವನದ ಕುಟೀರದಲ್ಲಿ ಚಿತ್ರಕಲಾ ಶಿಬಿರಕ್ಕೆ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಚಾಲನೆ ನೀಡಿದರು. ಕುಂಚವನ್ನಿಡಿದು ಗಣೇಶನ ಚಿತ್ರ ಬಿಡಿಸುವ ಮೂಲಕ ಚಿತ್ರಕಲಾ ಶಿಬಿರಕ್ಕೆ ಅವರು ಚಾಲನೆ ನೀಡಿದರು.



ಮೈಸೂರು ರಂಗಾಯಣದ ಬಿ.ವಿ.ಕಾರಂತ ಶಿಲ್ಪವನದ ಕುಟೀರದಲ್ಲಿ ಮಂಗಳವಾರ ಚಿತ್ರಕಲಾ ಶಿಬಿರಕ್ಕೆ ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಗಣೇಶನ ಚಿತ್ರ ಬಿಡಿಸುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಬಿವಿಬಿ ಒಂದು ಪ್ರತಿಷ್ಠಿತ ಸಂಸ್ಥೆ. ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕವಾಗಿ ಅದ್ಭುತ ಕೆಲಸಗಳನ್ನು ಮಾಡುತ್ತಿದೆ. ಇಂತಹ ಸಂಸ್ಥೆಯ ಜೊತೆಗೆ ನನಗೆ ನಿಕಟ ಸಂಪರ್ಕ ವಿದೆ. ಕೊಡಗಿನಲ್ಲಿ ವಿವಿಧ ಸಂಸ್ಥೆಗಳ ಸಹಯೋಗದೊಂದಿಗೆ ಬಿವಿಬಿ ಕಾರ್ಯಾಗಾರ ನಡೆಸಿದಾಗ, ನಾನಲ್ಲಿ ನಾಟಕ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ ಎಂದರು.

ಕಳೆದ 4 ದಿನಗಳಿಂದ ಬಿವಿಬಿ ನಡೆಸುತ್ತಿರುವ ಸಾಂಸ್ಕೃತಿಕ ಉತ್ಸವ ಅದ್ಭುತವಾಗಿ ಮೂಡಿಬರುತ್ತಿದೆ. ಇಂದಿನಿಂದ ನಮ್ಮ ರಂಗಾಯಣ ಆವರಣದಲ್ಲಿ ಈ ಉತ್ಸವದ ಭಾಗವಾಗಿ ಕಲಾಶಿಬಿರ ಆರಂಭಗೊಂಡಿದ್ದು, ಶಿಬಿರಾರ್ಥಿಗಳು ಇಲ್ಲಿನ ವಾತಾವರಣದಿಂದ ಸ್ಫೂರ್ತಿ ಪಡೆದು ಚಂದದ ಚಿತ್ರಗಳನ್ನು ರಚನೆ ಮಾಡುವಂತಾಗಲಿದೆ ಎಂದು ಶುಭ ಹಾರೈಸಿದರು. ಬಿವಿಬಿ ಬೆಂಗಳೂರು ಜಂಟಿ ನಿರ್ದೇಶಕಿ ನಾಗಲಕ್ಷ್ಮೀ ಕೆ.ರಾವ್ ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಷುಯಲ್ ಆರ್ಟ್ ಮತ್ತು ರವಿವರ್ಮ ಆರ್ಟ್ ಇನ್ಸ್‌ಟಿಟ್ಯೂಟ್‌ನ ತಲಾ ಐದು ವಿದ್ಯಾರ್ಥಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ. ಶಿಬಿರವು ಬಿವಿಬಿ ಬೆಂಗಳೂರಿನ ಚಿತ್ರಕಲಾ ಶಿಕ್ಷಕಿ ಇನ್ನಾಉಮ್ಮೇಹಾನಿ ಅವರ ಮಾರ್ಗದರ್ಶನದಲ್ಲಿ ನಡೆಯಲಿದೆ. ಇವರು ಹೆಸರಾಂತ ಚಿತ್ರಕಲಾವಿದರು ಎಂದರು.

ಮೂರು ದಿನಗಳೂ ಇದೇ ಚಿತ್ರಕಲಾ ವಿದ್ಯಾರ್ಥಿಗಳು ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ. 'ಭಾರತೀಯ ಹಬ್ಬಗಳು' ವಿಷಯದಡಿ ಚಿತ್ರರಚನೆ ಮಾಡಬೇಕಿದೆ. ಭಾರತದಲ್ಲಿ ನಡೆಯುವ ಹಬ್ಬಗಳಲ್ಲಿ ಯಾವುದಾದರೂ ಆಗಬಹುದು. ಇದಕ್ಕೆ ಜಾತಿ–ಮತದ ಮಿತಿ ಇಲ್ಲ. ಯಾವುದೇ ಧರ್ಮದ ಹಬ್ಬಗಳನ್ನಾದರೂ ಕುರಿತು ಚಿತ್ರ ರಚನೆ ಮಾಡಬಹುದು. ಒಂದು ದಿನದಲ್ಲಿ ಒಂದು ಚಿತ್ರಕಲೆ ರಚಿಸಿ ಮುಗಿಸಲೂಬಹುದು ಅಥವಾ ಮೂರು ದಿನಗಳಲ್ಲಿ ಮೂರ್‍ನಾಲ್ಕು ಚಿತ್ರಗಳನ್ನು ರಚಿಸಲೂಬಹುದು. ಇಷ್ಟೇ ಚಿತ್ರಕಲೆ ರಚಿಸಬೇಕೆಂಬ ಮಿತಿಯಿಲ್ಲ ಎಂದು ವಿವರಿಸಿದರು.

ಮೂವರ ಹೊರತಾಗಿ ಉಳಿದವರು ವಾಟರ್ ಪೇಂಟಿಂಗ್ ವಿಧಾನದಲ್ಲಿ ಚಿತ್ರಕಲೆ ರಚಿಸಲಿದ್ದಾರೆ. ಉಳಿದ ಮೂವರು ಆಯಿಲ್ ಪೇಂಟಿಂಗ್ ಬಳಸಲಿದ್ದಾರೆ. ಇದು ಸ್ಪರ್ಧೆಯಲ್ಲ. ಬಿವಿಬಿಯಿಂದ ಎಲ್ಲರಿಗೂ ಗೌರವಧನ ನೀಡಲಾಗುವುದು. ಜೊತೆಗೆ ಈಗಾಗಲೇ ಪೇಂಟಿಂಗ್‌ಗೆ ಅಗತ್ಯವಿರುವ ಸಾಮಗ್ರಿಗಳ ಕಿಟ್‌ಗಳನ್ನು ಎಲ್ಲರಿಗೂ ವಿತರಿಸಲಾಗಿದೆ. ಬಿವಿಬಿ ಬೆಂಗಳೂರಿನ ಆರ್ಟ್ ಗ್ಯಾಲರಿಯಲ್ಲಿ ಇಲ್ಲಿ ರಚನೆಗೊಳ್ಳುವ ಚಿತ್ರಕಲೆಗಳನ್ನು ಪ್ರದರ್ಶಿಸಲಾಗುವುದು. ಜೊತೆಗೆ ಕೆಲವು ಕಾರ್ಯಕ್ರಮಗಳ ಸಂದರ್ಭದಲ್ಲೂ ಇವುಗಳನ್ನು ಪ್ರದರ್ಶನಕ್ಕಿಡಲಾಗುವುದು ಎಂದರು.

ರವಿವರ್ಮ ಆರ್ಟ್ ಇನ್ಸ್‌ಟಿಟ್ಯೂಟ್‌ನ ವಿನೋದ್, ಚಂದನ್, ನಾಗಶಯನ, ನಾಗರಾಜು, ಹನುಮಂತ ನಾಯಕ್, ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಷುಯಲ್ ಆರ್ಟ್‌ನ ಪ್ರಗ್ಯಾ ಗುಪ್ತ, ತೇಜಸ್ವಿನಿ, ಬಸವರಾಜ್, ಚೇತನ್, ಸೋಮಶೇಖರ್ ಶಿಬಿರದಲ್ಲಿ ಪಾಲ್ಗೊಂಡಿದ್ದಾರೆ. ರಂಗಾಯಣ ಉಪ ನಿರ್ದೇಶಕಿ ನಿರ್ಮಲ ಮಠಪತಿ, ಚಿತ್ರಕಲಾ ಶಿಕ್ಷಕಿ ಇನ್ನಾ ಉಮ್ಮೇಹಾನಿ ಮತ್ತಿತರರಿದ್ದರು.

ಬಹುರೂಪಿಗೂ ಚಿತ್ರ ರಚಿಸಿ ಕೊಡಿ...


"ಬಹುರೂಪಿ ರಂಗೋತ್ಸವ ರಂಗಾಯಣದ ಪ್ರತಿಷ್ಠಿತ ಉತ್ಸವಗಳಲ್ಲಿ ಒಂದಾಗಿದ್ದು, ಈ ಉತ್ಸವದಲ್ಲಿಯೂ ಚಿತ್ರಕಲಾ ಪ್ರದರ್ಶನ ಹಮ್ಮಿಕೊಳ್ಳಲಾಗುತ್ತದೆ. 2022ನೇ ಸಾಲಿನ ಬಹುರೂಪಿ ರಂಗೋತ್ಸವ ಡಿ.8ರಿಂದ 15ರವರೆಗೆ 'ಭಾರತೀಯತೆ' ಶೀರ್ಷಿಕೆಯಡಿ ನಡೆಯಲಿದೆ. ಇಂದಿನ ಶಿಬಿರಾರ್ಥಿಗಳಲ್ಲಿ ಆಸಕ್ತರು 'ಭಾರತೀಯತೆ' ಶೀರ್ಷಿಕೆಗೆ ಪೂರಕವಾಗಿ ಚಿತ್ರಕಲೆ ರಚಿಸಿಕೊಟ್ಟರೆ, ಅವುಗಳನ್ನು ಮುಂದಿನ ತಿಂಗಳು ನಡೆಯುವ ಬಹುರೂಪಿಯಲ್ಲಿ ಪ್ರದರ್ಶನಕ್ಕಿಡಲಾಗುವುದು.

–ಅಡ್ಡಂಡ ಸಿ.ಕಾರ್ಯಪ್ಪ, ನಿರ್ದೇಶಕ, ರಂಗಾಯಣ

ನ.10ರಂದು ಚಿತ್ರಕಲೆಗಳು ವೀಕ್ಷಣೆಗೆ ಮುಕ್ತ...


"ಮೂರು ದಿನಗಳಲ್ಲಿ ರಚನೆಗೊಂಡ ಚಿತ್ರಕಲೆಗಳನ್ನು ಸಾರ್ವಜನಿಕರ ವೀಕ್ಷಣೆಗಾಗಿ ನ.10ರಂದು ಸಂಜೆ 5ಕ್ಕೆ ಕಲಾಮಂದಿರ ಮುಂಭಾಗ ಪ್ರದರ್ಶನಕ್ಕಿಡಲಾಗುವುದು. ಶಿಬಿರಕ್ಕೂ ಭೇಟಿ ನೀಡಿ ಚಿತ್ರಕಲೆಗಳನ್ನು ವೀಕ್ಷಣೆ ಮಾಡಲು ಸಾರ್ವಜನಿಕರಿಗೆ ಅವಕಾಶವಿದೆ. ಪ್ರತಿದಿನ ಬೆಳಗ್ಗೆ 10.30ರಿಂದ ಮಧ್ಯಾಹ್ನ 3.30ರವರೆಗೆ ಶಿಬಿರ ನಡೆಯಲಿದೆ. –ನಾಗಲಕ್ಷ್ಮೀ ಕೆ.ರಾವ್, ಜಂಟಿ ನಿರ್ದೇಶಕರು, ಬಿವಿಬಿ, ಬೆಂಗಳೂರು.







ಶಿಬಿರಾರ್ಥಿಗಳು ಮೊದಲ ದಿನ ರಚಿಸಿದ ಚಿತ್ರಕಲೆಗಳು.





ಇಂದು ಆಟೋ ಚಾಲಕರಿಗೆ ಸನ್ಮಾನ

ಮೈಸೂರು, ನ.8– ಲಯನ್ಸ್ ಬ್ಲಡ್ ಸೆಂಟರ್ ಹಾಗೂ ಜೀವಧಾರ ರಕ್ತ ನಿಧಿ ಕೇಂದ್ರ ವತಿಯಿಂದ ಕನ್ನಡ ರಾಜ್ಯೋತ್ಸವ ಹಾಗೂ ಕರಾಟೆ ಕಿಂಗ್ ಶಂಕರ್‌ನಾಗ್ ಜನ್ಮ ದಿನಾಚರಣೆ ಅಂಗವಾಗಿ ಹಿರಿಯ ಆಟೋ ಚಾಲಕರಿಗೆ ಸನ್ಮಾನ ಕಾರ್ಯಕ್ರಮವನ್ನು ನಾಳೆ (ನ.9) ಬೆಳಗ್ಗೆ 11 ಗಂಟೆಗೆ ನ್ಯೂ ಸಯ್ಯಾಜಿರಾವ್ ರಸ್ತೆಯ ಜೀವಧಾರ ರಕ್ತನಿಧಿ ಕೇಂದ್ರದ ಸಮೀಪ ಹಮ್ಮಿಕೊಳ್ಳಲಾಗಿದೆ. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಶಾಸಕ ಎಲ್.ನಾಗೇಂದ್ರ, ಮಂಡಿ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ರಘು ಉಪಸ್ಥಿತರಿರುತ್ತಾರೆ ಎಂದು ನಿರ್ದೇಶಕ ಗಿರೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ರೈತರ ಪ್ರತಿಭಟನೆ

ಮೈಸೂರು, ನ.8– ರೈತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಮೈಸೂರು ಜಿಲ್ಲಾ ಘಟಕದ ವತಿಯಿಂದ ನಾಳೆ(ನ.9) ಮಧ್ಯಾಹ್ನ 12 ಗಂಟೆಗೆ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ನೇತೃತ್ವ ದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಕಬ್ಬಿಗೆ ಟನ್‌ಗೆ 4,500 ರೂ ಹಾಗೂ ಭಾಗ್ಯಜ್ಯೋತಿ, ಕುಟೀರ ಜ್ಯೋತಿ, ವಿದ್ಯುತ್ ಬಾಕಿ ಮನ್ನಾ ಮಾಡುವಂತೆ ಒತ್ತಾಯಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರೈತ ಮುಖಂಡ ಮರಂಕಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಚಾಮುಂಡೇಶ್ವರಿಯಲ್ಲಿ ಕಮಲ ಅರಳಿಸುವುದು ಶತಸಿದ್ಧ

ಬೀರಿಹುಂಡಿ ಜಿಲ್ಲಾ ಪಂಚಾಯತ್ ಕಾರ್ಯಕರ್ತರ ಸಭೆಯಲ್ಲಿ ಬಿಜೆಪಿ ನಗರ ಅಧ್ಯಕ್ಷ ಶ್ರೀವತ್ಸ ವಿಶ್ವಾಸ

ಮೈಸೂರು, ನ.8– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ 2023ರ ಚುನಾವಣೆಯಲ್ಲಿ ಕಮಲ ಅರಳಿಸುವುದೇ ನಮ್ಮ ಗುರಿ ಎಂದು ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ ಅತ್ಯಂತ ವಿಶ್ವಾಸದಿಂದ ನುಡಿದಿದ್ದಾರೆ.

ಕ್ಷೇತ್ರದ ಬೀರಿಹುಂಡಿ ಜಿಲ್ಲಾ ಪಂಚಾಯತ್ ಭಾಗದ ಕಾರ್ಯಕರ್ತರು ಹಾಗೂ ಬೂತ್ ಪ್ರಮುಖರ ಸಭೆಯಲ್ಲಿ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಭಾರತೀಯ ಜನತಾ ಪಾರ್ಟಿ ತನ್ನದೇ ಆದ ಪ್ರಭಾವ ಹೊಂದಿದ್ದು, ಕಳೆದೆರಡು ಚುನಾವಣೆಗಳಲ್ಲಿ ಕೆಲವು ರಾಜಕೀಯ ವ್ಯತ್ಯಾಸಗಳಿಂದ ಗಂಭೀರ ಸ್ಪರ್ಧೆ ಮಾಡಲು ಸಾಧ್ಯವಾಗಿರಲಿಲ್ಲ. ಆದರೆ 2023ರ ಚುನಾವಣೆಯಲ್ಲಿ ಪಕ್ಷ ಒಬ್ಬ ಸಮರ್ಥ ಅಭ್ಯರ್ಥಿಯನ್ನು ಕಣಕ್ಕಿಳಿಸಿ, ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷಗಳಿಗೆ ಪೈಪೋಟಿ ನೀಡಲು ಬೇಕಾದ ಎಲ್ಲಾ ತಯಾರಿಯನ್ನು ಮಾಡಿಕೊಳ್ಳಲಾಗುತ್ತಿದೆ ಎಂದರು.

ಚಾಮುಂಡೇಶ್ವರಿ ಕ್ಷೇತ್ರದ ನಿಕಟಪೂರ್ವ ಅಧ್ಯಕ್ಷ ಹಾಗೂ ಮುಖಂಡರಾದ ಎನ್. ಅರುಣ್ ಕುಮಾರ್ ಗೌಡ ಮಾತನಾಡಿ, ಕ್ಷೇತ್ರದಲ್ಲಿ ಜೆಡಿಎಸ್ ಶಾಸಕರು ಯಾವುದೇ ರೀತಿಯ ಮಹತ್ವದ ಅಭಿವೃದ್ಧಿ ಯೋಜನೆ ತರಲು ವಿಫಲವಾಗಿರುವುದು ಮತದಾರರ ಗಮನದಲ್ಲಿದೆ. ಅವರ ಪಕ್ಷದಲ್ಲೇ ಭಿನ್ನಮತವಿರುವುದು ಜಗಜ್ಜಾಹೀರಾಗಿದೆ.



ಇಂತಹ ಸಂದರ್ಭದಲ್ಲಿ ಪಕ್ಷದ ವತಿಯಿಂದ ನಾವೆಲ್ಲ ಕಾರ್ಯಕರ್ತರು ಒಮ್ಮತದಿಂದ ಕ್ಷೇತ್ರದ ಪ್ರವಾಸ ಮಾಡುತ್ತಿದ್ದೇವೆ. ಪ್ರತಿ ಬೂತ್ ಸಮಿತಿಗಳನ್ನು ಪರಿಶೀಲನೆ ಮಾಡಿ ಬೂತ್ ಸಶಕ್ತಿಕರಣ ಕಾರ್ಯಕ್ರಮಕ್ಕೆ ಈಗಾಗಲೇ ಚಾಲನೆ ನೀಡಿದ್ದೇವೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳು ಒಂದಲ್ಲ ಒಂದು ರೀತಿಯಲ್ಲಿ ಪ್ರತಿ ಮನೆಮನೆಗೂ ತಲುಪಿವೆ. ಇದು ಬಿಜೆಪಿಗೆ ವರದಾನವಾಗಲಿದೆ. 2023ರ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಗೆಲುವು ನಿಶ್ಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕ್ಷೇತ್ರದ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್ ಮಾತನಾಡಿ, ಕ್ಷೇತ್ರದಲ್ಲಿ ಬಿಜೆಪಿಗೆ ಪೂರಕ ವಾತಾವರಣವಿದ್ದು, ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಸಂಘಟಿತರಾಗಬೇಕು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳ ಬಗ್ಗೆ ಪ್ರತಿ ಮನೆಮನೆಗೂ ಮಾಹಿತಿಯನ್ನು ನೀಡಿ ಮತದಾರರನ್ನು ಜಾಗೃತಿಗೊಳಿಸಬೇಕು ಎಂದು ಕರೆ ನೀಡಿದರು.

ಇದೇ ವೇಳೆ ಬಿಜೆಪಿ ನಗರ ಜಿಲ್ಲಾಧ್ಯಕ್ಷ ಶ್ರೀವತ್ಸ ಅವರನ್ನು ಬೀರಿಹುಂಡಿ ಭಾಗದ ಕಾರ್ಯಕರ್ತರು ಅಭಿನಂದಿಸಿದರು. ಸಭೆಯಲ್ಲಿ ಮಾಜಿ ಜಿಲ್ಲಾಧ್ಯಕ್ಷ ಎಸ್.ಡಿ.ಮಹೇಂದ್ರ 2018ರ ಕ್ಷೇತ್ರದ ಅಭ್ಯರ್ಥಿ ಎಸ್.ಆರ್. ಗೋಪಾಲ್‌ರಾವ್, ನಗರ ಕಾರ್ಯದರ್ಶಿ ನಂದಕುಮಾರ್, ಬೀರಿಹುಂಡಿ ಮಹಾಶಕ್ತಿ ಕೇಂದ್ರದ ಬಿಜೆಪಿ ಅಧ್ಯಕ್ಷ ಸೋಮಶೇಖರ್, ಪ್ರಧಾನ ಕಾರ್ಯದರ್ಶಿ ಮರಟಿಕ್ಯಾತನಹಳ್ಳಿ ಕೃಷ್ಣಮಹದೇವು, ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಈರಪ್ಪ ಹಾಗೂ ಮುಖಂಡರಾದ ರವಿಕುಮಾರ್, ದಾಸನಕೊಪ್ಪಲು ಕೆಂಚಪ್ಪ ಚಂದ್ರಶೇಖರ್, ಮಾಯಾ ಶಾನ್‌ಬಾಗ್, ರೈತ ಮೋರ್ಚಾ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಪ್ಪ, ಸೋಮಣ್ಣ, ನಿಂಗರಾಜು, ಪ್ರಕಾಶ್, ಮೋಹನ್, ಸಿದ್ದೇಗೌಡ, ನಾಗರಾಜು, ಚನ್ನಿಗಸ್ವಾಮಿ ಭಾಗವಹಿಸಿದ್ದರು.

ಮೈಸೂರು ಜಿಲ್ಲಾ ಸೈಕ್ಲಿಂಗ್ ತಂಡ ರಾಜ್ಯ ಚಾಂಪಿಯನ್ಸ್

ಮೈಸೂರಿನ 8 ಸೈಕ್ಲಿಸ್ಟ್‌ಗಳು ರಾಷ್ಟ್ರ ಮಟ್ಟಕ್ಕೆ ಆಯ್ಕೆ

ಮೈಸೂರು, ನ.8– ಕರ್ನಾಟಕ ಅಮ್ಯೂರ್ ಸೈಕ್ಲಿಂಗ್ ಅಸೋಸಿಯೇಷನ್ ಹಾಗೂ ಬೀದರ್ ಡಿಸ್ಟ್ರಿಕ್ ಅಮೆಚೂರ್ ಸೈಕ್ಲಿಂಗ್ ವತಿಯಿಂದ ನವೆಂಬರ್ 5 ಹಾಗೂ 6 ರಂದು ಬೀದರ್‌ನಲ್ಲಿ ನಡೆದ 17ನೇ ರಾಜ್ಯ ಮೌಂಟೈನ್ ಬೈಕಿಂಗ್ ಚಾಂಪಿಯನ್ ಶಿಪ್ ನಲ್ಲಿ ಮೈಸೂರು ಜಿಲ್ಲೆಯ 8 ಸೈಕ್ಲಿಸ್ಟ್‌ಗಳು 7 ಚಿನ್ನ, 5 ಬೆಳ್ಳಿ, 2 ಕಂಚು ಪಡೆದು 53 ಅಂಕ ಗಳಿಸುವ ಮೂಲಕ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಬೈಕಿಂಗ್ ಚಾಂಪಿಯನ್‌ಶಿಪ್‌ನಲ್ಲಿ 14 ವರ್ಷದೊಳಗಿನ ಬಾಲಕರ ಸ್ಪರ್ಧೆಯಲ್ಲಿ ರುಚಿರ್. ಸಿ ಗುಂಪು ಸ್ಪರ್ಧೆಯಲ್ಲಿ 1 ಚಿನ್ನದ ಪದಕ, ವೈಯಕ್ತಿಕ ಟೈಮ್ ಟ್ರಯಲ್ (IIT) ನಲ್ಲಿ 1 ಬೆಳ್ಳಿ ಪದಕ ಪಡೆದಿರುತ್ತಾರೆ. ಹಾಗೂ ಆಶಿಶ್ ಪೌವು ವೈಯಕ್ತಿಕ ಟೈಮ್ ಟ್ರಯಲ್‌ನಲ್ಲಿ 1 ಕಂಚು ಪಡೆದಿದ್ದು, 14 ವರ್ಷದೊಳಗಿನ ಬಾಲಕಿಯರ ಚಾಂಪಿಯನ್ ಶಿಪ್ ನಲ್ಲಿ ಆಹಾನಾ ಕಿರಣ್ ಜಿ.ಆರ್ ವೈಯಕ್ತಿಕ ಟೈಮ್ ಟ್ರಯಲ್‌ನಲ್ಲಿ 1 ಬೆಳ್ಳಿ ಹಾಗೂ ಗುಂಪು ಸ್ಪರ್ಧೆಯಲ್ಲಿ 1 ಬೆಳ್ಳಿ ಪದಕ ಪಡೆದಿರುತ್ತಾರೆ

16 ವರ್ಷದೊಳಗಿನ ಬಾಲಕರ ಸ್ಪರ್ಧೆಯಲ್ಲಿ ಸಮರ್ಪಣ್ ಜೈನ್ ವೈಯಕ್ತಿಕ ಟೈಮ್ ಟ್ರಯಲ್‌ನಲ್ಲಿ 1 ಚಿನ್ನ, ಗುಂಪು ಸ್ಪರ್ಧೆಯಲ್ಲಿ 1 ಚಿನ್ನ ಹಾಗೂ ಧನಂಜಯ್ ಎಸ್ ತಿಪ್ಪನವರ್ ವೈಯಕ್ತಿಕ ವಿಭಾಗದಲ್ಲಿ 1 ಬೆಳ್ಳಿ, ಗುಂಪು ಸ್ಪರ್ಧೆಯಲ್ಲಿ 1 ಬೆಳ್ಳಿ ಪದಕ ಪಡೆದಿರುತ್ತಾರೆ. 16 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ನಾಗಸಿರಿ ಹೆಚ್.ಎನ್ ವೈಯಕ್ತಿಕ ಟೈಮ್ ಟ್ರಯಲ್‌ನಲ್ಲಿ 1 ಚಿನ್ನ , ಗುಂಪು ಸ್ಪರ್ಧೆಯಲ್ಲಿ 1 ಚಿನ್ನ ಗಳಿಸಿರುತ್ತಾರೆ 18 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಲಕ್ಷ್ಮೀಶ್ ಹೆಚ್.ಆರ್ ವೈಯಕ್ತಿಕ ಟೈಮ್ ಟ್ರಯಲ್‌ನಲ್ಲಿ 1 ಚಿನ್ನ, ಗುಂಪು ಸ್ಪರ್ಧೆಯಲ್ಲಿ 1 ಕಂಚು ಪಡೆದಿದ್ದಾರೆ. 23 ವರ್ಷದೊಳಗಿನ ಪುರುಷರ ವಿಭಾಗದಲ್ಲಿ ವೈಶಾಕ್ ಕೆ.ವಿ ವೈಯಕ್ತಿಕ ಟೈಮ್ ಟ್ರಯಲ್‌ನಲ್ಲಿ 1 ಚಿನ್ನ ಗಳಿಸಿರುತ್ತಾರೆ. 17ನೇ ರಾಜ್ಯ ಮೌಂಟೇನ್ ಬೈಕಿಂಗ್ ಚಾಂಪಿಯನ್‌ಶಿಪ್‌ನ "ಒಟ್ಟಾರೆ ಚಾಂಪಿಯನ್" ಪ್ರಶಸ್ತಿಯನ್ನು ಮೈಸೂರು ಜಿಲ್ಲಾ ಸೈಕ್ಲಿಂಗ್ ತಂಡ ತನ್ನದಾಗಿಸಿಕೊಂಡಿರುತ್ತದೆ. ಮೇಲಿನ ಯಶಸ್ಸಿಗೆ ಮೈಸೂರು ಜಿಲ್ಲಾ ಅಮ್ಯೂರ್ ಸೈಕ್ಲಿಂಗ್ ತಂಡದ ತರಬೇತುದಾರರು ಏಕಲವ್ಯ ಪ್ರಶಸ್ತಿ ವಿಜೇತ ಲೋಕೇಶ್ ನರಸಿಂಹಚಾರ್ಯ ಹಾಗೂ ಅಂತರಾಷ್ಟ್ರೀಯ ತಾಂತ್ರಿಕ ತೀರ್ಪುಗಾರರಾದ ಫರಿಯಾನ ಲೋಕೇಶ್ ಕಾರಣ.


ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ



ಮೈಸೂರು,ನ.8(ಎಸ್‌ಪಿಎನ್)–ಮೈಸೂರಿನ ವಿಶ್ವಮೈತ್ರಿ ಬುದ್ಧವಿಹಾರ ಸಂಸ್ಥೆ ಆವರಣದಲ್ಲಿ ತನುಮನ ಸಂಸ್ಥೆ ವತಿಯಿಂದ ಜಗ ನಡೆಯಲಿ ಬುದ್ಧನ ಕಡೆ ಸಂಗೀತ ಕಾರ್ಯಕ್ರಮ ನಡೆಯಿತು. ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಪ್ರಸ್ತುತ ಜಗತ್ತಿನಲ್ಲಿ ಯುದ್ಧದ ಛಾಯೆ ಆವರಿಸಿದೆ. ಇದನ್ನು ಹೋಗಲಾಡಿಸಬೇಕಾದರೆ, ಬುದ್ಧನ ತತ್ವಗಳ ಪಾಲನೆಯಿಂದ ಸಾಧ್ಯವಿದೆ. ಬುದ್ಧ ಅಹಿಂಸೆಯನ್ನು ಪ್ರತಿಪಾದಿಸಿದರು. ಅವರ ಹಾದಿಯಲ್ಲಿ ಇಂದಿನ ಪೀಳಿಗೆ ಸಾಗಿದರೆ, ದೇಶದ ಸಾಮಾಜಿಕ ಪ್ರಗತಿಗೆ ಮುನ್ನುಡಿಯಾಗುತ್ತದೆ ಎಂದರು. ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಚಾಮರಾಜನಗರ ಜೆಎಸ್‌ಎಸ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಗೋವಿಂದಶೆಟ್ಟಿ ಮಾತನಾಡಿ, ಪ್ರತಿಯೊಬ್ಬರು ಬುದ್ಧನ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡರೆ, ಜಗತ್ತಿನಲ್ಲಿ ಶಾಂತಿ, ನೆಮ್ಮದಿಯ ಜೀವನ ಕಟ್ಟಿಕೊಳ್ಳಬಹುದು. ತನುಮನ ಸಂಸ್ಥೆಯಿಂದ ಆಯೋಜಿಸಿರುವ ಜಗ ನಡೆಯಲಿ ಬುದ್ಧನ ಕಡೆಗೆ ಸಂಗೀತ ಕಾರ್ಯಕ್ರಮದ ಕಲಾವಿದರು ಅನೇಕ ಬುದ್ಧನ ಗೀತೆಗಳನ್ನು ಹಾಡಿ, ಸಭಿಕರನ್ನು ರಂಜಿಸಿದ್ದಾರೆ ಎಂದರು.

ಈ ವೇಳೆ ಎಪಿಎಂಸಿ ಮಾಜಿ ಉಪಾಧ್ಯಕ್ಷ ಚಿಕ್ಕ ಜವರಪ್ಪ, ಮೈಸೂರು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಎಂ.ಆರ್.ವೆಂಕಟೇಶ್, ಎಸ್.ಡಿ.ಸಣ್ಣಸ್ವಾಮಿ, ರಾಜ್ಯ ಸರ್ಕಾರಿ ನೌಕರರ ಸಂಘದ ನಿರ್ದೇಶಕ ರಾಘವೇಂದ್ರ, ಎಂ.ಮಂಜುನಾಥ, ತನುಮನ ಸಂಸ್ಥೆಯ ಲಕ್ಷ್ಮೀರಾವ್ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮ ನಂತರ ಗಾಯಕರಾದ ಲಕ್ಷ್ಮೀರಾಂ, ಮಾದೇಶ್, ಚಿಕ್ಕನಂದಿ, ಗಾಮನಹಳ್ಳಿ ಸ್ವಾಮಿ, ಡಾ.ಪದ್ಮರಾಜು, ಮಣಿಕಂಠ ವಿ, ಪುಷ್ಪಲತಾ, ನೀಲಾ ಬುದ್ಧನ ಕುರಿತು ಹಾಡುಗಳನ್ನು ಹಾಡಿದರೆ, ಕೀಬೋರ್ಡ್ ಡಿ.ಸಿ.ಶಿವಕುಮಾರ್, ರಿದಂಪ್ಯಾಡ್ ಕಿರಣ್, ಎಸ್.ರೋಷನ್ ಸೂರ್ಯ ತಬಲಾ ನುಡಿಸಿ, ಕಾರ್ಯಕ್ರಮಕ್ಕೆ ಸಾಥ್ ನೀಡಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.11.2022 ಬುಧವಾರ, ಮಳೆ ನಕ್ಷತ್ರ: ವಿಶಾಖ, 08.11.2022 ರಿಂದ 19.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಪ್ರತಿಪತ್, ನಕ್ಷತ್ರ : ಕೃತ್ತಿಕಾ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪಾರ್ಶ್ವವಾಯು ಪೀಡಿತರಿಗೆ ಚಿಕಿತ್ಸೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಲಲಿತಮಹಲ್ ಹೆಲಿಪ್ಯಾಡ್ ಬಳಿ, ಆಲನಹಳ್ಳಿ, ಬೆಳಗ್ಗೆಯಿಂದ.

■ **ರೋಟರಿ ಕ್ಲಬ್ ಮೈಸೂರು ಪಶ್ಚಿಮ :** ರಿಫ್ಲೆಕ್ಸೊಲೊಜಿ, ಸುಜೋಕ್ ಮ್ಯಾಗ್ನೆಟ್ ಮತ್ತು ವೈಬ್ರೇಶನ್ ಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ರೋಟರಿ ವೆಸ್ಟ್ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 9 ರಿಂದ.

■ **ಎನ್‌ಐಇ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ :** ವಿಟಿಯು ಅಂತರ ಕಾಲೇಜು ಮೈಸೂರು ವಿಭಾಗ ಮಟ್ಟದ ಪುರುಷರ ಹಾಕಿ ಚಾಂಪಿಯನ್‌ಶಿಪ್, ಉದ್ಘಾಟನೆ : ನ್ಯಾಷನಲ್ ಹಾಕಿ ಆಟಗಾರ ಡಿ.ಎಸ್. ದರ್ಶನ್, ಅಧ್ಯಕ್ಷತೆ : ಎನ್‌ಐಇ ಪ್ರಿನ್ಸಿಪಾಲ್ ಡಾ. ರೋಹಿಣಿ ನಾಗಪದ್ಮ, ಸ್ಥಳ : ಮೈಸೂರು ವಿಶ್ವವಿದ್ಯಾನಿಲಯ ಹಾಕಿ ಮೈದಾನ, ಬೆಳಗ್ಗೆ 9.30ಕ್ಕೆ

ಶ್ರೀ ಸುತ್ತೂರು ಕ್ಷೇತ್ರ

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಶ್ರವಣಬೆಳಗೊಳದಲ್ಲಿಂದು

■ **ಮೈಸೂರು ವಿಶ್ವವಿದ್ಯಾನಿಲಯ, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ಬಾಹುಬಲಿ ಪ್ರಾಕೃತ ವಿದ್ಯಾಪೀಠ, ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ, ಬೆಳಗೊಳ :** ರಾಷ್ಟ್ರೀಯ ಪ್ರಾಕೃತ ಭಾಷಾ ಸಾಹಿತ್ಯ ವಿಚಾರಗೋಷ್ಠಿ, ಸಾನ್ನಿಧ್ಯ : ಬಾಹುಬಲಿ ಪ್ರಾಕೃ ವಿದ್ಯಾಪೀಠದ ಸಂಸ್ಥಾಪಕ ಅಧ್ಯಕ್ಷ ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಅಧ್ಯಕ್ಷತೆ : ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ, ನವದೆಹಲಿ, ಕುಲಪತಿ ಪ್ರೊ. ಶ್ರೀನಿವಾಸ ವರಖೇಡಿ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತಕುಮಾರ್, ಗೌರವ ಅತಿಥಿಗಳು : ಅಂತರರಾಷ್ಟ್ರೀಯ ವಿದ್ವಾಂಸ ನಾಡೋಜ ಪ್ರೊ. ಹಂಪ ನಾಗರಾಜಯ್ಯ, ಸಾರಸ್ವತ ಅತಿಥಿ: ಸಂಸ್ಕೃತ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಪ್ರೊ ಮಲ್ಲೇಪುರಂ ಜಿ. ವೆಂಕಟೇಶ, ಉಪನ್ಯಾಸಕರು: ಹಿರಿಯ ವಿದ್ವಾಂಸ ನಾಡೋಜ ಪ್ರೊ. ಕಮಲಾ ಹಂಪನಾ, ವಿಶೇಷ ಅತಿಥಿಗಳು : ಸಂಸ್ಕೃತ ವಿದ್ವಾಂಸ ಡಾ. ಹೆಚ್.ವಿ. ನಾಗರಾಜರಾವ್, ಬಾಹುಬಲಿ ಪ್ರಾಕೃತ ವಿದ್ಯಾಪೀಠ, ಶ್ರವಣಬೆಳಗೊಳ, ನಿರ್ದೇಶಕ ಪ್ರೊ. ಜಯಕುಮಾರ ಉಪಾಧ್ಯೆ, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷೆ ಪ್ರೊ. ವಿಜಯಕುಮಾರಿ ಎಸ್. ಕರಿಕಲ್, ಸ್ಥಳ: ಗ್ರಂಥಾಲಯ ಸಭಾಂಗಣ, ಶ್ರೀ ಧವಲತೀರ್ಥಂ, ಶ್ರವಣಬೆಳಗೊಳ, ಮಧ್ಯಾಹ್ನ 3 ರಿಂದ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ, ಪ್ರಸ್ತುತಿ–ಡಾ. ಮೈಸೂರು ಉಮೇಶ್, 6.35 ನಖಶಿಖಾಂತ–ಆರೋಗ್ಯ ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ. ಕೇಶವ ಕೊರಸೆ, 6.40 ಅರಿವಿನ ಶಿಖರ– ಗಾಯನ– ಪಿ.ಎಸ್. ರಂಜನಿ, ಮತ್ತೂರು ಕುಮಾರಸ್ವಾಮಿ, ವ್ಯಾಖ್ಯಾನ– ಡಾ ಕಬ್ಬಿನಾಲೆ ವಸಂತ ಭಾರದ್ವಾಜ್, 9.00 ಕನ್ನಡ ಕಜ್ಜಾಯ, 9.05 ವೃತ್ತಿ ಮಾರ್ಗದರ್ಶನ–ಭಾಷಾಶಾಸ್ತ್ರ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಸುವರ್ಣಾದೇವಿ ಬಿ.ಕೆ. ಅವರೊಂದಿಗೆ ಮಾತುಕತೆ, 10.00 ಇಮ್ರತ್ ಖಾನ್–ಸಿತಾರ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30ದೇವರನಾಮ–ಟಿ.ಎನ್. ಶೇಷಗೋಪಾಲನ್, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "ತೂತು ಒಲೆ ಕೆಡಿಸ್ತು, ಮಾತು", ರಚನೆ– ಯಮುನಾ ಮೂರ್ತಿ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ಡಾ.ಎ.ಡಿ.ಶ್ರೀನಿವಾಸನ್, ಜಿ.ಪುಷ್ಪಲತಾ, 4.00 ಮಹಿಳಾರಂಗ–ಸ್ತ್ರೀ ಚೇತನ–ಭಾಗವಹಿಸುವವರು ಡಾ. ಪುಷ್ಪವತಿ, 5.30 ಸಿರಿ ತೋಟಗಾರಿಕೆ–ತೋಟಗಾರಿಕೆ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 6.50 ಕೃಷಿರಂಗ –ಕಿಸಾನ್‌ವಾಣಿ–ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ ಹಾಗೂ ಮಾರುಕಟ್ಟೆಯಲ್ಲಿನ ಯಶಸ್ಸು ಕುರಿತು ಹೆಚ್.ಆರ್. ನವೀನ್ ಕುಮಾರ್ ಮತ್ತು ಎನ್. ಮಹೇಶ್ ಅವರೊಂದಿಗೆ ಮಾತುಕತೆ, 10.00 ಹಳ್ಳಿಹಾಡು–ಜಯಮ್ಮ ಮತ್ತು ತಂಡ, ಭಾಗವಹಿಸುವವರು– ಅಬ್ದುಲ್ ರಶೀದ್, 10.30 ಸವಿನೆನಪು

ಭಾರತೀಯ ಹಬ್ಬಗಳ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮ

ನವೆಂಬರ್ 9



■ **ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು, ಭಾರತೀಯ ವಿದ್ಯಾಭವನ, ಬೆಂಗಳೂರು–ಮೈಸೂರು :** ಕರ್ನಾಟಕ ಜಾನಪದ ಕಲಾವಿದರಿಂದ ಜಾನಪದ ಮೇಳ, ನಿರ್ದೇಶನ : ಪಂಡಿತ್ ಪ್ರವೀಣ್ ಡಿ. ರಾವ್, ಸ್ಥಳ: ಕಲಾಮಂದಿರ, ವಿನೋಬಾ ರಸ್ತೆ, ಸಂಜೆ 6 ರಿಂದ.

ರೇಷ್ಮೆ ಉದ್ಯಮಕ್ಕೆ ಸಂಬಂಧಿಸಿದ ಅಂತರರಾಷ್ಟ್ರೀಯ ತರಬೇತಿ ಕಾರ್ಯಕ್ರಮ



ಮೈಸೂರು, ನ.8(ಎಂಕೆ)– ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯಲ್ಲಿ(ಸಿಎಸ್‌ಆರ್‌ಟಿಐ) ಭಾರತೀಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರ (ಐಟಿಇಸಿ) ಹಾಗೂ ಕೇಂದ್ರ ವಿದೇಶಾಂಗ ವ್ಯವಹಾರಗಳ ಸಂಯುಕ್ತಾಶ್ರದಲ್ಲಿ 'ರೇಷ್ಮೆ ಮತ್ತು ರೇಷ್ಮೆ ಉದ್ಯಮಕ್ಕೆ ಸಂಬಂಧಿಸಿದ ಅಂತರರಾಷ್ಟ್ರೀಯ ತರಬೇತಿ ಕಾರ್ಯಕ್ರಮ ನಡೆಯಿತು.

ತರಬೇತಿ ಕಾರ್ಯಕ್ರಮವನ್ನು ಮೈಸೂರು ವಿವಿ ಅಂತರರಾಷ್ಟ್ರೀಯ ಕೇಂದ್ರದ ನಿರ್ದೇಶಕ ಡಾ.ಜಿ.ಆರ್.ಜನಾರ್ಧನ್ ಉದ್ಘಾಟಿಸಿ, ರೇಷ್ಮೆ ಉದ್ಯಮದ ಉದ್ದೇಶದ ಕುರಿತು ತಿಳುವಳಿಕೆ ನೀಡಿದರು. ಸಿಎಸ್‌ಆರ್‌ಟಿಐ ಪ್ರಭಾರ ನಿರ್ದೇಶಕಿ ಡಾ.ಎ.ವಿ.ಮೇರಿ ಜೋಸೆಫಾ, ವಿದೇಶಿ ವ್ಯವಹಾರಗಳ ಸಲಹೆಗಾರ ಆರ್.ದಿಲೀಪ್‌ಕುಮಾರ್, ಅನುರಾಧ ಸೇರಿದಂತೆ ನೂರಕ್ಕೂ ಹೆಚ್ಚು ಅಧಿಕಾರಿಗಳು, ವಿಜ್ಞಾನಿಗಳು ಭಾಗವಹಿಸಿದ್ದರು.

ಭಾರತೀಯ ಕಾನೂನು ಆಯೋಗದ ಅಧ್ಯಕ್ಷರಾಗಿ ಕರ್ನಾಟಕ ಹೈಕೋರ್ಟ್ ನಿವೃತ್ತ ಸಿಜೆ ಅವಸ್ತಿ ನೇಮಕ



ನವದೆಹಲಿ: ಕರ್ನಾಟಕ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ರಿತುರಾಜ್ ಅವಸ್ತಿ ಅವರನ್ನು ಭಾರತೀಯ ಕಾನೂನು ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ತಿಳಿಸಿದ್ದಾರೆ.

ನ್ಯಾಯಮೂರ್ತಿ ಕೆ.ಟಿ.ಶಂಕರನ್, ಪ್ರೊಫೆಸರ್ ಆನಂದ್ ಪಲಿವಾಲ್, ಪ್ರೊಫೆಸರ್ ಡಿಪಿ ವರ್ಮಾ, ಪ್ರೊಫೆಸರ್ ರಕ ಆರ್ಯ ಮತ್ತು ಎಂ ಕರುಣಾನಿಧಿ ಅವರನ್ನು ಕಾನೂನು ಆಯೋಗದ ಸದಸ್ಯರನ್ನಾಗಿ ನೇಮಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಸುಮಾರು ನಾಲ್ಕು ವರ್ಷಗಳ ನಂತರ ಮತ್ತೆ ಕಾನೂನು ಆಯೋಗ ರಚಿಸಿದ್ದು, ಭಾರತೀಯ ಕಾನೂನು ಆಯೋಗದ ಅಧ್ಯಕ್ಷರಾಗಿ ನ್ಯಾಯಮೂರ್ತಿ ರಿತುರಾಜ್ ಅವಸ್ತಿ ಅವರನ್ನು ನೇಮಕ ಮಾಡಲಾಗಿದೆ ಎಂದು ಕಿರಣ್ ರಿಜಿಜು ಟ್ವೀಟ್ ಮಾಡಿದ್ದಾರೆ. ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದ ರಿತುರಾಜ್ ಅವಸ್ತಿ ಅವರು ಕಳೆದ ಜುಲೈ 2 ರಂದು ನಿವೃತ್ತರಾಗಿದ್ದರು.



ಚಂದ್ರಗ್ರಹಣದ ಬಳಿಕ ಮೈಸೂರಿನ ಅಮೃತೇಶ್ವರ ದೇವಾಲಯದಲ್ಲಿ ಗ್ರಹಣಶಾಂತಿ ಹೋಮಕ್ಕೆ ಭಕ್ತರು ಸಂಕಲ್ಪ ಮಾಡಿಕೊಳ್ಳುತ್ತಿರುವುದು.

ಮೈಸೂರಲ್ಲಿ ಮತ್ತೆ ಕೇಳಿಬಂತು 'ದಲಿತ ಮುಖ್ಯಮಂತ್ರಿ' ಕೂಗು

ಮೀಸಲಾತಿ ಹೋರಾಟದಲ್ಲಿ ಜಯಕ್ಕೆ ಕಾರಣರಾದ ಸ್ವಾಮೀಜಿಗಳಿಗೆ ಅಭಿನಂದನಾ ಕಾರ್ಯಕ್ರಮ



❝ಸಂವಿಧಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಶೋಷಿತ ಸಮುದಾಯಗಳಲ್ಲಿ ಜಾಗೃತಿ ಉಂಟಾಗಬೇಕಿದೆ. ಡಾ.ಅಂಬೇಡ್ಕರ್ ನೀಡಿರುವ ಸಂವಿಧಾನವನ್ನು ನಾವು ಬೇರೆಯವರಿಗೆ ನೀಡುವ ಮೂಲಕ ನಾವು ಇಂದಿಗೂ ಶೋಷಣೆಗೆ ಗುರಿಯಾಗುತ್ತಿದ್ದೇವೆ. ಈ ಶೋಷಣೆಯಿಂದ ವಿಮೋಚನೆ ಹೊಂದಲು ನಾವು ಮುಖ್ಯಮಂತ್ರಿ ಪಟ್ಟವನ್ನು ಪಡೆಯಲೇಬೇಕು ಎಂಬ ಸಂಕಲ್ಪ ತೊಡಬೇಕು.

– ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ

ಮೈಸೂರು, ನ.8(ಆರ್‌ಕೆಬಿ)– ದಲಿತ ಮುಖ್ಯಮಂತ್ರಿ ಕೂಗು ಮತ್ತೊಮ್ಮೆ ಮೈಸೂರಿನಲ್ಲಿ ಮಾರ್ದನಿಸಿತು. ಮೈಸೂರಿನ ಮಾನಸಗಂಗೋತ್ರಿ ಸೆನೆಟ್ ಭವನದಲ್ಲಿ ಮಂಗಳವಾರ ಕರ್ನಾಟಕ ಸ್ವಾಭಿಮಾನಿ ಎಸ್‌ಸಿ–ಎಸ್‌ಟಿ ಸಂಘಟನೆಗಳ ಒಕ್ಕೂಟದ ಮೈಸೂರು ಜಿಲ್ಲಾ ಸಮಿತಿ ಆಯೋಜಿಸಿದ್ದ ಎಸ್‌ಸಿ–ಎಸ್‌ಟಿ ಸಮುದಾಯದ ಎಲ್ಲಾ ಸ್ವಾಮೀಜಿಗಳಿಗೆ ಗೌರವ ಸಮರ್ಪಣೆ, ಚಿಂತನ–ಮಂಥನ ಹಾಗೂ ವಿಚಾರ ಸಂಕಿರಣ ಸಂದರ್ಭದಲ್ಲಿ ದಲಿತ ಮುಖ್ಯಮಂತ್ರಿಯ ಕೂಗು ಮತ್ತೊಮ್ಮೆ ಕೇಳಿ ಬಂದಿತು.

ಹಲವು ವರ್ಷಗಳಿಂದ ಕನಸಾಗಿಯೇ ಉಳಿದಿದ್ದ ದಲಿತ ಮುಖ್ಯಮಂತ್ರಿಗಾಗಿ ಪರಿಶಿಷ್ಟರೆಲ್ಲರೂ ಮೀಸಲು ಕ್ಷೇತ್ರಕ್ಕಷ್ಟೇ ತಮ್ಮ ಸ್ಪರ್ಧೆ ಸೀಮಿತಗೊಳಿಸದೆ ರಾಜ್ಯದ ಎಲ್ಲಾ 223 ಕ್ಷೇತ್ರಗಳಲ್ಲೂ ಸ್ಪರ್ಧಿಸುವಂತೆ ಒತ್ತಾಯಗಳು ಸಮಾರಂಭದಲ್ಲಿ ಕೇಳಿಬಂತು.

❝ಶಿಕ್ಷಣ ಮನುಷ್ಯನನ್ನು ಸ್ವಾಭಿಮಾನಿಯಾಗಿಸುತ್ತದೆ. ಶಿಕ್ಷಣ ವಂಚಿತ ಸಮುದಾಯಗಳು ಶೋಷಣೆಗೆ ಗುರಿಯಾಗುತ್ತವೆ. ಇದನ್ನು ಅರಿತುಕೊಳ್ಳಬೇಕು. ಗುಲಾಮಗಿರಿಯಿಂದ ಮುಕ್ತಾಗಲು ಮೀಸಲಾತಿಯ ಅವಶ್ಯಕತೆ ಇದೆ. ಆದರೆ ಸರ್ಕಾರ ಮೀಸಲಾತಿ ಪ್ರಮಾಣ ಕಡಿಮೆ ಮಾಡುತ್ತಿದ್ದು, ಖಾಸಗೀಕರಣ ಹೆಚ್ಚುತ್ತಿದೆ. ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿಗಾಗಿ ಹೋರಾಟ ಮಾಡಬೇಕಾದ ಅನಿವಾರ್ಯತೆ ಬಂದಿದೆ.

– ಲೇಖಕ ಎಂ.ಗೋಪಿನಾಥ್

ಶ್ರೀ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ ರಾಜ್ಯದಲ್ಲಿ ಎಸ್‌ಸಿ–ಎಸ್‌ಟಿ ಮೀಸಲಾತಿ ಹೆಚ್ಚಳಕ್ಕೆ ಸರ್ಕಾರ ತೀರ್ಮಾನ ಕೈಗೊಂಡಿದೆ. ಅಂತೆಯೇ ರಾಜ್ಯದಲ್ಲಿ ಅಧಿಕಾರ ಹಿಡಿಯಲು ಎಸ್‌ಸಿ – ಎಸ್‌ಟಿ ಸಮುದಾಯ ಒಗ್ಗಟ್ಟಿನ ಶಕ್ತಿ ಪ್ರದರ್ಶಿಸುವುದು ಅಗತ್ಯವಿದೆ. ರಾಜ್ಯದಲ್ಲಿ ಯಾವುದೇ ಕ್ಷೇತ್ರದಲ್ಲಿ ಎಸ್‌ಸಿ–ಎಸ್‌ಟಿ ಸಮುದಾಯ ಯಾವುದೇ ಪಕ್ಷದಿಂದ ಸ್ಪರ್ಧಿಸಿದರೂ ಅವರನ್ನು ಗೆಲ್ಲಿಸುವ ನಿರ್ಧಾರವನ್ನು ಸಮುದಾಯಗಳು ಮಾಡಬೇಕು ಎಂದು ಸಮಾರಂಭದಲ್ಲಿ ಮಾತನಾಡಿದ ಸ್ವಾಮೀಜಿಗಳು ಕರೆ ನೀಡಿದರು.

ಗುರಿ ಸಾಧನೆಗೆ ಸಮುದಾಯದ ಗುರುಗಳ ಆಶೀರ್ವಾದದ ಅವಶ್ಯಕತೆ ಇದೆ. ಸ್ವಾಮೀಜಿಗಳ ನೇತೃತ್ವದಲ್ಲಿ ನಡೆದ ಮೀಸಲಾತಿ ಹೋರಾಟ ಫಲ ನೀಡಿದೆ. ಇದೇ ರೀತಿಯ ಹೋರಾಟಗಳಲ್ಲಿ ಜಯ ಸಾಧಿಸಲು ಸ್ವಾಮೀಜಿಗಳು ಮಾರ್ಗದರ್ಶನ ನೀಡಬೇಕು. ರಾಜ್ಯದಲ್ಲಿ ಒಂದೂವರೆ ಕೋಟಿಯಷ್ಟು ಜನಸಂಖ್ಯೆ ಇರುವ ಎಸ್‌ಸಿ–ಎಸ್‌ಟಿ ಸಮುದಾಯ ಮುಂಬರುವ ಚುನಾವಣೆಯಲ್ಲಿ ಶಕ್ತಿ ಪ್ರದರ್ಶಿಸಬೇಕು. ಮೀಸಲು ಕ್ಷೇತ್ರಗಳಷ್ಟೇ ಅಲ್ಲದೆ, ಸಾಮಾನ್ಯ ಕ್ಷೇತ್ರಗಳಲ್ಲೂ ಈ ಸಮುದಾಯ ಸ್ಪರ್ಧಿಸಬೇಕು. ಗೆಲುವು ಸಾಧ್ಯವಾಗದಿದ್ದರೆ ಕನಿಷ್ಠ ಪಕ್ಷ ಎಲ್ಲಾ ಕ್ಷೇತ್ರಗಳಲ್ಲೂ ಫಲಿತಾಂಶ ಬದಲಿಸುವ ಶಕ್ತಿ ಎಸ್‌ಸಿ–ಎಸ್‌ಟಿ ಸಮುದಾಯಕ್ಕಿದೆ ಎಂಬ ಸಂದೇಶ ಹೋಗಬೇಕು ಎಂದು ಸ್ವಾಮೀಜಿಗಳು ಕರೆ ನೀಡಿದರು.

ಉರಿಲಿಂಗ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, ಶೋಷಿತ ಸಮುದಾಯಗಳ ಎಲ್ಲಾ ಸಮಸ್ಯೆಗಳಿಗೆ ಸಂವಿಧಾನದಲ್ಲಿ ಇರುವ ಪರಿಹಾರವನ್ನು ಸದ್ಬಳಕೆ ಮಾಡಿಕೊಳ್ಳುವುದನ್ನು ನಾವು ಕಲಿಯಬೇಕಿದೆ. ಸ್ವಾಭಿಮಾನ ಇಲ್ಲದ ಜನರು ಹೆಣವಿದ್ದಂತೆ ಎಂದು ಅಂಬೇಡ್ಕರ್ ಅಭಿಪ್ರಾಯಪಟ್ಟಿದ್ದರು. ಹಾಗಾಗಿ, ಶೋಷಿತ ಸಮುದಾಯ ಯಾವುದೇ ಕಾರಣಕ್ಕೂ ಸ್ವಾಭಿಮಾನ ಬಿಟ್ಟುಕೊಡಬಾರದು ಎಂದರು.

ಕಾರ್ಯಕ್ರಮದಲ್ಲಿ ಎಸ್‌ಸಿ–ಎಸ್‌ಟಿ ಸಮುದಾಯಗಳ ಸ್ವಾಮೀಜಿಗಳಾದ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಪುರಿ ಸ್ವಾಮೀಜಿ, ಛಲವಾದಿ ಗುರುಪೀಠದ ಜಗದ್ಗುರು ಬಸವ ನಾಗಿದೇವ ಸ್ವಾಮೀಜಿ, ಬಂಜಾರ ಗುರುಪೀಠದ ಶ್ರೀ ಸಂತ ಸೇವಾಲಾಲ್ ಸ್ವಾಮೀಜಿ, ಮುಡುಕುತೊರೆ ಮಠದ ಶ್ರೀ ಸಿದ್ದರಾಮ ಶಿವಯೋಗಿ ಸ್ವಾಮೀಜಿ, ಭೋವಿ ಮಠದ ಶ್ರೀ ಸಿದ್ದರಾಮೇಶ್ವರ ಸ್ವಾಮೀಜಿ ಅವರನ್ನು ಅಭಿನಂದಿಸಲಾಯಿತು.

ಹೊಸ ಸೋಂಕುಗಳ ಕುರಿತು ರಾಷ್ಟ್ರೀಯ ಸಮ್ಮೇಳನ

ಮೈಸೂರು, ನ.8– ಆಶಾ ಕಿರಣ ಆಸ್ಪತ್ರೆ ಹಾಗೂ ಏಡ್ಸ್ ಸೊಸೈಟಿ ಆಫ್ ಇಂಡಿಯಾ (ಎಎಸ್‌ಐ) ಸಹಯೋಗದೊಂದಿಗೆ ನ.13 ರಂದು ಹೋಟೆಲ್ ಸಂದೇಶ್ ದಿ ಪ್ರಿನ್ಸ್‌ನಲ್ಲಿ ಹೆಚ್‌ಐವಿ, ಏಡ್ಸ್, ಟಿಬಿ, ಕೋವಿಡ್ ಮತ್ತು ಹೊಸ ಹೊಸ ಸೋಂಕುಗಳ ಕುರಿತು ರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಏಡ್ಸ್ ಸೊಸೈಟಿ ಆಫ್ ಇಂಡಿಯಾ (ಎಎಸ್‌ಐ) ಅಧ್ಯಕ್ಷ ಡಾ.ಐ.ಎಸ್.ಗಿಲಾಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಕಾರ್ಯಕ್ರಮದಲ್ಲಿ ಎಎಸ್‌ಐ ಪ್ರಧಾನ ಕಾರ್ಯದರ್ಶಿ ಡಾ.ಎನ್.ಕುಮಾರಸ್ವಾಮಿ, ಚೆನ್ನೈನ ಕಂಚಿ ಕಾಮಕೋಟಿ ಚೈಲ್ಡ್ ಆಸ್ಪತ್ರೆಯ ಮಾಜಿ ನಿರ್ದೇಶಕ ಡಾ.ಎಸ್.ಬಾಲಸುಬ್ರಹ್ಮಣ್ಯಂ, ರಾಷ್ಟ್ರೀಯ ಕ್ಷಯರೋಗ ಸಂಶೋಧನಾ ಕೇಂದ್ರದ(ಎನ್‌ಐಆರ್‌ಟಿ) ಹಿರಿಯ ಉಪನಿರ್ದೇಶಕ ಡಾ.ಜಿ.ನರೇಂದ್ರನ್, ಸೇರಿದಂತೆ ಇತರರು ಉಪಸ್ಥಿತರಿರುತ್ತಾರೆ.

ಬಿಜೆಪಿಯದ್ದು ಜಾತಿ, ಲಿಂಗ, ಧರ್ಮ ಆಧಾರಿತ ರಾಜಕಾರಣವಲ್ಲ

● ಆರೋಗ್ಯ ಸಚಿವ ಡಾ. ಸುಧಾಕರ್ ಸ್ಪಷ್ಟನೆ ● 60 ವರ್ಷ ಕಾಲ ಕಾಂಗ್ರೆಸ್‌ನದ್ದು ಬರೀ ಓಲೈಕೆ ರಾಜಕಾರಣ



ಬೆಂಗಳೂರು, ನ.8(ಕೆಎಂಶಿ)– ಬಿಜೆಪಿ ಎಂದಿಗೂ ಜಾತಿ, ಲಿಂಗ, ಧರ್ಮ ಆಧಾರಿತವಾದ ರಾಜಕಾರಣ ಮಾಡಿಲ್ಲ ಅಥವಾ ಅದರ ಆಧಾರಿತವಾಗಿ ಯೋಜನೆ ರೂಪಿಸಿಲ್ಲ. ಆದರೆ ಕಾಂಗ್ರೆಸ್ ನಾಯಕರು 60 ವರ್ಷಗಳಿಂದ ಓಲೈಕೆ ರಾಜಕಾರಣವನ್ನೇ ಮಾಡಿಕೊಂಡು ಬಂದಿದ್ದು, ಈಗ ಬಿಜೆಪಿಯ ಅಭಿವೃದ್ಧಿ ಕಾರ್ಯಗಳಿಂದ ನಿರಾಶರಾಗಿದ್ದಾರೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿಯವರು, ನಾಡಪ್ರಭು ಕೆಂಪೇಗೌಡರ ಪ್ರತಿಮೆ ಉದ್ಘಾಟನೆ, ವಿಮಾನ ನಿಲ್ದಾಣದ ಟರ್ಮಿನಲ್–2, ವಂದೇ ಭಾರತ್ ರೈಲು ಚಾಲನೆ ಸೇರಿದಂತೆ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಇದಕ್ಕೆ ಮುನ್ನ ಸ್ಥಳ ಪರಿಶೀಲನೆ ಮಾಡಿ, ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಸರ್ವ ವ್ಯಾಪಿ, ಸರ್ವ ಸ್ಪರ್ಶಿ, ಸರ್ವರ ಕಲ್ಯಾಣ ಎಂಬುದು ಪ್ರಧಾನಿ ನರೇಂದ್ರ ಮೋದಿಯವರ ಮಂತ್ರ ಬಿಜೆಪಿ ಎಂದಿಗೂ ಯಾವುದೇ ಸಮುದಾಯ, ಜಾತಿ, ಧರ್ಮ, ಲಿಂಗ ಆಧಾರಿತವಾಗಿ ಯೋಜನೆಗಳನ್ನು ರೂಪಿಸಲು ಮುಂದಾಗುವುದಿಲ್ಲ. ಕಾಂಗ್ರೆಸ್ ಪಕ್ಷ ಹಿಂದಿನಿಂದಲೂ ಓಲೈಕೆ ರಾಜಕಾರಣ ಮಾಡಿಕೊಂಡು ಬಂದಿದೆ. ಈಗಲೂ ಅದನ್ನೇ ಮುಂದುವರಿಸುತ್ತಿದೆ. ಶ್ರೇಷ್ಠವಾದ ರಾಜಕಾರಣವನ್ನು ಅವರು ಎಂದೂ ಮಾಡಿಲ್ಲ ಎಂದರು.

ಆರ್ಥಿಕವಾಗಿ ಹಿಂದುಳಿದವರಿಗೆ ಕೇಂದ್ರ ಬಿಜೆಪಿ ಸರ್ಕಾರ ನೀಡಿರುವ ಮೀಸಲಾತಿಯನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದೆ. ಇಂತಹ ಕ್ರಮವನ್ನು ತರಲು ಬಿಜೆಪಿಗೆ ಮಾತ್ರ ಸಾಧ್ಯವಾಗುತ್ತದೆ. ಇಂತಹ ಆಲೋಚನೆಗಳು ಕಾಂಗ್ರೆಸ್ ಅಥವಾ ಜೆಡಿಎಸ್‌ಗೆ ಬರಲು ಸಾಧ್ಯವಿಲ್ಲ ಎಂದರು.

ನಾಡಪ್ರಭು ಕೆಂಪೇಗೌಡರು ಒಕ್ಕಲಿಗ ಸಮುದಾಯಕ್ಕೆ ಸೇರಿದ್ದರೂ, ಅವರು ಎಲ್ಲರ ನಾಯಕರು. ಆದರೆ ಒಕ್ಕಲಿಗ ಸಮುದಾಯಕ್ಕೆ ಕಾಂಗ್ರೆಸ್‌ನವರು ಏನೂ ಮಾಡಿಲ್ಲ. ಜನಪ್ರಿಯ ನಾಯಕರಾದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಸೇರಿದಂತೆ ಹಿರಿಯ ಒಕ್ಕಲಿಗ ನಾಯಕರನ್ನು ಕಾಂಗ್ರೆಸ್ ಅಪಮಾನ ಮಾಡಿದೆ. ಅವರನ್ನು ಅಧಿಕಾರದಿಂದ ಒಂದೇ ಬಾರಿಗೆ ತೆಗೆದು ಹಾಕಲು ಇದುವರೆಗೂ ಕಾರಣ ನೀಡಿಲ್ಲ ಎಂದರು.

ನಾಡಪ್ರಭು ಕೆಂಪೇಗೌಡರ ಪ್ರಗತಿಯ ಪ್ರತಿಮೆ ನಿರ್ಮಾಣದ ಚಿಂತನೆಯನ್ನು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಚರ್ಚೆಗೆ ತಂದಿದ್ದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಇಚ್ಛಾಶಕ್ತಿಯಿಂದ ಇಂತಹ ಸುಂದರ ಐತಿಹಾಸಿಕ ಪ್ರತಿಮೆ ನಿರ್ಮಾಣವಾಗಿದೆ ಎಂದರು.

ಕಾಂಗ್ರೆಸ್‌ನವರ ರಾಜಕೀಯ ಮಾತುಗಳನ್ನು ಗಂಭೀರವಾಗಿ ಪರಿಗಣಿಸಬಾರದು. ಬಿಜೆಪಿಯ ತತ್ವ ಸಿದ್ಧಾಂತಗಳನ್ನು ಮೆಚ್ಚಿ ಬರುವ ಕಾಂಗ್ರೆಸ್‌ನವರಿಗೂ ಸ್ವಾಗತ ನೀಡುತ್ತೇವೆ ಎಂದು ನಾವು ಕೂಡ ಹೇಳುತ್ತೇವೆ. ಕಾಂಗ್ರೆಸ್‌ನವರು ಲೋಕಾರೂಢಿಯಾಗಿ ಹೇಳಿದ್ದಾರೆ. ಅನ್ಯಪಕ್ಷಗಳಿಂದ ಬಂದವರ ಜೊತೆಗೆ ಬಿಜೆಪಿಗೆ ಇನ್ನಷ್ಟು ನಾಯಕರು ಸೇರ್ಪಡೆಯಾಗುತ್ತಾರೆಯೇ ಹೊರತು, ಮೈನಸ್ ಆಗುವುದಿಲ್ಲ. ಹಿರಿಯ ಐಎಎಸ್ ಅಧಿಕಾರಿ, ಇಬ್ಬರು ಮಾಜಿ ಸಂಸದರು, ಕೋಲಾರ ಜಿಲ್ಲೆಯ ಇಬ್ಬರು ಮಾಜಿ ಶಾಸಕರು, ಚಿಕ್ಕಬಳ್ಳಾಪುರದಲ್ಲಿ ಒಬ್ಬ ಮಾಜಿ ಶಾಸಕರು ಬಿಜೆಪಿಗೆ ಬಂದಿದ್ದಾರೆ ಎಂದರು.

ಸತೀಶ್ ಜಾರಕಿಹೊಳಿ ಅವರು ಇತಿಹಾಸದ ಬಗ್ಗೆ ಇರುವ ತಪ್ಪು ಕಲ್ಪನೆಯನ್ನು ಪ್ರದರ್ಶನ ಮಾಡಿದ್ದಾರೆ. ಹಿಂದೂ ಪದದ ಬಗ್ಗೆ, ಹಿಂದುತ್ವದ ಬಗ್ಗೆ, ದೇಶದ ಇತಿಹಾಸದ ಬಗ್ಗೆ ಅವರು ಪರಿಚಯ ಮಾಡಿಕೊಂಡು, ಅರಿವು ಮೂಡಿಸಿಕೊಳ್ಳುವ ಕೆಲಸ ಮಾಡಬೇಕಾಗುತ್ತದೆ. ಇಡೀ ವಿಶ್ವದಲ್ಲಿ ಹಿಂದೂ ಧರ್ಮದ ಬಗ್ಗೆ ವಿಶೇಷ ಗೌರವ ಇದೆ. ಸನಾತನ ಹಿಂದೂ ಧರ್ಮ ಒಂದು ಜೀವನಶೈಲಿ. ಇದು ಅತೀ ಉನ್ನತ ಆದರ್ಶವಾಗಿದೆ ಎಂದರು.

ಹಿಂದೂಗಳ ನಿಂದಿಸಿದ ಕಾಂಗ್ರೆಸ್‌ಗೆ ಉಳಿಗಾಲವಿಲ್ಲ

ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ವಾಗ್ದಾಳಿ

ಬೆಂಗಳೂರು, ನ. 8 (ಕೆಎಂಶಿ)– ಹಿಂದೂಗಳನ್ನು ನಿಂದಿಸಿದ ಕಾಂಗ್ರೆಸ್ ಪಕ್ಷವನ್ನು ರಾಜ್ಯದ ಜನತೆ ಯಾವತ್ತೂ ಕ್ಷಮಿಸುವುದಿಲ್ಲ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಇಂದಿಲ್ಲಿ ತಿಳಿಸಿದ್ದಾರೆ.



ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದೂಗಳ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡುತ್ತಿರುವ ಕಾಂಗ್ರೆಸ್‌ಗೆ ಮುಂದಿನ ಚುನಾವಣೆಯಲ್ಲಿ ಜನ ಬುದ್ಧಿ ಕಲಿಸುತ್ತಾರೆ ಎಂದಿದ್ದಾರೆ.

ಕಾಂಗ್ರೆಸ್ ಪಕ್ಷವು ಸದಾ ನಮ್ಮ ಪ್ರಾಚೀನ–ಶ್ರೇಷ್ಠ ಸಂಸ್ಕೃತಿ ಮತ್ತು ಧರ್ಮವನ್ನು ಹೀಯ್ಯಾಳಿಸುವ ಕೆಲಸ ಮಾಡುತ್ತ ಬಂದಿದೆ. ಈ ರೀತಿಯ ನಿಂದನೆ ಅಕ್ಷಮ್ಯ. ಸತೀಶ್ ಜಾರಕಿಹೊಳಿ ವಿರುದ್ಧ ಕಾಂಗ್ರೆಸ್ ಪಕ್ಷವು ಕ್ರಮ ತೆಗೆದುಕೊಳ್ಳಬೇಕು. ಅಲ್ಲದೆ ಅವರಿಂದ ರಾಜೀನಾಮೆ ಪಡೆಯಬೇಕು. ಇಲ್ಲವಾದರೆ ರಾಹುಲ್ ಗಾಂಧಿ, ಸ್ಥಳೀಯರೇ ಆದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಅವರು ಹಿಂದೂಗಳ ಅವಹೇಳನವನ್ನು ಸಮರ್ಥಿಸಿದಂತೆ ಆಗುತ್ತದೆ ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷದಲ್ಲಿ ತಾಕತ್ತು ಉಳಿದಿಲ್ಲ. ಆ ಪಕ್ಷವು ಸಂಪೂರ್ಣ ದುರ್ಬಲವಾಗಿದೆ. ಆದ್ದರಿಂದ ಕರ್ನಾಟಕದಲ್ಲಿ ಗೆಲ್ಲುವ ಕುರಿತ ಮಲ್ಲಿಕಾರ್ಜುನ ಖರ್ಗೆ ಅವರ ಮಾತಿಗೆ ಯಾವುದೇ ಮಹತ್ವ ಇಲ್ಲ ಎಂದು ಅವರು ನುಡಿದರು.

ಕಾಂಗ್ರೆಸ್ ಪಕ್ಷ ನಾಮಾವಶೇಷ ಆಗಲಿದೆ. ಇತ್ತೀಚೆಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಒಂದೇ ಒಂದು ಸೀಟು ಗೆದ್ದಿಲ್ಲ. ಹಿಮಾಚಲ ಪ್ರದೇಶ ಮತ್ತು ಗುಜರಾತ್ ರಾಜ್ಯಗಳಲ್ಲೂ ಕಾಂಗ್ರೆಸ್ ಪಕ್ಷ ಸೋಲಲಿದೆ. ಎಲ್ಲ ಕಡೆ ಬಿಜೆಪಿ ಗೆಲ್ಲುತ್ತ ಸಾಗಲಿದೆ. ಕರ್ನಾಟಕದಲ್ಲೂ ಬಿಜೆಪಿ ಜಯ ಸಾಧಿಸಲಿದೆ ಎಂದರು.

ರಾಜ್ಯದ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷದ ಮುಖಂಡರು ಪ್ರವಾಸ ಮಾಡುತ್ತಿದ್ದಾರೆ. ಬೂತ್ ಮಟ್ಟದ ಕಾರ್ಯಕರ್ತರೊಂದಿಗೆ ಚರ್ಚಿಸುತ್ತಿದ್ದೇವೆ. ಸಶಕ್ತ ಬೂತ್ ಮಟ್ಟದ ಕಾರ್ಯಕರ್ತರಿಂದ ಪಕ್ಷ ಗೆಲ್ಲುತ್ತದೆ. ಮುಂದಿನ ಅಸೆಂಬ್ಲಿ ಚುನಾವಣೆಯಲ್ಲಿ ರಾಜ್ಯದಲ್ಲಿ 150 ಸೀಟು ಗೆದ್ದೇ ಗೆಲ್ಲುತ್ತೇವೆ ಎಂದು ಅರುಣ್ ಸಿಂಗ್ ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್‌ನವರ ಬಳಿ ಹೇಳಿಕೊಳ್ಳಲು ಏನೂ ಇಲ್ಲ. ಕರ್ನಾಟಕದಲ್ಲಿ ನಾವು ಗಮನಾರ್ಹ ರೀತಿಯಲ್ಲಿ ಕೆಲಸ ಮಾಡಿದ್ದೇವೆ. ನಾವು ಮಾಡಿರುವ ಕೆಲಸ ನೋಡಿ ಜನತೆ ಮುಂದಿನ ಬಾರಿ ಬಿಜೆಪಿಗೇ ಅಧಿಕಾರ ನೀಡಲಿದ್ದಾರೆ. ರಾಜ್ಯದ ಎಲ್ಲ ಸಚಿವರು ತಳಮಟ್ಟದಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿಜಿ ಮತ್ತು ಕಾಮನ್ ಮ್ಯಾನ್ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರ ಯೋಜನೆಗಳು, ಕಾರ್ಯವೈಖರಿಯನ್ನು ರಾಜ್ಯದ ಜನರು ಮೆಚ್ಚಿಕೊಂಡಿದ್ದಾರೆ. ಆದ್ದರಿಂದ ಮುಂದಿನ ಬಾರಿಯೂ ರಾಜ್ಯದಲ್ಲಿ ನಮ್ಮದೇ ಸರ್ಕಾರವಿರುತ್ತದೆ ಎಂದು ನುಡಿದರು.

ಹಿಂದೂ ಪದ, ಕೇಸರಿ ಕಾಂಗ್ರೆಸ್‌ಗೆ ಅಲರ್ಜಿ

ಇದು ಆ ಪಕ್ಷದ ಸಿದ್ಧಾಂತದ ಅವಿಭಾಜ್ಯ ಅಂಗ: ಆರಗ ಜ್ಞಾನೇಂದ್ರ

ಬೆಂಗಳೂರು, ನ.8(ಕೆಎಂಶಿ)– ಹಿಂದೂ ಪದ ಅಂದರೆ ಕಾಂಗ್ರೆಸ್ ನಾಯಕರಿಗೆ ಅಶ್ಲೀಲ. ಅದೇ ರೀತಿಯಲ್ಲಿ ಕೇಸರಿ ಎಂದರೆ ಅವರಿಗೆ ಅಲರ್ಜಿ. ಈ ನಿಲುವು, ಆ ಪಕ್ಷದ ಸಿದ್ಧಾಂತದ ಒಂದು ಅವಿಭಾಜ್ಯ ಅಂಗವಾಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ, ಕಾಂಗ್ರೆಸ್ ನಾಯಕರ ವಿರುದ್ಧ ಕಿಡಿಕಾರಿದರು.



ಕಾಂಗ್ರೆಸ್ ನಾಯಕ ಸತೀಶ್ ಜಾರಕಿಹೊಳಿಯವರು ಹಿಂದೂ ಧರ್ಮದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ಬಗ್ಗೆ ಮಾಧ್ಯಮ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, "ಅವರ ಹೇಳಿಕೆ ನನಗೆ ಆಶ್ಚರ್ಯ ತಂದಿಲ್ಲ, ಅವರು ತಮ್ಮ ಪಕ್ಷದ ನಿಜ ಧೋರಣೆಯನ್ನು ಧ್ವನಿಸಿದ್ದಾರೆ" ಎಂದರು.

ಕಾಂಗ್ರೆಸ್ ಪಕ್ಷದ ಹಿಂದೂ ವಿರೋಧಿ ನಡೆಯಿಂದಾಗಿ, ಅದು ದೇಶದಲ್ಲಿ ಅಪ್ರಸ್ತುತವಾಗಿದೆ ಎಂದು ಸಚಿವರು ಹೇಳಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಬೆಂಗಳೂರು ಭೇಟಿಯ ಬಗ್ಗೆ ಮಾಹಿತಿ ನೀಡಿದ ಸಚಿವರು, ನಾಡಪ್ರಭು ಕೆಂಪೇಗೌಡರ ಪ್ರತಿಮೆಯ ಅನಾವರಣ, ವಂದೇ ಭಾರತ್ ರೈಲಿಗೆ ಚಾಲನೆ, ಹಾಗೂ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್‌ನ ಉದ್ಘಾಟನೆ ಸಮಾರಂಭ ಸೇರಿದಂತೆ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಶ್ರೀ ನರೇಂದ್ರ ಮೋದಿಯವರು, ಬೃಹತ್ ಜನಸ್ತೋಮವನ್ನೂ ಉದ್ದೇಶಿಸಿ ಮಾತಾಡಲಿದ್ದಾರೆ ಎಂದರು.

ಹಿಂದು ಶಬ್ದದ ಅರ್ಥ ಅಶ್ಲೀಲ...

ಕಾಂಗ್ರೆಸ್ ಮುಖಂಡರ ಹೇಳಿಕೆ ವಿರುದ್ಧ ಬಿಜೆಪಿ 'ಸ್ವಾಭಿಮಾನಿ ಹಿಂದು' ಅಭಿಯಾನ

ಬೆಂಗಳೂರು, ನ. 8 (ಕೆಎಂಶಿ)– ಹಿಂದು ಶಬ್ದದ ಅರ್ಥ ಅಶ್ಲೀಲವಾಗಿದೆ ಎಂದು ಸತೀಶ್ ಜಾರಕಿಹೊಳಿ ನೀಡಿರುವ ಹೇಳಿಕೆ ವಿರುದ್ಧ ಕೇಸರಿಪಡೆ ಕೆರಳಿ ನಿಂತಿದ್ದು, "ಸ್ವಾಭಿಮಾನಿ ಹಿಂದು" ಎಂಬ ಘೋಷವಾಕ್ಯದೊಂದಿಗೆ ಇಂಧನ ಹಾಗೂ ಕನ್ನಡ– ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಕಾಂಗ್ರೆಸ್ ವಿರುದ್ಧ ಅಭಿಯಾನ ಪ್ರಾರಂಭಿಸಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ಕಾಂಗ್ರೆಸ್ ನಾಯಕರನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ.

ನನ್ನನ್ನು ಹಿಂದು ಎಂದು ಕರೆಯಬೇಡಿ ಎಂದು ಹೇಳಿದ್ದ ಜವಾಹರಲಾಲ್ ನೆಹರು ಅವರ ಹಾದಿಯಲ್ಲೇ ಕಾಂಗ್ರೆಸ್ ಇಷ್ಟು ವರ್ಷ ನಡೆದುಕೊಂಡಿದೆ ಹಿಂದು, ಹಿಂದುತ್ವ ಹಾಗೂ ಹಿಂದು ರಾಷ್ಟ್ರೀಯ ವಿಚಾರಧಾರೆಯನ್ನು ಅವಕಾಶ ಸಿಕ್ಕಾಗಲೆಲ್ಲ ಹತ್ತಿಕ್ಕಲು ಕಾಂಗ್ರೆಸ್ ಯತ್ನಿಸುತ್ತಲೇ ಬಂದಿದೆ. ಸತೀಶ್ ಜಾರಕಿಹೊಳಿ ಈ ಪರಂಪರೆಯ ಭಾಗ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸತೀಶ್ ಜಾರಕಿಹೊಳಿಗೆ ಹಿಂದು ಶಬ್ದ ಅಶ್ಲೀಲ. ಸಿದ್ದರಾಮಯ್ಯ ಅವರಿಗೆ ಕೇಸರಿ–ತಿಲಕ ಕಂಡರೆ ಭಯ. ದೈವಾರಾಧನೆ ಹಾಗೂ ತೀರ್ಥ ಬಿ.ಟಿ.ಲಲಿತಾನಾಯಕರಿಗೆ ವಾಕರಿಕೆ ತರಿಸುತ್ತದೆ. ಡಿ.ಕೆ.ಶಿವಕುಮಾರ್‌ಗೆ ಮುಸ್ಲಿಂರು ಸೋದರರು. ಎಂ.ಬಿ.ಪಾಟೀಲರಿಗೆ ಹಿಂದು ಧರ್ಮದ ಅಖಂಡತೆ ಒಡೆಯುವ ಯೋಚನೆ. ಕೇಂದ್ರದ ಮಾಜಿ ಸಚಿವ ಶಿವರಾಜ್ ಪಾಟೀಲ್‌ಗೆ ಭಗವದ್ಗೀತೆ ಜಿಹಾದ್ ಆಗಿ ಕಾಣುತ್ತದೆ.

ಇವೆಲ್ಲವೂ ಕಾಂಗ್ರೆಸ್ ಒಳಮನಸ್ಸಿನಲ್ಲಿರುವ ಹಿಂದು



ವಿರೋಧಿ ಭಾವಗಳು ಎಂದು ಟೀಕಿಸಿದ್ದಾರೆ.

ಭಾರತ್ ಜೋಡೊ ಯಾತ್ರೆ ಹೆಸರಿನಲ್ಲಿ ರಾಹುಲ್ ಗಾಂಧಿ ನಡೆಸಿದ ಪಾದಯಾತ್ರೆಯ ಬಳಿಕ ಕಾಂಗ್ರೆಸ್ ನಾಯಕರ ಹಿಂದು ವಿರೋಧಿ ಹೇಳಿಕೆಗಳು ಮಿತಿಮೀರಿದೆ. ಕಾಂಗ್ರೆಸ್ ನಡೆಸುವ ಎಲ್ಲ ಯಾತ್ರೆ, ಅಭಿಯಾನದ ಹಿಂದಿರುವುದು ಹಿಂದು ದ್ವೇಷ. ಕಾಂಗ್ರೆಸ್ ಅಧಿನಾಯಕರ ಭಾವನೆಗಳಿಗೆ ಸತೀಶ್ ಜಾರಕಿಹೊಳಿ ಮಾತಿನ ರೂಪ ಕೊಟ್ಟಿದ್ದಾರೆ ಎಂದು ಆರೋಪಿಸಿದ್ದಾರೆ.

ಹಿಂದುತ್ವ ಎಂಬ ಜೀವನ ಪದ್ಧತಿಯನ್ನೇ ಟೀಕಿಸಿದ ಸತೀಶ್ ಜಾರಕಿಹೊಳಿ ಪರವಾಗಿ ಕಾಂಗ್ರೆಸ್ ಇಡೀ ರಾಷ್ಟ್ರದ ಕ್ಷಮೆ ಯಾಚಿಸಬೇಕು. ಇದು ವೈಯಕ್ತಿಕ ಅಭಿಪ್ರಾಯ ಎಂದು ಕೈ ತೊಳೆದುಕೊಳ್ಳುವ ನಾಟಕ ಬೇಡ ಮಾನ್ಯ ಸುರ್ಜೇವಾಲಾ ಅವರೇ, ಭಾರತೀಯತೆಗೆ ಅಪಮಾನ ಮಾಡುವ ನಿಮ್ಮ ನಾಟಕಕ್ಕೆ ಕ್ಷಮೆ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಜಾಲತಾಣದಲ್ಲಿ ಆರಂಭಿಸಿರುವ "ಸ್ವಾಭಿಮಾನಿ ಹಿಂದು" ಅಭಿಯಾನದಲ್ಲಿ ನಾನು ಸ್ವಾಭಿಮಾನಿ ಹಿಂದು.... ಹಿಂದುತ್ವದ ಅವಹೇಳನವಾದಾಗ ನಾನು ಪ್ರತಿರೋಧಿಸುತ್ತೇನೆ. ರಾಷ್ಟ್ರೀಯತೆಗೆ ಧಕ್ಕೆಯಾದಾಗ ನಾನು ಸೆಟೆದು ನಿಲ್ಲುತ್ತೇನೆ. ಭಾರತೀಯ ಪರಂಪರೆಯ ನಿಂದನೆಯಾದಾಗ ನಾನು ಹೋರಾಡುತ್ತೇನೆ. ಸ್ವಧರ್ಮ, ಸ್ವದೇಶ, ಸ್ವಭಾಷೆ ನನ್ನ ಅಸ್ಮಿತೆ. ನಾನು ಸ್ವಾಭಿಮಾನಿ ಹಿಂದು. ನನ್ನೊಡಲೊಳಗೆ ದೇಶಭಕ್ತಿಯ ಕೆಚ್ಚಿದೆ. ನನ್ನ ಹೃದಯದಲ್ಲಿ ಹಿಂದು ರಾಷ್ಟ್ರ ಪ್ರೀತಿ ಇದೆ. ನನ್ನ ಮನಸಿನಲ್ಲಿ ಹಿಂದುತ್ವದ ಸಂಸ್ಕಾರವಿದೆ. ನನ್ನ ಉಸಿರಿನಲ್ಲಿ ರಾಷ್ಟ್ರ ವಿರೋಧಿಗಳ ವಿರುದ್ಧ ದ್ವೇಷವಿದೆ.ನನ್ನ ರಕ್ತದಲ್ಲಿ ಶಿವಾಜಿಯ ಸ್ವಾಭಿಮಾನವಿದೆ. ಹಿಂದುತ್ವಕ್ಕೆ ಅಪಮಾನವಾದಾಗ ನಾ ಮೌನಿಯಾಗಲಾರೆ ಎಂದು ಸುನಿಲ್ ಕುಮಾರ್ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಆತ : "ಏನಮ್ಮ ನಿನ್ನ ಮದ್ವೆ ಆಯ್ತೇನಮ್ಮ?"
ಹುಡುಗಿ : "ಆಯ್ತು ಅಂಕಲ್!"
ಆತ : "ಹುಡುಗ ಏನ್ ಮಾಡ್ಕೊಂಡಿದ್ದಾನೆ?"
ಹುಡುಗಿ : "ಈಗ ತುಂಬ ಬೇಜಾರ್ ಮಾಡ್ಕೊಂಡಿದ್ದಾನೆ!'

ಮೈಸೂರು ಮಿತ್ರ

ಬುಧವಾರ, 9 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಮಿತವ್ಯಯ ಎಂಬುದು ಎಷ್ಟು ಕಡಿಮೆ ಖರ್ಚು ಮಾಡುತ್ತಾನೆ ಎಂಬುದರಲ್ಲಿಲ್ಲ. ಅದನ್ನು ಎಷ್ಟು ಬುದ್ಧಿವಂತಿಕೆಯಿಂದ ಖರ್ಚು ಮಾಡುತ್ತಾನೆ ಎಂಬುದರಲ್ಲಿದೆ. –ಸೂಕ್ತಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎಣ್ಣೆ ಹಾಕಿದರೆ ಕಣ್ಣಿಗೆ ಗುಣ, ಮಣ್ಣು ಹಾಕಿದರೆ ಬುಡಕ್ಕೆ ಬುಣ

ನಿಮ್ಮ ಪತ್ರಗಳು

ಸವ್ಯಸಾಚಿ ಧ್ರುವನಾರಾಯಣ್ ನಂಜನಗೂಡಿನಿಂದ ಸ್ಪರ್ಧಿಸಲಿ

ಮಾನ್ಯರೆ,



ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ನಂಜನಗೂಡಿನಿಂದ ಸ್ಪರ್ಧಿಸಿ ರಾಜ್ಯ ವಿಧಾನಸಭೆ ಪ್ರವೇಶಿಸಲಿ. ಗಡಿನಾಡು ಚಾಮರಾಜನಗರ ಲೋಕಸಭಾ ವ್ಯಾಪ್ತಿಯ ಸಂತೇಮರಹಳ್ಳಿ ಮತ್ತು ಕೊಳ್ಳೇಗಾಲ ಕ್ಷೇತ್ರಗಳಿಂದ ತಲಾ ಒಂದು ಸಲ ವಿಧಾನಸಭೆಗೆ ಆಯ್ಕೆ ಆಗಿದ್ದ ಧ್ರುವನಾರಾಯಣ್ ನಂತರ ಬದಲಾದ ರಾಜಕೀಯ ಸಂದರ್ಭಕ್ಕೆ ಅನುಗುಣವಾಗಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸತತ ಎರಡು ಬಾರಿ ಗೆಲ್ಲುವ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಾಕಷ್ಟು ವಿವಿಧ ಯೋಜನೆಗಳನ್ನು ಕ್ಷೇತ್ರಾದ್ಯಂತ ತರುವ ಮೂಲಕ ತಮ್ಮ ಕೆಲಸ ಅಭಿವೃದ್ಧಿಗಳಿಂದಲೇ ಹೆಸರುವಾಸಿಯಾದವರು. (2014ರ ಒಂದು ಸಮೀಕ್ಷೆಯ ಪ್ರಕಾರ) ಇಡೀ ದೇಶದಲ್ಲೇ ಧ್ರುವನಾರಾಯಣ್ ನಾಲ್ಕನೇ ಹಾಗೂ ಕರ್ನಾಟಕ ರಾಜ್ಯದ ನಂಬರ್ ಒನ್ ಅತ್ಯುತ್ತಮ ಸಂಸದರು ಎಂಬ ಗೌರವ ಪಡೆದ ಇವರು ಚಾಮರಾಜನಗರಕ್ಕೆ ಅಧಿಕೃತವಾಗಿ ಜಿಲ್ಲಾ ಕೇಂದ್ರ ರೂಪ ಕೊಟ್ಟವರು ಎಂದರೇ ಅತಿಶಯೋಕ್ತಿ ಆಗಲಾರದು. ಕಳೆದ, 2019 ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಶ್ರೀನಿವಾಸ್ ಪ್ರಸಾದ್ ಎದುರು ಕೆಲವೇ ಮತಗಳ ಅಂತರದಿಂದ ಪರಾಭವ ಆದ ನಂತರವೂ ಅಧಿಕಾರ ಇಲ್ಲದ ಸಂದರ್ಭದಲ್ಲಿಯೂ ತಾರತಮ್ಯವಿಲ್ಲದೆ ಕ್ಷೇತ್ರದ ಜನರೊಂದಿಗಿನ ನಿರಂತರ ಒಡನಾಟ, ತಮ್ಮ ನಾಯಕತ್ವ ಗುಣಗಳಿಂದ ಪಕ್ಷ ಸಂಘಟನೆ ಮಾಡುವ ಮೂಲಕ ಅಗ್ರಗಣ್ಯ ಮಾಸ್ ಲೀಡರ್ ಆಗಿ ರೂಪುಗೊಂಡಿದ್ದಾರೆ. ಸದ್ಯ 2023ರ ರಾಜ್ಯ ವಿಧಾನಸಭಾ ಚುನಾವಣೆಗೆ ಇವರು ನಂಜನಗೂಡು ಮೀಸಲು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಗೆದ್ದರೆ ಮತ್ತೆ ಇಂತಹ ನಾಯಕರ ವಿಧಾನಸಭಾ ಪ್ರವೇಶ ಸದನಕ್ಕೆ ಗೌರವದ ಸಂಕೇತ ಆಗಲಿದೆ. ಇಡೀ ರಾಜ್ಯದಲ್ಲೇ ವಿಶಿಷ್ಟವಾಗಿ ಗುರುತಿಸಿಕೊಂಡಿರುವ ನಂಜನಗೂಡನ್ನು ಮಾದರಿ ಕ್ಷೇತ್ರ ಮಾಡಬಲ್ಲರು ಎಂಬುದರಲ್ಲಿ ಸಂಶಯವೇ ಇರದು.

– ಅನಿಲ್ ಕುಮಾರ್, ನಂಜನಗೂಡು.

ಭಾರತದ ಮೊದಲ ಮತದಾರನಿಗೆ ಒಂದು ಸಲಾಂ

ಮಾನ್ಯರೆ,



ಭಾರತ ಸ್ವಾತಂತ್ರ್ಯಗೊಂಡು 75 ವರ್ಷಗಳು ಕಳೆದಿವೆ ಮತ್ತು ಭಾರತ ಪ್ರಪಂಚದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೆಂದು ಹೆಗ್ಗಳಿಕೆ ಗಳಿಸಿಕೊಂಡಿದೆ. ನಮ್ಮ ಪ್ರಜಾಪ್ರಭುತ್ವ ವಿಶ್ವಕ್ಕೆ ಮಾದರಿ, ಈ ಪ್ರಜಾಪ್ರಭುತ್ವದ ಬೆನ್ನೆಲುಬು ಚುನಾವಣಾ ಪ್ರಕ್ರಿಯೆ.

ಇಂತಹ ವಿಶಿಷ್ಟವಾದ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭಾರತದ ಚುನಾವಣೆಯಲ್ಲಿ ಮೊದಲು ಮತ ಚಲಾಯಿಸಿದ ವ್ಯಕ್ತಿ ಸದಾ ವಿಶೇಷವಾಗಿರುತ್ತಾರೆ ಮತ್ತು ಚುನಾವಣೆಯಲ್ಲಿ ಮತದಾರ ಮುಖ್ಯ ಪಾತ್ರವಹಿಸುತ್ತಾನೆ. ನಮ್ಮ ಸ್ವಾತಂತ್ರ್ಯ ಭಾರತದ ಮೊದಲ ಮತದಾರ 106 ವರ್ಷದ ಶಾಮ್ ಶರಣು ನೇಗಿ ಶನಿವಾರ ಮೃತಪಟ್ಟಿರುವುದು ಭಾರತೀಯರಾದ ನಮಗೆ ನೋವಿನ ಸಂಗತಿ. ಸ್ವತಂತ್ರ ಭಾರತದ ಮೊದಲ ಮತದಾರ ಶಾಮ್ ಶರಣು ನೇಗಿ ಹಿಮಾಲಯ ಪ್ರದೇಶದ ಕಿನ್ನರೌ ಬುಡಕಟ್ಟು ಜಿಲ್ಲೆಯಲ್ಲಿ 1917ರ ಜುಲೈನಲ್ಲಿ ಜನಿಸಿದರು.

ಶಾಮ್ ಶರಣು ನೇಗಿ 1951ರ ಅಕ್ಟೋಬರ್ 25ರಲ್ಲಿ ನಡೆದ ಸ್ವತಂತ್ರ ಭಾರತದ ಮೊಟ್ಟಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಕಲ್ಪಾದಲ್ಲಿ ದೇಶದಲ್ಲಿ ಪ್ರಪ್ರಥಮವಾಗಿ ಮತ ಚಲಾಯಿಸುವ ಮೂಲಕ ಭಾರತದ ಇತಿಹಾಸದಲ್ಲಿ ಶಾಶ್ವತ ಸ್ಥಾನಗಳಿಸಿದರು. ಈ ಮೂಲಕ ದೇಶದ ಮೊದಲ ಮತದಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಶಾಮ್ ಶರಣು ನೇಗಿಯವರು ಈ ವರ್ಷ ನವೆಂಬರ್ 2 ರಂದು ನಡೆದ ಚುನಾವಣೆಯಲ್ಲಿ ವಯಸ್ಸಿನ ಕಾರಣ ಅಂಚೆಯಲ್ಲಿ ಮತ ಚಲಾಯಿಸುವ ಮೂಲಕ ತಮ್ಮ ಕೊನೆಯ ಚುನಾವಣೆಯಲ್ಲಿ ಪಾಲ್ಗೊಂಡಿದ್ದರು.

ಶಾಮ್ ಶರಣು ನೇಗಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಹೊಂದಿದ್ದ ಹಿರಿಯ ಜೀವ, ಚುನಾವಣೆಯಲ್ಲಿ ಮತದಾನ ಮಾಡದೆ ಚುನಾವಣಾ ರಜೆಯನ್ನು ತಮ್ಮ ಮೋಜಿಗೆ ಉಪಯೋಗಿಸಿಕೊಳ್ಳುವ ಇಂದಿನ ಯುವ ಜನಾಂಗಕ್ಕೆ ಚುನಾವಣೆಯ ಮಹತ್ವವನ್ನು ತಿಳಿಸಿದ್ದಾರೆ. ಪ್ರಸ್ತುತ ನಮ್ಮ ಭಾರತದ ಯುವಜನಾಂಗಕ್ಕೆ ಶಾಮ್ ಶರಣು ನೇಗಿಯವರು ಪ್ರಜಾಪ್ರಭುತ್ವ ಮತ್ತು ಚುನಾವಣಾ ವಿಷಯಗಳಲ್ಲಿ ಸದಾ ಸ್ಫೂರ್ತಿಯಾಗಲೆಂದು ಆಶಿಸೋಣ ಮತ್ತು ಶಾಮ್ ಶರಣು ನೇಗಿಯವರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾರೈಸೋಣ.


–ರಾಸುಮ ಭಟ್, ಅತಿಥಿ ಉಪನ್ಯಾಸಕರು, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ.

ವಾಹನ ಪತ್ತೆ ಹಚ್ಚುವ ಯೋಜನೆ ವಿಳಂಬವಾಗದಿರಲಿ

ಮಾನ್ಯರೆ,

ಪ್ರಾಥಮಿಕವಾಗಿ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ, ಹೆದ್ದಾರಿಗಳಲ್ಲಿ ಅಪಘಾತಗಳನ್ನು ತಡೆಗಟ್ಟಲು, ವಾಹನಗಳ ವೇಗವನ್ನು ಮೇಲ್ವಿಚಾರಣೆ ಮಾಡಲು ಜೊತೆಗೆ ಪಾರ್ಕಿಂಗ್ ಮೇಲೆ ಗಮನ ಹರಿಸಲು ಮತ್ತು ಯಾಂತ್ರೀಕೃತ ವ್ಯವಸ್ಥೆಯ ಮೂಲಕ, ಅಧಿಕಾರಿಗಳು ವಾಹನಗಳು ಸರಿಯಾದ ಮಾರ್ಗದಲ್ಲಿ ಚಲಿಸುತ್ತಿವೆಯೇ ಎಂಬುದನ್ನು ಪತ್ತೆ ಹಚ್ಚುವ ದೃಷ್ಟಿಕೋನದಿಂದ ಬಸ್ಸು, ಕಾರು, ಟ್ಯಾಕ್ಸಿ ಮತ್ತು ಆಟೋ ಸೇರಿದಂತೆ ಎಲ್ಲಾ ವಾಹನಗಳಲ್ಲಿ ಅದರ ಸ್ಥಳ ಪತ್ತೆ ಸಾಧನಗಳು ಮತ್ತು ತುರ್ತು ಪ್ಯಾನಿಕ್ ಬಟನ್‌ಗಳನ್ನು ಅಳವಡಿಸಲು ಸಚಿವ ಸಂಪುಟ ಅನುಮೋದನೆ ನೀಡಿದ್ದು ಸ್ವಾಗತಾರ್ಹ. ಆದರೆ ಇದು ಕಾರ್ಯರೂಪಕ್ಕೆ ತರುವುದು ವಿಳಂಬ ಆಗಬಾರದು ಏಕೆಂದರೆ ನಮ್ಮ ರಾಜ್ಯದಲ್ಲಿ ಕೆಟ್ಟ ರಾಜಕಾರಣದಿಂದ ಯಾವುದೇ ಸಾರ್ವಜನಿಕ ಹಿತಾಸಕ್ತಿ ಯೋಜನೆಗಳು ಇಲ್ಲಿಯವರೆಗೆ ನಿಗದಿತ ಸಮಯಕ್ಕೆ ಸರಿಯಾಗಿ ಆಗಿಲ್ಲ. ವಾಹನ ಇರುವ ಸ್ಥಳ ಪತ್ತೆ ಸಾಧನಗಳು ಮತ್ತು ತುರ್ತು ಪ್ಯಾನಿಕ್ ಬಟನ್‌ಗಳನ್ನು ಯೋಜನೆಗೆ ಶೇಕಡಾ 60ರಷ್ಟು ಕೇಂದ್ರ ಸರ್ಕಾರ ಹಾಗೂ ಉಳಿದ ಹಣವನ್ನು ರಾಜ್ಯ ಸರ್ಕಾರ ಭರಿಸಲಿದೆ ಎಂಬುದು ಸರಿ, ಆದರೆ ಕೇಂದ್ರ ನಿಗದಿತ ಸಮಯಕ್ಕೆ ಶೇಕಡ 60 ರಷ್ಟು ಹಣ ಯಾವಾಗ ಬಿಡುಗಡೆ ಮಾಡುತ್ತದೆ ಎನ್ನುವುದು ಯಕ್ಷ ಪ್ರಶ್ನೆ. ನಮ್ಮ ರಾಜ್ಯದ ಮಂತ್ರಿಗಳು ಕೇಂದ್ರದ ಮೇಲೆ ಒತ್ತಡ ಹೇರಿ ಅತೀ ಶೀಘ್ರವಾಗಿ ಯೋಜನೆ ಅನುಷ್ಠಾನಗೊಳ್ಳಬೇಕು.

–ವಿಜಯಕುಮಾರ್ ಎಚ್.ಕೆ., ರಾಯಚೂರು



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಭಗವದ್ಗೀತೆಯಲ್ಲಿ ಯಜ್ಞದ ಪರಿಕಲ್ಪನೆ



ವೇದ ಸಂಸ್ಕೃತಿಯಲ್ಲಿ ಯಜ್ಞಕ್ಕೆ ಪ್ರಾಧಾನ್ಯವಿತ್ತು. ವೇದೋಕ್ತವಾದ ಯಜ್ಞಗಳ ಆಚರಣೆಯೇ ಧರ್ಮವೆಂದು ಆ ಕಾಲದ ಜನರು ನಂಬಿದ್ದರು. ರಾಜರು, ಶ್ರೀಮಂತರು ಯಜ್ಞಗಳನ್ನು ಆಚರಿಸುತ್ತಿದ್ದರು. ರಾಜಸೂಯ, ಅಶ್ವಮೇಧ ಮುಂತಾದ ಯಜ್ಞಗಳ ಅನುಷ್ಠಾನ ಸಾರ್ವಭೌಮತ್ವಕ್ಕೆ ಕಾರಣವೆಂಬ ನಂಬಿಕೆ ಆಗ ದೃಢವಾಗಿತ್ತು. ಜ್ಯೋತಿಷ್ಟೋಮ ಎಂಬ ಯಜ್ಞವನ್ನು ಆಚರಿಸಿ ಸ್ವರ್ಗಕ್ಕೆ ಹೋಗಬಹುದು ಎಂದು ಹೇಳಲಾಗಿತ್ತು. ಋಗ್ವೇದದ ಮೊದಲನೆಯ ಮಂತ್ರದಲ್ಲಿ.

ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಮ್।
ಹೋತಾರಂ ರತ್ನಧಾತಮಮ್

ಎಂದು ಅಗ್ನಿಯನ್ನು ಯಜ್ಞದ ದೇವನೆಂದು ಸ್ತುತಿಸಲಾಗಿದೆ. ದೇವತೆಯನ್ನು ಉದ್ದೇಶಿಸಿ ದ್ರವ್ಯ ತ್ಯಾಗವನ್ನು ಮಾಡುವುದು ಯಾಗ ಎಂದು ಹೇಳಲಾಗಿದೆ. ಆದರೆ ಈ ವಿಷಯದಲ್ಲಿ ಕ್ರಾಂತಿಕಾರಕ ಆಲೋಚನೆಯನ್ನು ಮಾಡಿ ಪರಿಕಲ್ಪನೆಯನ್ನು ಪರಿವರ್ತನೆಗೆ ಒಡ್ಡಿದುದು ಭಗವದ್ಗೀತೆ. ವೇದದ ವಾದದಲ್ಲಿ ತೊಡಗಿಕೊಂಡು ಅಧಿಕವಾದ ಕ್ರಿಯಾಕಲಾಪಗಳನ್ನು ಬೆಳೆಸಿ ಸ್ವರ್ಗದಲ್ಲಿ ಭೋಗವನ್ನೂ ಸುಖವನ್ನೂ ಪಡೆಯುತ್ತೇವೆ ಎಂದು ಹಂಬಲಿಸುವವರನ್ನು ಭಗವದ್ಗೀತೆಯು ಖಂಡಿಸುತ್ತದೆ. ಹೂವಿನಂತೆ ಮೃದುವಾದ ಮಾತನ್ನು ಆಡುತ್ತಾ ಸ್ವರ್ಗ ಸುಖಕ್ಕಿಂತ ಮಿಗಿಲಾದುದು ಬೇರೆ ಏನೂ ಇಲ್ಲ ಎನ್ನುವವರು ಅವಿವೇಕಿಗಳು ಎಂದೂ ಹೇಳುತ್ತದೆ.

ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವಚದಂತ್ಯವಿಪಶ್ಚಿತಃ।
ವೇದವಾದರತಾಃ ಪಾರ್ಥ ನಾನ್ಯದಸ್ತೀತಿ ವಾದಿನಃ ॥ 2.42
ಕಾಮಾತ್ಮಾನಃ ಸ್ವರ್ಗಪರಃ ಜನ್ಮಕರ್ಮ ಫಲಪ್ರದಾಮ್ ।
ಕ್ರಿಯಾ ವಿಶೇಷಬಹುಲಾಂ ಭೋಗೈಶ್ವರ್ಯಗತಿಂ ಪ್ರತಿ। 2.43
ಭೋಗೈಶ್ವರ್ಯಪ್ರಸಕ್ತಾನಾಂ ತಯಾಪಹೃತಚೇತಸಾಮ್ ।
ವ್ಯವಸಾಯಾತ್ಮಿಕಾ ಬುದ್ಧಿಃ ಸಮಾಧೌನ ವಿಧೀಯತೇ॥ 2.44

ಎಲೈ ಅರ್ಜುನ, ಅವಿವೇಕಿಗಳಾದ, ವೇದಗಳಲ್ಲಿ ಬರುವ ಕರ್ಮಸ್ತುತಿ ರೂಪದ ವಾಕ್ಯಗಳಲ್ಲಿ ಆಸಕ್ತರಾದ, ಸ್ವರ್ಗಾದಿಗಳಿಗಿಂತ ಮಿಗಿಲಾದದ್ದು ಮತ್ತೇನೂ ಇಲ್ಲವೆಂದು ವಾದಿಸುವ, ಆಸೆಗಳಿಂದ ತುಂಬಿದ ಮನಸ್ಸುಳ್ಳ, ಸ್ವರ್ಗವನ್ನೇ ಪರಮಗುರಿ ಎಂದು ಭಾವಿಸುವ ಜನರು, ಜನನ, ಕರ್ಮ ಮತ್ತು ಅವುಗಳ ಫಲ ಇವನ್ನು ಉತ್ಪಾದಿಸುವ ಹಾಗೂ ಭೋಗ–ಐಶ್ವರ್ಯಗಳನ್ನು ಪಡೆಯಲು ಸಾಧನವಾದ ಬಗೆ ಬಗೆಯ ವೈದಿಕ ಕರ್ಮಗಳ ವಿಚಾರ ತುಂಬಿರುವ, ಹೂವಿನಂತಹ ಚಂದದ ಮಾತನ್ನು ಆಡುತ್ತಾರೆ. ಅಂತಹ ಮಾತುಗಳಿಂದ ಮನಸೋತವರಿಗೆ, ಭೋಗ ಮತ್ತು ಐಶ್ವರ್ಯಗಳಲ್ಲಿ ಆಸಕ್ತರಾದವರಿಗೆ, ಏಕಾಗ್ರತೆಯ ಸ್ಥಿತಿಗೊಯ್ಯುವ ದೃಢನಿರ್ಧಾರದ ಬುದ್ಧಿ ಉಂಟಾಗಲಾರದು.

ಬಹುದ್ರವ್ಯಗಳನ್ನಪೇಕ್ಷಿಸುವ, ಬಹುಧನವ್ಯಯದಿಂದ, ಬಹು ಶರೀರಾಯಾಸದಿಂದ ಸಾಧ್ಯವಾಗುವ ಯಜ್ಞಗಳು ಸಾಮಾನ್ಯ ಜನರಿಗೆ ಅತ್ಯಂತ ದುಷ್ಕರ. ಅವು ತಂದುಕೊಡುವ ಫಲಗಳೂ ಅಶಾಶ್ವತ. ಆದ್ದರಿಂದ ಅವು ಅನಾವಶ್ಯಕ ಎಂಬ ಅಭಿಪ್ರಾಯವನ್ನು ಭಗವದ್ಗೀತೆ ಸೂಚಿಸಿದೆ.

ತ್ರೈವಿದ್ಯಾ ಮಾಂ ಸೋಮಪಾಃ ಪೂತಪಾಪಾಃ
ಯಜ್ಞೈರಿಷ್ಟ್ವಾ ಸ್ವರ್ಗತಿಂ ಪ್ರಾರ್ಥಯಂತೇ।
ತೇ ಪುಣ್ಯಮಾಸಾದ್ಯ ಸುರೇಂದ್ರಲೋಕಮ್
ಅಶ್ನಂತಿ ದಿವ್ಯಾನ್ ದಿವಿದೇವಭೋಗಾನ್। 9.20
ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ
ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ ।
ಏವಂ ತ್ರಯೀಧರ್ಮಮನುಪ್ರಪನ್ನಾ
ಗತಾಗತಂ ಕಾಮಕಾಮಾ ಲಭಂತೇ॥ 9.21

ವೇದಗಳನ್ನು ಬಲ್ಲವರು ನನ್ನನ್ನು ಯಜ್ಞಗಳಿಂದ ಪೂಜಿಸಿ ಸೋಮರಸವನ್ನು ಕುಡಿದು ಪಾಪಗಳನ್ನು ಕಳೆದುಕೊಂಡು ತಮಗೆ ಸ್ವರ್ಗವು ಬೇಕೆಂದು ಬೇಡುತ್ತಾರೆ. ಅವರು ಪುಣ್ಯದಿಂದ ತುಂಬಿದ ಸುರೇಂದ್ರ ಲೋಕಕ್ಕೆ ಹೋಗಿ ಅಲ್ಲಿ ದಿವ್ಯವಾದ ದೇವಭೋಗಗಳನ್ನು ಅನುಭವಿಸುತ್ತಾರೆ. ಅವರು ವಿಶಾಲವಾದ ಆ ಸ್ವರ್ಗಲೋಕವನ್ನು ಅನುಭವಿಸಿ ಪುಣ್ಯಫಲ ಮುಗಿದುಹೋದಾಗ ಮತ್ತೆ ಮನುಷ್ಯಲೋಕವನ್ನು ಪ್ರವೇಶಿಸುತ್ತಾರೆ. ವೇದೋಕ್ತ ಯಜ್ಞಯಾಗಾದಿಗಳನ್ನು ಮಾಡಿದವರು ಹೀಗೆ ಕಾಮೇಚ್ಛುಗಳಾಗಿ ಪುನಃ ಪುನಃ ಹೋಗಿ ಬರುತ್ತಿರುತ್ತಾರೆ.

ಇಲ್ಲಿ ಭಗವದ್ಗೀತೆಯು ಒತ್ತಿ ಹೇಳುತ್ತಿರುವುದೇನೆಂದರೆ ಸ್ವರ್ಗ ಸುಖಾದಿಗಳು ಶಾಶ್ವತವಲ್ಲ. ಯಜ್ಞಯಾಗಗಳ ಫಲಗಳೂ ಅನಿತ್ಯ. ನಿತ್ಯವಾದ ಮೋಕ್ಷವನ್ನು ಅಪೇಕ್ಷಿಸುವವರು ಬ್ರಹ್ಮಜ್ಞಾನವನ್ನು ಪಡೆಯಬೇಕು ಎಂಬುದಾಗಿದೆ.

ಈ ಕಾರಣದಿಂದಲೇ ಭಗವದ್ಗೀತೆಯು ಯಜ್ಞಗಳು ನಾನಾವಿಧ, ಅವುಗಳಲ್ಲಿ ಜ್ಞಾನಯಜ್ಞವೇ ಶ್ರೇಷ್ಠ ಎಂದು ಪ್ರತಿಪಾದಿಸಿದೆ.

ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾ ಪರೇ ।
ಸ್ವಾಧ್ಯಾಯ ಜ್ಞಾನಯಜ್ಞಾಶ್ಚ ಯತಯಃ ಸಂಶಿತವ್ರತಾಃ ॥ 4.28

ಕೆಲವರು ಸಾಧಕರು ದ್ರವ್ಯದಾನರೂಪದ ಯಜ್ಞಗಳನ್ನು ಮಾಡುವರು, ಇನ್ನು ಕೆಲವರು ತಮ್ಮ ತಪಸ್ಸನ್ನೇ ಯಜ್ಞವನ್ನಾಗಿ ಮಾಡುವರು, ಇನ್ನು ಕೆಲವರು ತಮ್ಮ ತಪಸ್ಸನ್ನೇ ಯಜ್ಞವನ್ನಾಗಿ ಮಾಡಿಕೊಳ್ಳುತ್ತಾರೆ. ಮತ್ತೆ ಕೆಲವರು ಯೋಗಾಭ್ಯಾಸ ರೂಪದ ಯಜ್ಞವನ್ನು ಆಚರಿಸುತ್ತಾರೆ. ಕೆಲವರಿಗೆ ಅವರು ಮಾಡುವ ಅಧ್ಯಯನವೇ ಯಜ್ಞ, ಇನ್ನೂ ಕೆಲವರಿಗೆ ಜ್ಞಾನಾರ್ಜನೆ, ಜ್ಞಾನ ವಿತರಣೆ–ಇವೇ ಯಜ್ಞರೂಪವಾಗಿ ಇರುತ್ತವೆ. ಮತ್ತೆ ಕೆಲವರಿಗೆ ಕಠಿಣವಾದ ವ್ರತಗಳ ಅನುಷ್ಠಾನವೇ ಯಜ್ಞ, ಹೀಗೆ ಯಜ್ಞದ ನಾನಾ ರೂಪಗಳಿವೆ. ಘೃತ, ಚರು ಮುಂತಾದ ದ್ರವ್ಯಗಳನ್ನು ಅಗ್ನಿಯಲ್ಲಿ ಹೋಮ ಮಾಡಿ ನಡೆಸುವ ಯಜ್ಞಕ್ಕಿಂತಲೂ, ಅಹಂಕಾರ–ಲೋಭ–ಮೋಹಗಳನ್ನು ಆಹುತಿಯಾಗಿ ಕೊಡುವ ಜ್ಞಾನಯಜ್ಞವು ಶ್ರೇಷ್ಠ ಎಂದು ಭಗವಾನ್ ಕೃಷ್ಣನ ಸ್ಪಷ್ಟ ಅಭಿಪ್ರಾಯ.

ಶ್ರೇಯಾನ್ ದ್ರವ್ಯಮಯಾದ್ ಯಜ್ಞಾದ್ ಜ್ಞಾನಯಜ್ಞಃ ಪರಂತಪ
ಸರ್ವಂ ಕರ್ಮಾಖಿಲಂ ಪಾರ್ಥ ಜ್ಞಾನೇ ಪರಿಸಮಾಪ್ಯತೇ ॥4.33

ಎಲೈ ಅರ್ಜುನ, ವಸ್ತುಗಳನ್ನು ಉಪಯೋಗಿಸಿ ಮಾಡುವ ದ್ರವ್ಯ ಯಜ್ಞಕ್ಕಿಂತ ಮನಃಪರಿವರ್ತನೆಗೆ ಕಾರಣವಾಗುವ ಜ್ಞಾನಯಜ್ಞವೇ ಉತ್ತಮ. ಏಕೆಂದರೆ ಎಲ್ಲ ಬಾಹ್ಯಕರ್ಮಗಳೂ ಜ್ಞಾನದಲ್ಲೇ ಪರಿಸಮಾಪ್ತಿಯನ್ನು ಹೊಂದಬೇಕು.

ಜ್ಞಾನರೂಪದಲ್ಲಿ ಪರಿಣಮಿಸದ ಯಜ್ಞಯಾಗಾದಿ ಕರ್ಮಗಳು ಯಾವ ಸತ್ಫಲವನ್ನೂ ನೀಡಲಾರವು. ಎಲ್ಲ ವೇದೋಕ್ತ ಕರ್ಮಗಳೂ ಜ್ಞಾನದ ಪರಿಣಾಮಕ್ಕಾಗಿ ಉಕ್ತವಾಗಿವೆ. ಯಜ್ಞವನ್ನು ಮಾಡಿ ನಾನು ಇಷ್ಟೆಲ್ಲ ಮಾಡಿದೆ ಎಂಬ ಅಹಂಕಾರ ಉಂಟಾದರೆ ಏನು ಬಂದ ಹಾಗಾಯಿತು? ಎಲ್ಲ ಕರ್ಮಗಳ ಫಲ ಜ್ಞಾನದಲ್ಲಿ ಅಂತರ್ಭಾವವನ್ನು ಹೊಂದುತ್ತದೆ ಎಂಬುದು ಇಲ್ಲಿ ತಾತ್ಪರ್ಯ. ಆ ಜ್ಞಾನವನ್ನು ಪಡೆದುಕೊಳ್ಳಲು ಬೇಕಾದ ಮಾರ್ಗಗಳನ್ನೇ ಭಗವದ್ಗೀತೆಯಲ್ಲಿ ತಿಳಿಸಲಾಗಿದೆ.

ಯಜ್ಞ ಎಂದರೆ ದೇವಪೂಜೆ. ಯಜ್ಞ ಶಬ್ದವು ಯಜ ದೇವಪೂಜಾಯಾಂ ಎಂಬ ಧಾತುವಿನಿಂದ ಹುಟ್ಟಿದೆ. ದೇವರಿಗೆ ಮಾಡುವ ಸೇವೆ ಎಲ್ಲವೂ ಯಜ್ಞವೇ. ಮನುಷ್ಯನು ತನ್ನ ಕರ್ತವ್ಯಗಳನ್ನೆಲ್ಲ ಈಶ್ವರಾರ್ಪಣಬುದ್ಧಿಯಿಂದ ಮಾಡಿದರೆ ಅದೇ ಯಜ್ಞ, ಯಜ್ಞಕ್ಕಾಗಿ ಮಾಡುವ ಕರ್ಮವು ಬಂಧನಕ್ಕೆ ಕಾರಣವಾಗುವುದಿಲ್ಲ.

ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ ।
ತದರ್ಥಂ ಕರ್ಮ ಕೌಂತೇಯ ಮುಕ್ತಸಂಗಃ ಸಮಾಚಾರ ॥ 3.9

ಯಜ್ಞಕ್ಕಾಗಿ ಮಾಡಿದ ಕರ್ಮವನ್ನು ಬಿಟ್ಟು ಉಳಿದ ಎಲ್ಲ ಕರ್ಮಗಳೂ ಬಂಧಕ. ಹಾಗೆ ಈ ಲೋಕವೇ ಒಂದು ಬಂಧನ ಗೃಹವಾಗಿ ಬಿಡುತ್ತದೆ. ಹಾಗಾಗಬಾರದೆಂದರೆ, ಸಂಗವನ್ನು ತ್ಯಜಿಸಿ, ಯಜ್ಞದ ಉದ್ದೇಶದಿಂದ ಸ್ವಾರ್ಥಾಕರ್ಷಣೆಯಿಂದ ಮುಕ್ತನಾಗಿ ಕರ್ತವ್ಯಗಳನ್ನು ಮಾಡು.

ಯಾರು ಭಗವದ್ಗೀತೆಯ ಅಧ್ಯಯನವನ್ನು ಮಾಡುವರೋ ಅದರ ವಿಚಾರಗಳನ್ನು ಭಗವದ್‌ಭಕ್ತರಿಗೂ ಜಿಜ್ಞಾಸುಗಳಿಗೂ ತಿಳಿಸುವರೋ ಅವರು ಜ್ಞಾನಯಜ್ಞವನ್ನು ಮಾಡುತ್ತಾರೆ ಎಂದು ಶ್ರೀ ಕೃಷ್ಣ ಭಗವಂತನೇ ಹೇಳಿದ್ದಾನೆ.

ಅಧ್ಯೇಷ್ಯತೇ ಚಯ ಇಮಂ ಧರ್ಮ್ಯಂ ಸಂವಾದಮಾವಯೋಃ।
ಜ್ಞಾನಯಜ್ಞೇನ ತೇನಾಹಮಿಷ್ಟಃ ಸ್ಯಾಮಿತಿ ಮೇ ಮತಿಃ ॥18.70

ಯಾರು ನಮ್ಮಿಬ್ಬರ (ಕೃಷ್ಣಾರ್ಜುನರ) ಈ ಧರ್ಮಮಯವಾದ ಸಂಭಾಷಣೆಯನ್ನು ಅಧ್ಯಯನ ಮಾಡುವರೋ ಅವರು ಜ್ಞಾನಯಜ್ಞದಿಂದ ನನ್ನನ್ನು ಪೂಜಿಸಿದ್ದಾನೆ ಎಂದು ನನ್ನ ಅಭಿಪ್ರಾಯವಾಗಿದೆ. ಈ ರೀತಿಯಾಗಿ ಜ್ಞಾನಯಜ್ಞವು ಶ್ರೀಮಂತರು–ಬಡವರು ಎಂಬ ಭೇದವಿಲ್ಲದೆ ಸಮಸ್ತರೂ ಮಾಡಬಹುದಾದ ಭಗವತ್ ಕೈಂಕರ್ಯ, ಇದರಿಂದ ಭಗವಂತನು ಸುಪ್ರೀತನಾಗುತ್ತಾನೆ ಎಂದು ತಿಳಿದುಕೊಳ್ಳಬಹುದು. ಈ ಯಜ್ಞಕ್ಕೆ ಬೇರೆ ಪುರೋಹಿತರ ಅಥವಾ ಋತ್ವಿಕ್ಕುಗಳ ಅವಶ್ಯಕತೆ ಇಲ್ಲ. ಆತ್ಮನೇ ಯಜಮಾನ, ಬುದ್ಧಿಯೇ ಪತ್ನಿ, ಮನಸ್ಸೇ ಪುರೋಹಿತ, ಗೀತೆಯ ಶ್ಲೋಕಗಳೇ ಮಂತ್ರಗಳು. ಈ ಯಜ್ಞಕ್ಕೆ ಜಾತಿ ಮತಗಳ ಹಂಗಿಲ್ಲ. ಲಿಂಗಭೇದವಿಲ್ಲ. ಎಲ್ಲ ಮಾನವರಿಗೆ ಇದನ್ನು ಮಾಡುವ ಹಕ್ಕು ಇದೆ.

ಗೀತಾ ಸುಗೀತಾ ಕರ್ತವ್ಯಾ ಕಿಮನ್ಯೈಃ ಶಾಸ್ತ್ರ ವಿಸ್ತರೈಃ।
ಯಾ ಸವಯಂ ಪದ್ಮನಾಭಸ್ಯ ಮುಖಪದ್ಮಾದ್ ವಿನಿಃಸೃತಾ॥

ಸ್ಥಳೀಯ ಪ್ರದೇಶಾಭಿವೃದ್ಧಿ ನಿಯಮಾವಳಿ ಉಲ್ಲಂಘನೆ ಆರೋಪ: ಸಂಸದರ ವಿರುದ್ಧ ದೂರು

ಮೈಸೂರು, ನ.8(ಜಿಎ)– ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ತಮ್ಮ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ವನ್ನು ಹಂಚಿಕೆ ಮಾಡುವಲ್ಲಿ ನಿಯಮಾವಳಿ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಜಿಲ್ಲಾಧಿಕಾರಿಗಳ ಕಚೇರಿಗೆ ದೂರು ಸಲ್ಲಿಸಿದ್ದಾರೆ.



ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಗೆ ಮಂಗಳವಾರ ಭೇಟಿ ನೀಡಿದ ಎಂ.ಲಕ್ಷ್ಮಣ್ ಜಿಲ್ಲಾಧಿಕಾರಿಗಳ ಅನುಪಸ್ಥಿತಿಯಲ್ಲಿ ಅಪರ ಜಿಲ್ಲಾಧಿಕಾರಿ ಮಂಜುನಾಥ ಸ್ವಾಮಿ ಅವರಿಗೆ ಸಂಸದರ ವಿರುದ್ಧ ದೂರು ಸಲ್ಲಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವುದೇ ಸಂಸದರಾದರೂ ಮಾರ್ಗಸೂಚಿ ಅಡಿ ಕ್ಷೇತ್ರದ ಹೊರಗಿನ ಟ್ರಸ್ಟ್‌ಗಳಿಗೆ ಅನುದಾನ ನೀಡಲು ಅವಕಾಶವಿಲ್ಲ. ಆದರೆ, ಪ್ರತಾಪ್ ಸಿಂಹ ಅವರ ಪತ್ನಿ ಮೂಡಿಗೆರೆ ಪಟ್ಟಣದಲ್ಲಿ ಹೊಯ್ಸಳ ಕ್ಲಿನಿಕ್ ನಡೆಸುತ್ತಿದ್ದು, ಅದಕ್ಕೆ ಡಾ.ಮುರಳಿ ಕೃಷ್ಣ ಎಂಬುವರು ಛೇರ್ಮನ್ ಆಗಿದ್ದಾರೆ. ಇವರ ನೇತೃತ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಕಕ್ಕಿಂಜೆಯಲ್ಲಿ ಬೇಂದ್ರಾಳ ವೆಂಕಟಕೃಷ್ಣ ಇರ್ವತ್ರಾಯ ಸ್ಮಾರಕ ಟ್ರಸ್ಟ್ ಆಸ್ಪತ್ರೆ ನಡೆಸುತ್ತಿದ್ದು, ಈ ಟ್ರಸ್ಟ್‌ಗೆ 2021 ರ ಸೆಪ್ಟೆಂಬರ್ 5ರಂದು 18 ಲಕ್ಷ ರೂ. ವೆಚ್ಚದ ಆಂಬುಲೆನ್ಸ್ ಖರೀದಿಸಲು ಅನುದಾನ ನೀಡಿದ್ದಾರೆ.

ಮತ್ತೊಂದೆಡೆ ಮೈಸೂರಿನಲ್ಲಿ ಎಂ.ಗೋಪಿನಾಥ್ ಶೆಣೈ ಚಾರಿಟೇಬಲ್ ಟ್ರಸ್ಟ್‌ಗೆ 23 ಲಕ್ಷ ರೂ. ಮೌಲ್ಯದ ಆಂಬುಲೆನ್ಸ್ ಅನ್ನು ನೀಡಿದ್ದು, ಈ ವಿಳಾಸದಲ್ಲಿ ಯಾವುದೋ ಹೋಟೆಲ್ ನಡೆಸಲಾಗುತ್ತಿದೆ. ನಕಲಿ ವಿಳಾಸಕ್ಕೆ ಅನುದಾನ ನೀಡುವ ಮೂಲಕ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ಹಂಚಿಕೆಯಲ್ಲಿ ನಿಯಮಾವಳಿ ಉಲ್ಲಂಘಿಸಿದ್ದಾರೆ. ಈ ಬಗ್ಗೆ ಸೂಕ್ತ ತನಿಖೆಗೆ ಆದೇಶಿಸಬೇಕು ಹಾಗೂ ಆ ಎರಡು ಆಂಬುಲೆನ್ಸ್‌ಗಳನ್ನು ಮೈಸೂರು–ಕೊಡಗು ಕ್ಷೇತ್ರದಲ್ಲಿ ಅವಶ್ಯಕತೆ ಇರುವ ವಿಧಾನಸಭಾ ಕ್ಷೇತ್ರಕ್ಕೆ ನೀಡಬೇಕು ಎಂದರು. ಈ ವೇಳೆ ನಗರಾಧ್ಯಕ್ಷ ಆರ್.ಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ರಾಮು, ಮುಖಂಡರಾದ ಕುರುಬಾರಳ್ಳಿ ಪ್ರಕಾಶ್, ಜಿ.ಮಾರುತಿ, ರಾಜೇಶ್, ಮಹೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಹಿರಿಯ ನಾಯಕ ಅಡ್ವಾಣಿಗೆ 95ನೇ ಹುಟ್ಟುಹಬ್ಬ

ಪ್ರಧಾನಿ ಸೇರಿ ಬಿಜೆಪಿ ನಾಯಕರಿಂದ ಶುಭಾಶಯ



ನವದೆಹಲಿ: ನವೆಂಬರ್ 8, ಮಾಜಿ ಉಪ ಪ್ರಧಾನಿ, ಬಿಜೆಪಿಯ ಹಿರಿಯ ನಾಯಕ ಎಲ್ ಕೆ ಅಡ್ವಾಣಿಯವರ 95ನೇ ಜನ್ಮದಿನ.

ಈ ಹಿನ್ನೆಲೆಯಲ್ಲಿ ದೆಹಲಿಯಲ್ಲಿರುವ ಅವರ ನಿವಾಸಕ್ಕೆ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಬಿಜೆಪಿ ನಾಯಕರು ಭೇಟಿ ನೀಡಿ ಶುಭಾಶಯ ತಿಳಿಸಿದರು. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕೂಡ ಭೇಟಿ ನೀಡಿ ಶುಭಾಶಯ ತಿಳಿಸಿದ್ದಾರೆ. ಕೇಂದ್ರ ಸಚಿವರು, ಹಲವು ಬಿಜೆಪಿ ನಾಯಕರು ಸೋಷಿಯಲ್ ಮೀಡಿಯಾ ಮೂಲಕ ಹಿರಿಯ ನಾಯಕನಿಗೆ ಶುಭ ಕೋರಿದ್ದಾರೆ. 1927ರ ನವೆಂಬರ್ 8ರಂದು ಕರಾಚಿಯಲ್ಲಿ ಜನಿಸಿದ ಅಡ್ವಾಣಿಯವರು 1998ರಿಂದ 2004ರವರೆಗೆ ಎನ್‌ಡಿಎ ಮೈತ್ರಿ ಸರ್ಕಾರದಲ್ಲಿ ಗೃಹ ಸಚಿವರಾಗಿದ್ದರು. ನಂತರ 2002ರಿಂದ 2004ರವರೆಗೆ ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಲ್ಲಿ ಉಪ ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು. ಬಿಜೆಪಿ ಪಕ್ಷದ ಸ್ಥಾಪಕರಲ್ಲೊಬ್ಬರು ಅಡ್ವಾಣಿಯವರು. ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್ ಎಸ್‌ಎಸ್) ಮೂಲಕ ತಮ್ಮ ರಾಜಕೀಯ ಬದುಕನ್ನು ಆರಂಭಿಸಿದ ಅಡ್ವಾಣಿಯವರು ದೇಶದ ಅಗ್ರಮಾನ್ಯ ರಾಜಕೀಯ ನಾಯಕರಲ್ಲೊಬ್ಬರು. 2015ರಲ್ಲಿ ಕೇಂದ್ರ ಸರ್ಕಾರ ಅವರಿಗೆ ದೇಶದ ಎರಡನೇ ಅತಿದೊಡ್ಡ ನಾಗರಿಕ ಸನ್ಮಾನವಾದ ಪದ್ಮ ವಿಭೂಷಣ ನೀಡಿ ಗೌರವಿಸಿತ್ತು.

ದಾಖಲೆ ರಹಿತ ಜನವಸತಿ ಪ್ರದೇಶಗಳ ಪರಿವರ್ತಿಸಿ ಅಲ್ಲಿನ ನಿವಾಸಿಗಳಿಗೆ ಹಕ್ಕುಪತ್ರ

ಮೈಸೂರು, ನ.8(ಪಿಎಂ)– ಖಾಸಗಿ ಜಮೀನುಗಳಲ್ಲಿರುವ ದಾಖಲೆ ರಹಿತ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮದ ಭಾಗವಾಗಿ ಪರಿವರ್ತಿಸಿ, ಅಲ್ಲಿನ ನಿವಾಸಿಗಳಿಗೆ ಹಕ್ಕುಪತ್ರ ನೀಡಲು ಸರ್ಕಾರ ಮುಂದಾಗಿದ್ದು, ಇದಕ್ಕಾಗಿ ಕರ್ನಾಟಕ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತಂದಿದೆ.

ಈ ಸಂಬಂಧ ಕಂದಾಯ ಇಲಾಖೆ ಸುತ್ತೋಲೆ ಹೊರಡಿಸಿದ್ದು, ಈ ಯೋಜನೆ ಅನುಷ್ಠಾನದ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ರಾಜ್ಯದಲ್ಲಿ ನೆಲೆಗೊಂಡಿರುವ ಜನವಸತಿಗಳ ಪೈಕಿ ಹಲವು ಜನವಸತಿಗಳು ದಾಖಲೆ ರಹಿತವಾಗಿ ಉಳಿದುಕೊಂಡಿವೆ. ವಿಶೇಷವಾಗಿ ಲಂಬಾಣಿ ತಾಂಡ, ಗೊಲ್ಲರಹಟ್ಟಿ, ವಡ್ಡರಹಟ್ಟಿ, ನಾಯಕರ ಹಟ್ಟಿ, ಕುರುಬರ ಹಟ್ಟಿ, ಹಾಡಿ, ಮಜರೆ, ದೊಡ್ಡಿ, ಪಾಳ್ಯ, ಕ್ಯಾಂಪ್, ಕಾಲೋನಿ ಇತ್ಯಾದಿ ಹೆಸರುಗಳಿಂದ ಗುರುತಿಸಲ್ಪಟ್ಟಿರುವ ಜನವಸತಿಗಳು ದಾಖಲೆರಹಿತವಾಗಿಯೇ ಸಮಾಜದ ಮುಖ್ಯ ವಾಹಿನಿಗೆ ಬರದೇ ಉಳಿದುಕೊಂಡಿವೆ.

ಇಂತಹ ಜನವಸತಿಗಳನ್ನು ಕಂದಾಯ ಗ್ರಾಮಗಳಾಗಿ ಅಥವಾ ಅಸ್ತಿತ್ವದಲ್ಲಿರುವ ಕಂದಾಯ ಗ್ರಾಮದ ಭಾಗವಾಗಿ ಪರಿವರ್ತಿಸಿ ಅಲ್ಲಿಯ ನಿವಾಸಿಗಳಿಗೆ ವಾಸ್ತವ್ಯದ ಹಕ್ಕು ದಾಖಲೆಗಳನ್ನು ಒದಗಿಸಿ, ಅಂತಹ ಕುಟುಂಬಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಸರ್ಕಾರದ ನಿರ್ಧಾರ

ಸರ್ಕಾರವು ಕರ್ನಾಟಕ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತಂದು ಕಲಂ 38–ಎ ಮತ್ತು ನಿಯಮ 9–ಸಿ ಸೇರ್ಪಡೆಗೊಳಿಸುವ ಮೂಲಕ ಖಾಸಗಿ ಜಮೀನಿನಲ್ಲಿ ನೆಲೆಗೊಂಡಿರುವ ದಾಖಲೆರಹಿತ ಜನವಸತಿ ಪ್ರದೇಶಗಳಲ್ಲಿನ ನಿವಾಸಿಗಳಿಗೆ ಹಕ್ಕು ಪತ್ರ ನೀಡಲು ಅವಕಾಶ ಕಲ್ಪಿಸಿದೆ. ಖಾಸಗಿ ಜಮೀನುಗಳಲ್ಲಿ ನೆಲೆಸಿರುವ ದಾಖಲೆ ರಹಿತ ಜನವಸತಿಗಳನ್ನು ಕಂದಾಯ ಗ್ರಾಮ, ಗ್ರಾಮದ ಭಾಗವಾಗಿ ಪರಿವರ್ತಿಸಿ, ನಿವಾಸಿಗಳಿಗೆ ಹಕ್ಕುಪತ್ರ ನೀಡಲು ಹಲವು ಮಾರ್ಗಸೂಚಿ ಸಿದ್ಧಪಡಿಸಲಾಗಿದೆ.

ದಾಖಲೆರಹಿತ ಜನವಸತಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸೂಚಿಸಿರುವ ಮಾನದಂಡಗಳನ್ವಯ ಖಾಸಗಿ ಜಮೀನಿನಲ್ಲಿ ಜನವಸತಿಗಳು ಇದ್ದಲ್ಲಿ ಅಂತಹ ಸರ್ವೇ ನಂಬರ್ ಮತ್ತು ವಿಸ್ತೀರ್ಣ ಗುರುತಿಸುವ ಪ್ರಕ್ರಿಯೆ ಸೇರಿದಂತೆ ಹಲವು ಮಾರ್ಗಸೂಚಿಗಳನ್ನು ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದೆ.

ಖಾಸಗಿ ಜಮೀನುಗಳಲ್ಲಿ ನೆಲೆಗೊಂಡಿರುವ ಜನವಸತಿಗಳನ್ನು ಕಂದಾಯ ಗ್ರಾಮ, ಗ್ರಾಮದ ಭಾಗದ ಬಡಾವಣೆ, ಉಪಗ್ರಾಮ ಆಗಿ ಪರಿವರ್ತಿಸಲು ಪ್ರಸ್ತಾವನೆ ಸಲ್ಲಿಸುವ ಮುನ್ನ ಜಿಲ್ಲಾಧಿಕಾರಿಗಳು ಮೊದಲಿಗೆ ಅವುಗಳು ನೆಲೆಗೊಂಡಿರುವ ಜಾಗವನ್ನು ಸರ್ಕಾರದಲ್ಲಿ ನಿಹಿತಗೊಳಿಸಲು ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಕಲಂ 38–ಎ ಪ್ರಕಾರ ಅಧಿಸೂಚನೆಯನ್ನು 'ನಮೂನೆ 2–ಇ'ರಲ್ಲಿ ಹೊರಡಿಸಬೇಕು. ಸದರಿ ಅಧಿಸೂಚನೆ ಸಂಬಂಧ ಸಾರ್ವಜನಿಕರ ಸಲಹೆ, ಆಕ್ಷೇಪಣೆಗಳನ್ನು ಆಹ್ವಾನಿಸಿ, ಜಿಲ್ಲಾಧಿಕಾರಿಗಳ ಹೆಸರಿನಲ್ಲಿ ಜಿಲ್ಲಾಧಿಕಾರಿಗಳು ಅವರ ಹಂತದಲ್ಲೇ ರಾಜ್ಯಪತ್ರದಲ್ಲಿ ಪ್ರಕಟಿಸಬೇಕು ಎಂಬುದು ಸೇರಿದಂತೆ 25ಕ್ಕೂ ಹೆಚ್ಚು ಮಾರ್ಗಸೂಚಿಗಳನ್ನು ಸುತ್ತೋಲೆಯಲ್ಲಿ ತಿಳಿಸಲಾಗಿದೆ.


ಜಿಲ್ಲಾಧಿಕಾರಿಗಳು ನಮೂನೆ 2–ಇ ಅಧಿಸೂಚನೆ ಹೊರಡಿಸಿ ಖಾಸಗಿ ಜಮೀನನ್ನು ಸರ್ಕಾರಕ್ಕೆ ನಿಹಿತಗೊಳಿಸಿದ ತಕ್ಷಣವೇ ತಹಸೀಲ್ದಾರ್ ಅವರು ಮತ್ತು ಸಹಾಯಕ ಆಯುಕ್ತರು ಪ್ರಕ್ರಿಯೆಗಳಾದ ಅರ್ಜಿ ಆಹ್ವಾನ, ಅರ್ಜಿ ಪರಿಶೀಲನೆ, ನೋಟಿಸ್ ಜಾರಿ ಮಾಡುವುದು, ವಿಚಾರಣೆ ಮಾಡುವುದು ಮತ್ತು ನೋಂದಣಿ ಪತ್ರ ವಿತರಣೆಗೆ ಅಗತ್ಯವಿರುವ ಇತರೆ ಕ್ರಮಗಳನ್ನು ಪ್ರಾರಂಭಿಸಬೇಕು. ಹಕ್ಕುಪತ್ರ ವಿತರಣೆಯ ಪ್ರಕ್ರಿಯೆ ಮತ್ತು ಹೊಸ ಕಂದಾಯ ಗ್ರಾಮ ಘೋಷಣೆ ಪ್ರಕ್ರಿಯೆಯನ್ನು ಜೊತೆ ಜೊತೆಯಾಗಿ ನಿಯಮಾನುಸಾರ ಕ್ರಮವಹಿಸಬೇಕು.

ಹೊಸ ಕಂದಾಯ ಗ್ರಾಮ ಘೋಷಣೆ ಮಾಡುವವರೆಗೆ ಕಾಯುವ ಅವಶ್ಯಕತೆ ಇಲ್ಲವೆಂದು ಸ್ಪಷ್ಟಪಡಿಸಲಾಗಿದೆ ಎಂದು ಕಂದಾಯ ಗ್ರಾಮಗಳ ರಚನಾ ಕೋಶದ ನಿರ್ದೇಶಕರೂ ಆದ ಕಂದಾಯ ಇಲಾಖೆಯ ಪದನಿಮಿತ್ತ ಸಕಾರದ ಉಪ ಕಾರ್ಯದರ್ಶಿ ಡಾ.ಎಂ.ಎಸ್. ರಾಜೇಂದ್ರ ಪ್ರಸಾದ್ ತಾವು ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಟಿ20 ವಿಶ್ವಕಪ್: ಇಂದು ಕಿವೀಸ್–ಪಾಕ್ ಮೊದಲ ಸೆಮಿಫೈನಲ್

ಸಿಡ್ನಿ, ನ.8– ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಪಂದ್ಯಾವಳಿಯ ಮೊದಲ ಸೆಮಿಫೈನಲ್ ಪಂದ್ಯ ಬುಧವಾರ ನಡೆಯಲಿದ್ದು, ನ್ಯೂಜಿಲೆಂಡ್ ಹಾಗೂ ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ.



ಇಲ್ಲಿನ ಸಿಡ್ನಿ ಮೈದಾನದಲ್ಲಿ ಭಾರತೀಯ ಕಾಲಮಾನ ಮಧ್ಯಾಹ್ನ 1.30ಕ್ಕೆ ಪಂದ್ಯ ಆರಂಭವಾಗಲಿದೆ. ಮೊದಲ ಗುಂಪಿನಲ್ಲಿ 7 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದ ಕಿವೀಸ್ ಬಳಗ 4ರ ಘಟ್ಟ ಪ್ರವೇಶಿಸಿದೆ. ಮತ್ತೊಂದೆಡೆ ಎರಡನೇ ಗುಂಪಿನಲ್ಲಿ ಮೊದಲೆರಡು ಪಂದ್ಯ ಸೋತ ನಂತರ ಪುಟಿದೆದ್ದ ಪಾಕಿಸ್ತಾನ ತಂಡಕ್ಕೆ ಅದೃಷ್ಟ ಜೊತೆಗಿತ್ತು. ಹೀಗಾಗಿ ದಕ್ಷಿಣ ಆಫ್ರಿಕಾವನ್ನು ನೆದರ್ಲೆಂಡ್ಸ್ ತಂಡ ಮಣಿಸಿದ್ದರಿಂದ ಸೃಷ್ಟಿಯಾದ ಅವಕಾಶ ಸಮರ್ಥವಾಗಿ ಬಳಸಿಕೊಂಡ ಪಾಕಿಸ್ತಾನ 6 ಅಂಕ ಗಳಿಸಿ ಸೆಮಿಫೈನಲ್ ಪ್ರವೇಶಿಸಿದೆ. ಟ್ರೆಂಟ್ ಬೌಲ್ಟ್, ಟಿಮ್ ಸೌಥಿ ಮತ್ತು ಲಾಕಿ ಫರ್ಗ್ಯುಸನ್ ನ್ಯೂಜಿಲೆಂಡ್ ಬೌಲಿಂಗ್ ಶಕ್ತಿಯಾಗಿದ್ದರೇ, ಪಾಕ್ ತಂಡದ ಶಹೀನ್ ಶಾ ಆಫ್ರಿದಿ, ಹ್ಯಾರಿಸ್ ರೌಫ್ ಹಾಗೂ ನಸೀಮ್ ಶಹಾ ಕೂಡ ಕಿವೀಸ್ ಬಲಿಷ್ಠ ಬ್ಯಾಟಿಂಗ್ ಪಡೆ ನಡುಗಿಸುವ ಸಮರ್ಥರಾಗಿದ್ದಾರೆ.

ಜೇಮ್ಸ್ ನಿಶಾಮ್, ಗ್ಲೆನ್ ಫಿಲಿಪ್ಸ್ ಅಮೋಘ ಲಯದಲ್ಲಿದ್ದು, ಪಾಕ್ ಬೌಲಿಂಗ್ ಪಡೆಗೆ ಕಠಿಣ ಸವಾಲೊಡ್ಡಬಲ್ಲರು. ನಾಯಕ ಬಾಬರ್ ಆಜಂ ಲಯ ಕಂಡುಕೊಳ್ಳುವಲ್ಲಿ ಸಫಲರಾಗಿಲ್ಲ. ರಿಜ್ವಾನ್ ಕೂಡ ಅಸ್ಥಿರ ಪ್ರದರ್ಶನ ತೋರಿದ್ದಾರೆ. ಶಾದಾಬ್ ಖಾನ್, ಶಾನ್ ಮಸೂದ್ ಮತ್ತು ಇಫ್ತಿಕಾರ್ ಅಹಮದ್ ಅವರ ಆಟವೇ ಪಾಕ್ ಪಾಲಿಗೆ ಮಹತ್ವದ್ದಾಗಲಿದೆ. ನ್ಯೂಜಿಲೆಂಡ್ ಎದುರು ಈ ಹಿಂದಿನ ಮುಖಾಮುಖಿಗಳಲ್ಲಿ ಪಾಕ್ ಸಿಹಿ ಉಂಡಿದ್ದೇ ಹೆಚ್ಚು. 1992ರ ಏಕದಿನ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಪಾಕ್ ಎದುರು ಕಿವೀಸ್ ಶರಣಾಗಿತ್ತು. ಆ ವರ್ಷ ಪಾಕ್ ಚಾಂಪಿಯನ್ ಆಗಿತ್ತು. 1992, 1999ರಲ್ಲಿ ಮುಖಾಮುಖಿಯಾದಾಗಲೂ ಪಾಕ್ ಬಳಗವು ಮೇಲುಗೈ ಸಾಧಿಸಿತ್ತು. 2007ರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಕೂಡ ಕಿವೀಸ್ ಎದುರು ಪಾಕ್ ಗೆಲುವು ಸಾಧಿಸಿತ್ತು. ಇದೇ ಸಾಧನೆ ಮುಂದುವರಿಸುವ ವಿಶ್ವಾಸದಲ್ಲಿ ಪಾಕಿಸ್ತಾನವಿದೆ.

ನ್ಯೂಜಿಲೆಂಡ್: ಕೇನ್ ವಿಲಿಯಮ್ಸನ್ (ನಾಯಕ), ಮಾರ್ಟಿನ್ ಗಪ್ಟಿಲ್, ಫಿನ್ ಅಲೆನ್, ಗ್ಲೆನ್ ಫಿಲಿಪ್ಸ್, ಮಾರ್ಕ್ ಚಾಪ ಮನ್, ಮಿಚೆಲ್ ಬ್ರೇಸ್‌ವೆಲ್, ಮಿಚೆಲ್ ಸ್ಯಾಂಟನರ್, ಆಡಂ ಮಿಲ್ನೆ, ಈಶ್ ಸೋಧಿ, ಲಾಕಿ ಫರ್ಗ್ಯುಸನ್, ಟಿಮ್ ಸೌಥಿ, ಡೆವೊನ್ ಕಾನ್ವೆ, ಡೆರಿಲ್ ಮಿಚೆಲ್, ಜೇಮ್ಸ್ ನಿಶಾಮ್, ಟ್ರೆಂಟ್ ಬೌಲ್ಟ್.

ಪಾಕಿಸ್ತಾನ: ಬಾಬರ್ ಆಜಂ (ನಾಯಕ), ಆಸಿಫ್ ಅಲಿ, ಹೈದರ್ ಅಲಿ, ಖುಷ್‌ದಿಲ್ ಶಹಾ, ಶಾನ್ ಮಸೂದ್, ಮೊಹಮ್ಮದ್ ಹ್ಯಾರಿಸ್, ಇಫ್ತಿಕಾರ್ ಅಹಮದ್, ಶಾದಾಬ್ ಖಾನ್, ಮೊಹಮ್ಮದ್ ನವಾಜ್, ಮೊಹಮ್ಮದ್ ವಾಸೀಂ ಜೂನಿಯರ್, ಮೊಹಮ್ಮದ್ ರಿಜ್ವಾನ್ (ವಿಕೆಟ್‌ಕೀಪರ್), ಹ್ಯಾರಿಸ್ ರೌಫ್, ಮೊಹಮ್ಮದ್ ಹಸ್ನೈನ್, ನಸೀಮ್ ಶಹಾ, ಶಾಹೀನ್ ಆಫ್ರಿದಿ.

'ಭಾರತೀಯ ಹಬ್ಬಗಳು' ಸಾಂಸ್ಕೃತಿಕ ಉತ್ಸವ

ಮೈಸೂರಿಗರ ಮನಸೂರೆಗೊಂಡ ತ್ರಿಪುರ ಗುಡ್ಡಗಾಡು ಜನಾಂಗದ ಅಮೋಘ ನೃತ್ಯ ಪ್ರದರ್ಶನ





ಮೈಸೂರು, ನ.8(ಎಂಕೆ)– ಸಾಂಸ್ಕೃತಿಕ ನಗರಿಯಲ್ಲಿ ತ್ರಿಪುರ ನಾಡಿನ ನೃತ್ಯ ವೈಭವ... ನೋಡುಗರ ಹೃನ್ಮನ ಗೆದ್ದ ಗುಡ್ಡಗಾಡು ಕಲಾವಿದರ ನೃತ್ಯರೂಪಕ...

ಮೈಸೂರಿನ ಕಲಾಮಂದಿರದಲ್ಲಿ ಇನ್ಫೋಸಿಸ್ ಪ್ರತಿಷ್ಠಾನ ಬೆಂಗಳೂರು ಹಾಗೂ ಭಾರತೀಯ ವಿದ್ಯಾಭವನ (ಬಿವಿಬಿ) ಬೆಂಗಳೂರು–ಮೈಸೂರು ಕೇಂದ್ರಗಳ ಸಂಯುಕ್ತಾಶ್ರಯದಲ್ಲಿ 'ಭಾರತೀಯ ಹಬ್ಬಗಳು' ಶೀರ್ಷಿಕೆಯಡಿ ಆಯೋಜಿಸಿರುವ 'ಏಳು ದಿನಗಳ ಸಾಂಸ್ಕೃತಿಕ ಉತ್ಸವ'ದಲ್ಲಿ ತ್ರಿಪುರಾದ ಹಬ್ಬಗಳ ಕುರಿತ ಗುಡ್ಡಗಾಡು ಜನಾಂಗದ ನೃತ್ಯ ಪ್ರದರ್ಶನ ಮೈಸೂರಿಗರ ಮನಸೂರೆಗೊಂಡಿತು.

ಚೆಂದದ ಉಡುಗೆ–ತೊಡುಗೆಗಳೊಂದಿಗೆ ಅತ್ಯಾಕರ್ಷಕವಾಗಿ ಕಣ್ಮನ ಸೆಳೆಯುತ್ತಿದ್ದ ಕಲಾವಿದರ ಹಾಡು–ಕುಣಿತಕ್ಕೆ ಕರತಾಡನಗಳ ಜೈಕಾರ ಜೋರಾಗಿತ್ತು. ತ್ರಿಪುರ ರಾಜ್ಯದ ಹಬ್ಬಗಳ ಸೊಗಡನ್ನು ಪಸರಿಸಿದ ಕಲಾವಿದರು, ಕಲಾಸಕ್ತರಿಗೆ ಸಂಗೀತ ರಸದೌತಣವನ್ನೇ ಉಣಬಡಿಸಿದರು.

ಶ್ರೀಮತಿ ಪಾಂಚಾಲಿ ಡೆಬ್ ವರ್ಮ ನಿರ್ದೇಶನದಲ್ಲಿ ಅಗರ್‌ತಲ ಕಲಾವಿದರ ತಂಡದ ವಿಮಲ್ ಡೆಬ್ ವರ್ಮ ಅವರ 'ಜಾದು ಕೊಲಿಜಾ'(ಸ್ವಾಗತ ಗೀತೆ) ಹಾಡಿನೊಂದಿಗೆ ಆರಂಭವಾದ ನೃತ್ಯ ಪ್ರದರ್ಶನ ನೋಡುಗರಿಗೆ ಮೋಡಿ ಮಾಡಿತು. ನಂತರ 'ಮಮಿತಾ'(ಸುಗ್ಗಿ ಕುಣಿತ) ನೃತ್ಯ ಪ್ರದರ್ಶನದಲ್ಲಿ ಆಹಾರ ಪದಾರ್ಥಗಳನ್ನು ನೀಡುವ ಭೂತಾಯಿಗೆ ವಂದಿಸಿ, ಸಂಭ್ರಮಿಸಿದರು.

ಕೃಷಿ ಕಾಯಕದಲ್ಲಿ ತೊಡಗಿರುವ ಗಂಡನಿಗೆ ಸಲಹೆಗಳನ್ನು ನೀಡುವ ಹೆಂಡತಿ ಕುರಿತಾದ 'ತುಕದ್ ಗೀತ್‌ಯಾ' ನೃತ್ಯ ಪ್ರದರ್ಶನ ನೀಡಿದ ಮಹಿಳಾ ಕಲಾವಿದರು ತಮ್ಮ ಮನಮೋಹಕ ನೃತ್ಯದ ಮೂಲಕ ಎಲ್ಲರನ್ನು ನಿಬ್ಬೆರಗಾಗಿಸಿದರು. ಬಳಿಕ ಕಲಾವಿದ ವಿಮಲ್ ಡೆಬ್ ವರ್ಮ, ಪ್ರಕೃತಿ ಸೌಂದರ್ಯ ಹಾಗೂ ಮಳೆಯ ಸುರಿಯುವಾಗ ಉದಯಿಸುವ ಸೂರ್ಯನನ್ನು ವರ್ಣಿಸುವ 'ಬಿಮುಲ್ ಸಾಂಗ್ಸ್'(ಜಾನಪದ ಹಾಡುಗಳು)ಗಳನ್ನು ಹಾಡಿ ಅಪಾರ ಮೆಚ್ಚುಗೆ ಪಡೆದರು.

ತಲೆಯ ಮೇಲೆ ಉರಿಯುತ್ತಿದ್ದ ದೀಪ ಇಟ್ಟುಕೊಂಡು, ಕೈಯ್ಯಲ್ಲಿ ಪ್ಲೇಟ್‌ಗಳನ್ನು ಹಿಡಿದು ಲಕ್ಷ್ಮಿ, ದುರ್ಗೆ ಇನ್ನಿತರೆ ಶಕ್ತಿ ದೇವತೆಗಳ ಆರಾಧನೆಯ 'ಹೋಜಗಿರಿ' ನೃತ್ಯ ಪ್ರದರ್ಶನ ನೀಡಿದ ಕಲಾವಿದರು ಶಿಳ್ಳೆ–ಚಪ್ಪಾಳೆ ಗಿಟ್ಟಿಸಿದರು. ನಂತರ ಕಲಾವಿದರಾದ ಬಿಸ್ವಾ ಮತ್ತು ಜಾಸ್ಮಿನ್ 'ಯುಗಳ' ನೃತ್ಯ ಪ್ರದರ್ಶನ ನೀಡಿ ಸೈ ಎನಿಸಿಕೊಂಡರು.

ಫಸಲನ್ನು ಕಟಾವು ಮಾಡಿದ ನಂತರ ಖಾಲಿಯಾದ ಹೊಲಗಳಲ್ಲಿ ಲೆಬಂಗ್ ಎನ್ನುವ ಕೀಟ ಹಿಡಿಯಲು ಜನಾಂಗದವರು ಹೊರಡುತ್ತಾರೆ. ಬಿಲಗಳಲ್ಲಿ ಅಡಗಿರುವ ಕೀಟಗಳು, ಇವರು ಮಾಡುವ ಬಿದಿರಿನ ವಾದ್ಯಗಳ ಸದ್ದಿಗೆ ಹೊರ ಬರುತ್ತವೆ. ಕೂಡಲೇ ಅವುಗಳನ್ನು ಬೇಟೆಯಾಡಿ ಒಟ್ಟಾಗಿ ಅಡುಗೆ ಮಾಡಿ ಸೇವಿಸುವ ಅರ್ಥವನ್ನೊಳಗೊಂಡ 'ಲೆಬಂಗ್ ಬೋಮನಿ' ನೃತ್ಯ ಪ್ರದರ್ಶನ ಕಲಾಭಿಮಾನಿಗಳ ಮನಗೆದ್ದಿತು. ಹಾಗೆಯೇ ವಸಂತ ಋತುವಿನ ವರ್ಣಿಸುವ 'ಓ ಆನಿ ಕಪಾಂಗ್ನಿ ತೋಕ್ಸಾ', 'ಕೊಮಿಯಾಲೆ', 'ಐಸಿರಿ' ಸೇರಿದಂತೆ 10ಕ್ಕೂ ಹೆಚ್ಚು ತ್ರಿಪುರಾದ ಹಬ್ಬಗಳ ಕುರಿತ ಗುಡ್ಡಗಾಡು ಜನಾಂಗದ ನೃತ್ಯ ಪ್ರದರ್ಶನ ನೀಡಿದರು.

ತುಂಬಾ ಖುಷಿಯಾಗಿದೆ: ನೃತ್ಯ ಪ್ರದರ್ಶನದ ಬಳಿಕ ನಿರ್ದೇಶಕಿ ಶ್ರೀಮತಿ ಪಾಂಚಾಲಿ ಡೆಬ್ ವರ್ಮ ಮಾತನಾಡಿ, ಇಂತಹ ವೇದಿಕೆಯಲ್ಲಿ ಅವಕಾಶ ಮಾಡಿಕೊಟ್ಟಿರುವುದಕ್ಕೆ ತುಂಬಾ ಖುಷಿಯಾಗಿದೆ. ಹಾಗೆಯೇ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇಷ್ಟೊಂದು ಕಲಾಪ್ರೇಕ್ಷಕರು ಆಗಮಿಸಿರುವುದು ಮತ್ತಷ್ಟು ಪ್ರೋತ್ಸಾಹ ನೀಡಿದಂತಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. ನಿರೂಪಣೆಯನ್ನು ನಿವೇದಿತಾ ನಡೆಸಿಕೊಟ್ಟರು.



ಮೈಸೂರಲ್ಲಿ ಎಲ್‌ಇಡಿ ಬಲ್ಬ್ ಅಳವಡಿಕೆಯಿಂದ ವಿದ್ಯುತ್ ಬಿಲ್‌ನಲ್ಲಿ ಶೇ.70 ರಷ್ಟು ಕಡಿತ


ಮೈಸೂರು, ನ.8(ಎಸ್‌ಪಿಎನ್)– ಮೈಸೂರು–ಕೆಆರ್‌ಎಸ್ ರಸ್ತೆಯ ಒಂಟಿಕೊಪ್ಪಲು ವೆಂಕಟರಮಣ ಸ್ವಾಮಿ ದೇವಸ್ಥಾನ ಮುಂಭಾಗದ ರಸ್ತೆಯಲ್ಲಿ ಅಳವಡಿಸಿರುವ ಎಲ್‌ಇಡಿ ಬಲ್ಬ್‌ನ ಬೆಳಕಿನ ಗುಣಮಟ್ಟವನ್ನು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕಿ ಎನ್.ಮಂಜುಶ್ರೀ ಮಂಗಳವಾರ ರಾತ್ರಿ ಪರಿಶೀಲನೆ ನಡೆಸಿದರು.

ಈ ವೇಳೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಆಶಾಲ್ ಉರ್ ರೆಹಮಾನ್ ಷರೀಫ್ ಅಧೀಕ್ಷಕ ಇಂಜಿನಿಯರ್ ಮಹೇಶ್, ಕಾರ್ಯಪಾಲಕ ಇಂಜಿನಿಯರ್ ಕೆ.ಜೆ.ಸಿಂಧು ಮತ್ತು ಜಿಲ್ಲಾ ನಗರಾಭಿವೃದ್ಧಿ ಕೋಶದ ಕಾರ್ಯಪಾಲಕ ಇಂಜಿನಿಯರ್ ನರಸು ಕಳಂತ್ರಿ, ಇ ಸ್ಮಾರ್ಟ್ ಎನರ್ಜಿ ಸಲ್ಯೂಷನ್ ಕಂಪನಿಯ ಅಧಿಕಾರಿಗಳು ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ತದನಂತರ ಚೆಲುವಾಂಬ ಉದ್ಯಾನವನದ ಹಿಂಭಾಗದಲ್ಲಿ ಅಳವಡಿಸಿದ್ದ ಸ್ಮಾರ್ಟ್ ಸ್ವಿಚ್ ಬೋರ್ಡ್ ವೀಕ್ಷಣೆ ಮಾಡಿದ ರಲ್ಲದೆ, ಚೆಲುವಾಂಬ ಉದ್ಯಾನವನದಲ್ಲಿ ಅಳವಡಿಸಿರುವ ಎಲ್‌ಇಡಿ ಲೈಟ್‌ನ ಬೆಳಕು ಗುಣಮಟ್ಟ, ನಂತರ ನಗರ ಪಾಲಿಕೆ ಆಯುಕ್ತರ ಮನೆ ಮುಂದಿನ ರಸ್ತೆಯ ಎಲ್‌ಇಡಿ ಲೈಟ್‌ಗಳ ಬೆಳಕಿನ ಗುಣಮಟ್ಟ, ಹಾಗೂ ಬನ್ನಿಮಂಟಪ ರಸ್ತೆಯ ಎಲ್‌ಐಸಿ ವೃತ್ತದ ಬಳಿ ಪರಿಶೀಲನೆ ನಡೆಸಿ, ಗುಣಮಟ್ಟದ ಮಾಹಿತಿ ಕಲೆಹಾಕಿದರು.

ನಂತರ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ನಿರ್ದೇಶಕರು, ಮಂಗಳವಾರ ಮೈಸೂರು ನಗರ ಪಾಲಿಕೆಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ನಗರಾಭಿವೃದ್ಧಿ ಇಲಾಖೆ, ಇತರೆ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ಸಭೆ ನಡೆಸಲಾಗಿದೆ. ಈ ಸಭೆಯಲ್ಲಿ ಯುಜಿಡಿ ನೆಟ್‌ವರ್ಕ್ ಕಾಮಗಾರಿ, ಎಲ್‌ಇಡಿ ಬೀದಿದೀಪ ಹಾಗೂ ಸ್ಮಾರ್ಟ್ ಸ್ವಿಚ್ ಬೋರ್ಡ್ ಅಳವಡಿಕೆ ಕುರಿತು ಮಾಹಿತಿ ಕಲೆಹಾಕಲಾಗಿದೆ. ಹಿಂದಿನ ವಿದ್ಯುತ್ ಬಿಲ್, ಈಗಿನ ವಿದ್ಯುತ್ ಬಿಲ್ ಕಡಿಮೆ ಆಗಿರುವ ಮಾಹಿತಿ ಪಡೆಯಲಾಗಿದೆ. ಅಲ್ಲದೆ, ಮೈಸೂರಿನಲ್ಲಿ ಎಲ್‌ಇಡಿ ಲೈಟ್ ಅಳವಡಿಕೆ ನಂತರ ಶೇ.70 ರಷ್ಟು ವಿದ್ಯುತ್ ಬಿಲ್ ಕಡಿಮೆಯಾಗಿದೆ ಎಂದು ಮಾಹಿತಿ ನೀಡಿದರು.

ಸರ್ಕಾರದಿಂದ ಅನುಮೋದನೆಗೊಂಡಿರುವ ಯುಜಿಡಿ ನೆಟ್‌ವರ್ಕ್ ಹೊಸ ಕಾಮಗಾರಿಗಳಿಗೆ ಟೆಂಡರ್ ಕರೆದು ಆದಷ್ಟು ಬೇಗನೆ ಕಾಮಗಾರಿ ಆರಂಭಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ.



ಕಸ ವಿಲೇವಾರಿ ಘಟಕದ ವಸ್ತುಸ್ಥಿತಿ, ನೀರು ಪೂರೈಕೆ ಕುರಿತು ವಿವಿಧೆಡೆ ಹಮ್ಮಿಕೊಂಡಿರುವ ನೂತನ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗಳ ಕುರಿತು ಮಾಹಿತಿ ಪಡೆಯಲಾಗಿದೆ ಎಂದು ತಿಳಿಸಿದರು.

ಅಂತೆಯೇ ಮೈಸೂರು ಜಿಲ್ಲೆಯ ಇತರೆ ಸ್ಥಳೀಯ ಸಂಸ್ಥೆಗಳಲ್ಲಿ ಹಮ್ಮಿಕೊಂಡಿರುವ ನೀರು ಸರಬರಾಜು ಪೈಪ್‌ಲೈನ್ ಕಾಮಗಾರಿ, ಕಸ ವಿಲೇವಾರಿ ಘಟಕಗಳ ಮಾಹಿತಿ ಮತ್ತು ಯುಜಿಡಿ ನೆಟ್‌ವರ್ಕ್ ಲೈನ್‌ಗಳ ಅಳವಡಿಕೆ ಕುರಿತು ಮಾಹಿತಿ ಕಲೆ ಹಾಕಲಾಗಿದೆ ಎಂದರು.


ಕಂಟ್ರೋಲ್ ರೂಂ ಸ್ಥಾಪನೆ: ಬೀದಿ ದೀಪಗಳ ನಿರ್ವಹಣೆಗೆ ಹೊಸ ಕಂಟ್ರೋಲ್ ರೂಂ ಸ್ಥಾಪಿಸಿದ್ದು, ದೂರವಾಣಿ ಸಂಖ್ಯೆ: 1800–425–5925 ಸಂಖ್ಯೆಗೆ ಸಾರ್ವಜನಿಕರು ಬೆಳಗ್ಗೆ 8.30ರಿಂದ ರಾತ್ರಿ 10.30ರವರೆಗೆ ಕರೆ ಮಾಡಿ, ತಮ್ಮ ಬಡಾವಣೆಗಳಲ್ಲಿನ ಬೀದಿದೀಪಗಳ ಸಮಸ್ಯೆ ಕುರಿತು ದೂರು ಸಲ್ಲಿಸಬಹುದು. ಈ ದೂರಿನ ಅನ್ವಯ ಸಮಸ್ಯೆಗಳನ್ನು ಬಗೆಹರಿಸಲು ಈ ಕಂಟ್ರೋಲ್ ಸಿಬ್ಬಂದಿ ಸಂಬಂಧಪಟ್ಟವರಿಗೆ ಮಾಹಿತಿ ರವಾನಿಸಲಿದ್ದಾರೆ. ಈ ಕಂಟ್ರೋಲ್ ರೂಂ ಕಳೆದ ಮೇ ತಿಂಗಳಿನಿಂದಲೂ ಕಾರ್ಯಾರಂಭ ಮಾಡುತ್ತಿದೆ.

ಸ್ಮಾರ್ಟ್ ಮೀಟರ್ ಮತ್ತು ಸ್ವಿಚ್ ಬೋರ್ಡ್ ಅಳವಡಿಕೆಯಿಂದ ಬೀದಿದೀಪಗಳ ನಿರ್ವಹಣೆಯನ್ನು ಕಂಟ್ರೋಲ್‌ನಿಂದಲೇ ಆಯಾಯ ಬಡಾವಣೆಯ ಬೀದಿದೀಪಗಳ 'ಆಫ್ ಅಂಡ್ ಆನ್' ಮಾಡಬಹುದು. ಇದಕ್ಕೆ ಚೆಸ್ಕಾಂನಿಂದ ಅನುಮತಿ ಸಿಕ್ಕ ತಕ್ಷಣ ನಗರ ಎಲ್ಲಾ ಬಡಾವಣೆಗಳಲ್ಲಿ ಅಳವಡಿಕೆ ಮಾಡಲಾಗುವುದು. ಈಗಾಗಲೇ ಮೈಸೂರು ನಗರಾದ್ಯಂತ 74,691 ಎಲ್‌ಇಡಿ ಬೀದಿ ದೀಪ ಅಳವಡಿಕೆ ಮಾಡಲಾಗಿದೆ.

ಇದರಲ್ಲಿ ಮೈಸೂರು–ಬೆಂಗಳೂರು, ಮೈಸೂರು–ಕೊಡಗು, ಮೈಸೂರು–ನಂಜನಗೂಡು ರಸ್ತೆಗಳನ್ನು ಎ1 ಕೆಟಗರಿಗೆ ಪಟ್ಟಿಗೆ ಸೇರಿಸಿದ್ದು, ಸ್ವಲ್ಪ ಟ್ರಾಫಿಕ್ ಇರುವ ರಸ್ತೆಗಳನ್ನು ಎ2 ಕೆಟಗರಿ, ವಸತಿ ಪ್ರದೇಶದಲ್ಲಿ ಎ3 ಕೆಟಗರಿ ಎಂದು ವಿಂಗಡಿಸಲಾಗಿದೆ. ಕುವೆಂಪುನಗರ ಸಬ್ ಡಿವಿಜನ್‌ನಲ್ಲಿ ಸ್ಮಾರ್ಟ್ ಮೀಟರ್ ಮತ್ತು ಸ್ವಿಚ್ ಪಾಯಿಂಟ್ ಅಳವಡಿಸಲು ಪೈಲೆಟ್ ಪ್ರಾಜೆಕ್ಟ್ ಆಗಿ ತೆಗೆದುಕೊಳ್ಳಲಾಗಿದೆ. ಇದು ಸಕ್ಸಸ್ ಆದರೆ, ನಗರಾದ್ಯಂತ ಈ ವ್ಯವಸ್ಥೆಯನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಈ ರಸ್ತೆಗೆ ತಿಂಗಳಿಗೊಮ್ಮೆ ಜಲ್ಲಿಕಲ್ಲು ಸೇವೆ....!

ಇದೊಂದು ಹೇಯ ಕೃತ್ಯವಲ್ಲವೇ?



ಮೈಸೂರು, ನ.8(ಎಂಕೆ)– ಗುಂಡಿ ಬಿದ್ದಿರುವ ತುಂಡು ರಸ್ತೆಗೆ ತಿಂಗಳಿಗೊಮ್ಮೆ ಜಲ್ಲಿಕಲ್ಲು ಭಾಗ್ಯವೇ ಹೊರತು ಡಾಂಬರ್ ಭಾಗ್ಯವಿಲ್ಲ...!

ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆ ವೃತ್ತದಿಂದ(ಬನ್ನೂರು ರಸ್ತೆ ಮಾರ್ಗವಾಗಿ) ನಂದಿನಿ ಮಿಲ್ಕ್ ಗ್ಯಾಲಕ್ಸಿ(ನಂದಿನಿ ಹಾಲು ಉತ್ಪನ್ನಗಳ ಬೃಹತ್ ಮಾರಾಟ ಮಳಿಗೆ) ಸಮೀಪದ ಮಂಜುನಾಥ ದೇವಸ್ಥಾನದ ವರೆಗಿನ ಸುಮಾರು ಅರ್ಧ ಕಿಲೋ ಮೀಟರ್ ಉದ್ದದ ತುಂಡು ರಸ್ತೆಗೆ ತಿಂಗಳಿಗೊಮ್ಮೆ ಜಲ್ಲಕಲ್ಲು ಭಾಗ್ಯ ದೊರೆಯುತ್ತಿದೆಯೇ ಹೊರತು ಡಾಂಬರ್ ಭಾಗ್ಯವಿಲ್ಲ.

ವಿಪರ್ಯಾಸವೆಂದರೆ ನಂದಿನಿ ಬೂತ್‌ನಿಂದ ಬನ್ನೂರು ಮಾರ್ಗದ ಕಡೆಗೆ ಹಾಗೂ ನಜರ್‌ಬಾದ್ ವೃತ್ತದಿಂದ ಹಾರ್ಡಿಂಗ್ ವೃತ್ತದ ಕಡೆಗೆ ರಸ್ತೆ ಚೆನ್ನಾಗಿದ್ದು, ಮಧ್ಯದಲ್ಲಿರುವ ತುಂಡು ರಸ್ತೆಗೆ ಮಾತ್ರ ಡಾಂಬರೀಕರಣವಾಗದೆ ವಾಹನ ಸವಾರರು ಹೆಣಗಾಡುವಂತಾಗಿದೆ. ವಿಪರೀತ ಗುಂಡಿಗಳಿಂದಲೇ ರಾರಾಜಿಸುತ್ತಿರುವ ಈ ರಸ್ತೆ ಡಾಂಬರ್ ಕಂಡು ವರ್ಷಗಳೇ ಕಳೆದಿವೆ.

ಮೈಸೂರು ನಗರಪಾಲಿಕೆ ಹಾಗೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಅಸಡ್ಡೆ ಕಂಡು ಬೇಸರಗೊಂಡಿರುವ ಸಮೀಪದ ಅಪಾರ್ಟ್‌ಮೆಂಟ್‌ನ ನಿವಾಸಿಗಳು ಹಾಗಾಗ ಅಂದರೆ ತಿಂಗಳಿಗೊಮ್ಮೆ ಗುಂಡಿಗಳನ್ನು ಮಣ್ಣು ಅಥವಾ ಜಲ್ಲಿಕಲ್ಲಿನಿಂದ ಮುಚ್ಚುತ್ತಿದ್ದಾರೆ. ಆದರೆ ಅದರ ಪ್ರಯೋಜನ ಒಂದೆರಡು ದಿನಗಳಷ್ಟೇ. ಮತ್ತೆ ಯಥಾಸ್ಥಿತಿಯಂತಾಗುವ ರಸ್ತೆಯಲ್ಲಿ ತಿರುಗಾಡುವುದು ಸಾಹಸವಾಗಿದೆ.

ಬನ್ನೂರು ಕಡೆಯಿಂದ ಬರುವ ಹಾಗೆಯೇ ನಗರದಿಂದ ಬನ್ನೂರು ಕಡೆಗೆ ಹೋಗುವ ವಾಹಗಳಿಗೆ ಈ ತುಂಡು ರಸ್ತೆಯಿಂದಾಗುತ್ತಿರುವ ತೊಂದರೆ ಹೇಳತೀರದಾಗಿದೆ. ಇದರ ನಡುವೆ ಮಲೆ ಮಹದೇಶ್ವರ ದೇವಸ್ಥಾನವಿದ್ದು, ನಿತ್ಯ ಬರುವ ಭಕ್ತರಿಗೆ ಭಾರೀ ತೊಂದರೆ ಉಂಟಾಗುತ್ತಿದೆ. ಗುಂಡಿಗಳ ಜೊತೆಗೆ ಅತಿಯಾದ ಧೂಳು ವಾಹನ ಸವಾರರನ್ನು, ಪಾದಚಾರಿಗಳನ್ನು ಹಾಗೂ ಸ್ಥಳೀಯ ನಿವಾಸಿಗಳನ್ನು ಹೈರಾಣಾಗಿಸಿದೆ.

ಅವರು ಮಾಡುತ್ತಾರೆಂದು ಕಾದಿದ್ದೆವು: ಲೋಕೋಪಯೋಗಿ ಇಲಾಖೆಯವರು ನಜರ್‌ಬಾದ್ ಪೊಲೀಸ್ ಠಾಣೆ ವೃತ್ತದವರೆಗೂ ಡಾಂಬರ್ ಹಾಕುತ್ತಾರೆಂದು ಕಾದಿದ್ದೆವು. ಆದರೆ ಇಲ್ಲಿಯವರೆಗೂ ಡಾಂಬರೀಕರಣವಾಗಿಲ್ಲ. ವಾಹನ ಸವಾರರಿಗೆ ಸಾಕಷ್ಟು ತೊಂದರೆಯಾಗುತ್ತಿರುವ ಹಿನ್ನೆಲೆ ಪಾಲಿಕೆಯಿಂದಲೇ ರಸ್ತೆಗೆ ಡಾಂಬರ್ ಹಾಕಲು ನಿರ್ಧರಿಸಲಾಗಿದೆ. ಸದ್ಯದಲ್ಲಿಯೇ ಟೆಂಡರ್ ಪ್ರಕ್ರಿಯೆ ನಡೆಯಲಿದೆ ಎಂದು ಪಾಲಿಕೆ ಇಂಜಿನಿಯರೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಭಾರತ್ ಜೋಡೋದ ಟ್ವಿಟರ್ ಹ್ಯಾಂಡಲ್ ನಿರ್ಬಂಧ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದ ಕಾಂಗ್ರೆಸ್‌ಗೆ ಬಿಗ್ ರಿಲೀಫ್

ಬೆಂಗಳೂರು: ಕಾಂಗ್ರೆಸ್ ಟ್ವಿಟರ್ ಹ್ಯಾಂಡಲ್ ನಿರ್ಬಂಧ ತೆರವುಗೊಳಿಸಿ ಕರ್ನಾಟಕ ಹೈಕೋರ್ಟ್ ವಿಭಾಗೀಯ ಪೀಠ ಆದೇಶ ಹೊರಡಿಸಿದೆ. ಕೆಜಿಎಫ್–2 ಹಾಡು ತೆಗೆಯುತ್ತೇವೆಂದು ಕಾಂಗ್ರೆಸ್ ಮುಚ್ಚಳಿಕೆ ಪತ್ರ ಬರೆದುಕೊಟ್ಟಿದ್ದರಿಂದ ಕೋರ್ಟ್, ಇಂದು(ನ.08) ಕಾಂಗ್ರೆಸ್ ಟ್ವಿಟರ್ ಹ್ಯಾಂಡಲ್ ನಿರ್ಬಂಧ ತೆರವುಗೊಳಿಸಿ ಆದೇಶಿಸಿದೆ.

ಕೆಜಿಎಫ್ 2 ಹಾಡಿನ ದುರ್ಬಳಕೆ ಆರೋಪ ಮೇಲೆ ಕಾಂಗ್ರೆಸ್‌ನ ಭಾರತ್ ಜೋಡೋ ಟ್ವಿಟ್ಟರ್ ಖಾತೆಗೆ ನಿರ್ಬಂಧಿಸಿ ಬೆಂಗಳೂರಿನ ವಾಣಿಜ್ಯ ನ್ಯಾಯಾಲಯ ಸೋಮವಾರ ಆದೇಶಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಕಾಂಗ್ರೆಸ್ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಈ ಅರ್ಜಿ ವಿಚಾರಣೆ ನಡೆಸಿದ ಕೋರ್ಟ್, ಕಾಂಗ್ರೆಸ್ ಟ್ವಿಟರ್ ಹ್ಯಾಂಡಲ್ ನಿರ್ಬಂಧ ತೆರವುಗೊಳಿಸಿದೆ.

ಕಬ್ಬು ಕಟಾವು, ಸಾಗಾಣಿಕೆ ವೆಚ್ಚ ಅಧಿಕ ವಸೂಲಿ ಮಾಡಿದರೆ ಕ್ರಮ

● ಮೈಸೂರು ಜಿಲ್ಲಾಧಿಕಾರಿ ಎಚ್ಚರಿಕೆ ● ಧರಣಿನಿರತ ರೈತರ ಅಹವಾಲು ಸ್ವೀಕಾರ ● ಸುದೀರ್ಘ ಕಾಲ ರೈತರೊಂದಿಗೆ ಡಿಸಿ ಚರ್ಚೆ



ಮೈಸೂರು, ನ.8(ಎಸ್‌ಬಿಡಿ)– ಸಕ್ಕರೆ ಕಾರ್ಖಾನೆಯವರು ರೈತರಿಂದ ಕಬ್ಬು ಕಟಾವು ಹಾಗೂ ಸಾಗಾಣಿಕೆ ವೆಚ್ಚವನ್ನು ಹೆಚ್ಚುವರಿಯಾಗಿ ಸಂಗ್ರಹಿಸಿದರೆ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಎಚ್ಚರಿಸಿದ್ದಾರೆ.

ಕಬ್ಬಿಗೆ ಎಫ್‌ಆರ್‌ಪಿ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು 9 ದಿನಗಳಿಂದ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಧರಣಿ ನಡೆಸುತ್ತಿರುವ ರೈತ ಪ್ರತಿನಿಧಿಗಳೊಂದಿಗೆ ಮಂಗಳವಾರ ಸಂಜೆ ಸುದೀರ್ಘ ಸಭೆ ನಡೆಸಿ ಪ್ರತಿಯೊಬ್ಬರ ಅಹವಾಲುಗಳನ್ನೂ ಗಂಭೀರವಾಗಿ ಆಲಿಸಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಸಂಬಂಧಪಟ್ಟ ಅಧಿಕಾರಿಗಳಿಂದಲೂ ಸ್ಪಷ್ಟನೆ ಪಡೆದು ರೈತರಿಗೆ ಸಹಾಯವಾಗುವಂತೆ ಕಾರ್ಯ ನಿರ್ವಹಿಸಬೇಕೆಂದು ಸೂಚನೆ ನೀಡಿದರು.

ರಾಜ್ಯ ಕಬ್ಬು ಬೆಳೆಗಾರ ಸಂಘದ ರಾಜ್ಯ ಅಧ್ಯಕ್ಷ ಕುರುಬೂರು ಶಾಂತಕುಮಾರ್, ಸಕ್ಕರೆ ಕಾರ್ಖಾನೆಯವರು ಒಂದು ಮಾನದಂಡದಲ್ಲಿ ಕಬ್ಬು ಕಟಾವು ಹಾಗೂ ಸಾಗಾಣಿಕೆ ವೆಚ್ಚ ನಿಗದಿ ಮಾಡಿರುತ್ತಾರೆ. ಆದರೆ ಕಾರ್ಖಾನೆ ಹಾಗೂ ರೈತರ ನಡುವೆ ಕಾರ್ಯ ನಿರ್ವಹಿಸುವ ಅಧಿಕಾರಿಗಳು ನಿಗದಿತ ವೆಚ್ಚಕ್ಕಿಂತ 150 ರೂ. ಹೆಚ್ಚುವರಿ ಕಟಾವು ದರ ಪಡೆಯುತ್ತಿದ್ದಾರೆ. 16–18 ತಿಂಗಳಾದರೂ ಕಟಾವು ಮಾಡಿಸುವುದಿಲ್ಲ. ಬೇಗ ಕಟಾವು ಮಾಡಿಸಲು ಕೆಲವರು ಲಂಚ ಪಡೆಯುತ್ತಾರೆಂದು ರೈತರು ದೂರುತ್ತಿದ್ದಾರೆ. ಬೆಳೆಹಾನಿಯನ್ನು ಸರಿಯಾಗಿ ಮೌಲ್ಯಮಾಪನ ಮಾಡದೆ ಎಕರೆಗೆ ಕೇವಲ ಐದಾರು ಸಾವಿರ ರೂ. ಪರಿಹಾರ ನೀಡಿದ್ದಾರೆ. ಸೆಸ್ಕ್ ಅಧಿಕಾರಿಗಳ ನಿರ್ಲಕ್ಷ್ಯದಿಂದ ತಿಂಗಳಲ್ಲಿ 10ಕ್ಕೂ ಹೆಚ್ಚು ರೈತರು ವಿದ್ಯುತ್ ಅವಘಡದಿಂದ ಸಾವನ್ನಪ್ಪಿದ್ದಾರೆ. ಮೃತ ರೈತರ ಕುಟುಂಬಕ್ಕೆ ತಲಾ 25 ಲಕ್ಷ ರೂ. ಪರಿಹಾರ ನೀಡಬೇಕು. ದಶಕಗಳಿಂದ ಉಳುಮೆ ಮಾಡುವ ರೈತರಿಗೆ ಭೂಮಿ ಸಾಗುವಳಿ ನೀಡದೆ ಕೆಲ ಅಧಿಕಾರಿಗಳು ಹಣಕ್ಕಾಗಿ ನಗರ ಪ್ರದೇಶಗಳಲ್ಲಿರುವ ಬಂಡವಾಳಶಾಹಿ ಹೆಸರಿನಲ್ಲಿ ಆರ್‌ಟಿಸಿ ಮಾಡಿಕೊಡುತ್ತಿದ್ದಾರೆ ಎಂದು ಆರೋಪಿಸಿದರು.

ರೈತ ಪ್ರತಿನಿಧಿ ಮಂಜು ಮಾತನಾಡಿ, ಮೂರು ತಲೆಮಾರಿನಿಂದ ಉಳುಮೆ ಮಾಡಿಕೊಂಡು ಬರುತ್ತಿರುವ ರೈತರ ಜಮೀನನ್ನು ಬಂಡವಾಳಶಾಹಿಗಳು ಹಣ ನೀಡಿ ತಮ್ಮ ಹೆಸರಿಗೆ ಮಂಜೂರು ಮಾಡಿಸಿಕೊಂಡಿದ್ದಾರೆ. ಈ ಬಗ್ಗೆ ಪರಿಶೀಲನೆ ನಡೆಸಿ ಅನಧಿಕೃತ ವ್ಯಕ್ತಿಗಳ ಹೆಸರನ್ನು ಕೈಬಿಟ್ಟು ಮೂಲ ಸಾಗುವಳಿದಾರರಿಗೆ ಮಂಜೂರು ಮಾಡಿಕೊಡುವಂತೆ 4 ತಿಂಗಳ ಹಿಂದೆಯೇ ಅರ್ಜಿ ನೀಡಿದ್ದರೂ ಅಧಿಕಾರಿಗಳು ಕ್ರಮ ವಹಿಸಿಲ್ಲ. ಮತ್ತೊಂದು ಗ್ರಾಮದ ಭೂಮಿಗೆ ಸಂಬಂಧಿಸಿದಂತೆ ಭೂಮಾಪನ ಇಲಾಖೆ ದಾಖಲೆಯಲ್ಲಿ ಮಾತ್ರ ಸರ್ಕಾರಿ ಖರಾಬು ಹಾಗೂ ಗೋಮಾಳ ಎಂದು ನಮೂದಿಸಲಾಗಿದೆ. ಈ ಗೊಂದಲದಿಂದ ಹಲವು ರೈತರಿಗೆ ಸಮಸ್ಯೆಯಾಗಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ನೀವು ಹೇಳುವಂತೆ ಬಂಡವಾಳಶಾಹಿಗಳಿಗೆ ಭೂಮಿ ಮಂಜೂರಾಗಿದ್ದರೆ ಉಪವಿಭಾಗಾಧಿಕಾರಿಗೆ ಅರ್ಜಿ ಸಲ್ಲಿಸಿ, ನಂತರ ಸ್ಥಳ ಪರಿಶೀಲನೆ ನಡೆಸಿ ಅಂತಹ ಮಂಜೂರಾತಿಯನ್ನು ರದ್ದುಪಡಿಸಬಹುದು ಎಂದು ತಿಳಿಸಿದರು.

ಉಸ್ತುವಾರಿ ಸಚಿವರು ಸಭೆ ನಡೆಸಲಿ...

ಕಬ್ಬು ದರ ಹೆಚ್ಚುವರಿ ನಿಗದಿ ಬಗ್ಗೆ ನ.10ರಂದು ಸರ್ಕಾರ ಸಭೆ ಕರೆದಿದ್ದು, ಅಂದಿನ ತೀರ್ಮಾನ ಗಮನಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿ ಸಭೆ ಕರೆಯುವಂತೆ ಕೋರಲಾಗುವುದು. ಅಲ್ಲಿಯವರೆಗೆ ಚಳವಳಿ ಕೈಬಿಡುವಂತೆ ರೈತ ಪ್ರತಿನಿಧಿಗಳನ್ನು ಮನವಿ ಮಾಡಿದರು. ಆದರೆ ರೈತರ ಮೇಲಿನ ಕಾಳಜಿಯಿಂದ ಸಭೆ ಕರೆದಿರುವುದಕ್ಕೆ ಧನ್ಯವಾದಗಳು. ಕೆಲವೊಂದು ಸರ್ಕಾರ ಮಟ್ಟದಲ್ಲಿ ಪರಿಹಾರ ಆಗಬೇಕಿರುವುದರಿಂದ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಸಭೆ ನಡೆಸುವವರೆಗೆ ಧರಣಿ ಮುಂದುವರೆಸುವುದಾಗಿ ರೈತ ಪ್ರತಿನಿಧಿಗಳು ತಿಳಿಸಿದರು. ಅಹೋರಾತ್ರಿ ಧರಣಿ ಮುಂದುವರೆಸಿರುವುದಾಗಿ ರಾಜ್ಯ ಕಬ್ಬು ಬೆಳೆಗಾರ ಸಂಘದ ರಾಜ್ಯ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಸ್ಪಷ್ಟಪಡಿಸಿದ್ದಾರೆ.

ವಾರದಲ್ಲಿ ವರದಿ ಕೊಡಿ: ಸಾಲದ ಹಣ ಪಾವತಿಸದ ರೈತರನ್ನು ಕೋರ್ಟ್ ಮೆಟ್ಟಿಲೇರುವಂತೆ ಮಾಡಬೇಡಿ ಎಂದು ಮುಖ್ಯಮಂತ್ರಿಗಳು ಬ್ಯಾಂಕ್‌ಗಳಿಗೆ ಸೂಚನೆ ನೀಡಿದ್ದಾರೆ. ಆದರೆ ಈಗಲೂ ಅದು ಮುಂದುವರೆದಿದ್ದು, ತಿ.ನರಸೀಪುರ ತಾಲೂಕಿನ 65 ವರ್ಷದ ರೈತರ ಜಮೀನು ಹರಾಜು ಹಾಕುವುದಾಗಿ ಟಾಂ ಟಾಂ ಹೊಡೆಸಿದ್ದಾರೆ. ನಾಳೆ(ನ.9)ಯೇ ಹರಾಜು ಪ್ರಕ್ರಿಯೆ ನಡೆಸುವುದಾಗಿ ಬ್ಯಾಂಕ್ ಅಧಿಕಾರಿಗಳು ರೈತನನ್ನ ಹೆದರಿಸಿದ್ದಾರೆ ಎಂದು ಸಭೆಯಲ್ಲಿದ್ದ ರೈತ ಪ್ರತಿನಿಧಿ ತಿಳಿಸಿದರು. ಇದಕ್ಕೆ ಪೂರಕವಾಗಿ ಕುರುಬೂರು ಶಾಂತಕುಮಾರ್, ಓರ್ವ ರೈತ ಸಾಲ ಮಾಡಿದ್ದ 5 ಲಕ್ಷ ರೂ.ಗಳಲ್ಲಿ 3 ಲಕ್ಷ ತೀರಿಸಿದ್ದಾರೆ. ಉಳಿದ 2 ಲಕ್ಷ ರೂ. ಈಗ ಬ್ಯಾಂಕ್ ಲೆಕ್ಕದಲ್ಲಿ 28 ಲಕ್ಷ ರೂ. ಎಂದಾಗಿದೆ ಎಂದು ದೂರಿದರು. ಆಗ ಜಿಲ್ಲಾಧಿಕಾರಿ ಪ್ರತಿಕ್ರಿಯಿಸಿ, ಈ ಬಗ್ಗೆ ಪರಿಶೀಲನೆ ನಡೆಸಿ ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಂಡು ವಾರದಲ್ಲಿ ವರದಿ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಮೈಸೂರು–ತಿ.ನರಸೀಪುರ ರಸ್ತೆಯ ಟೋಲ್‌ನಲ್ಲಿ ಗೊಬ್ಬರ ಸಾಗಿಸುವ ರೈತನಿಂದಲೂ ಟೋಲ್ ಕೇಳುತ್ತಾರೆ. ರೈತರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸಾಲಸೌಲಭ್ಯ ನೀಡುತ್ತಿಲ್ಲ. ನೂರಾರು ಎಕರೆ ಹೊಂದಿರುವ ಜನಪ್ರತಿನಿಧಿಗಳು, ಉದ್ಯಮಿಗಳಿಗೆ ಯಾವುದೇ ಸಮಸ್ಯೆ ಇಲ್ಲ. ಆದರೆ ಮೂರು ತಲೆಮಾರಿನಿಂದ ಉಳುಮೆ ಮಾಡುತ್ತಿರುವ ರೈತರ 1–2 ಎಕರೆ ಭೂಮಿಗೆ ಸಾಗುವಳಿ ನೀಡುವಾಗ ಗೋಮಾಳ ಎಂಬ ಸಬೂಬು ಹೇಳುತ್ತಾರೆ. ಅಧಿಕಾರಿಗಳು ಎಲ್ಲೋ ಕುಳಿತು ಮಳೆಯಿಂದ ಮನೆ ಕಳೆದುಕೊಂಡವರಿಗೆ ಪರಿಹಾರ ನಿಗದಿ ಮಾಡುತ್ತಾರೆ. ಮತ್ತೊಂದು ಮಳೆ ಬಂದರೆ ಸಂಪೂರ್ಣವಾಗಿ ಬಿದ್ದು ಹೋಗುವಂತಹ ಮನೆಯ ಒಂದು ಗೋಡೆ ಬಿದ್ದಿದ್ದರೆ ಅದಕ್ಕೂ ಕೇವಲ 50 ಸಾವಿರ ಪರಿಹಾರ ನೀಡುತ್ತಾರೆ. 5 ಪಂಪ್‌ಸೆಟ್‌ಗಳಿಗೆ ಒಂದು ಟಿಸಿ ಅಳವಡಿಸಬೇಕೆಂಬ ನಿಯಮವಿದೆ. ಆದರೆ ಸೆಸ್ಕ್ ಅಧಿಕಾರಿಗಳು ಅದನ್ನು ಪಾಲಿಸುತ್ತಿಲ್ಲ. ಟಿಸಿ ದುರಸ್ತಿಗೆ ಬಂದಾಗ ಹಣ ನೀಡಿದರೆ ಮಾತ್ರ ಬದಲಿಸುತ್ತಾರೆ. ಬ್ಯಾಂಕ್ ಸಾಲಕ್ಕೆ ಬಡ್ಡಿ ಪಾವತಿಸಿ, ರಿನೀವಲ್ ಮಾಡುವಂತೆ ಮನವಿ ಮಾಡಿದರೂ ಕೇಳುವುದಿಲ್ಲ. ತುರ್ತು ಸಂದರ್ಭದಲ್ಲಿ ಬ್ಯಾಂಕ್‌ನಲ್ಲಿಟ್ಟಿದ್ದ ಚಿನ್ನಾಭರಣಗಳನ್ನು ಬಿಡಿಸಿಕೊಳ್ಳಲು ಹೋಗುವ ರೈತರಿಗೆ ಬೆಳೆ ಸಾಲ ತೀರಿಸಿದ ಬಳಿಕ ಚಿನ್ನಾಭರಣ ಬಿಡಿಸಿಕೊಂಡು ಹೋಗುವಂತೆ ಹಿಂಸಿಸುತ್ತಾರೆ. ಹೀಗೆ ರೈತರ ಸಮಸ್ಯೆಗಳನ್ನು ಸಮಾಧಾನದಿಂದ ಆಲಿಸಿದ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಜಿಲ್ಲಾಡಳಿತದ ಮಟ್ಟದಲ್ಲಿ ಆಗಬಹುದಾದ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಮಂಜುನಾಥಸ್ವಾಮಿ ಹಾಗೂ ವಿವಿಧ ಇಲಾಖೆಗಳು ಹಾಗೂ ಬಣ್ಣಾರಿ ಅಮ್ಮನ ಸಕ್ಕರೆ ಕಾರ್ಖಾನೆ ಅಧಿಕಾರಿಗಳು, ಪಿ.ಸೋಮಶೇಖರ್, ಬರಡನಪುರ ನಾಗರಾಜ್, ಕಿರಗಸೂರು ಶಂಕರ್, ಕುರುಬೂರು ಸಿದ್ದೇಶ್, ಹಾಡ್ಯ ರವಿ, ಸಿದ್ದರಾಮು, ದೇವಮಣ್ಣಿ, ಮಂಜುನಾಥ್, ಪ್ರಸಾದ್ ನಾಯಕ, ಮಹದೇವಸ್ವಾಮಿ ಸೇರಿದಂತೆ ಅನೇಕ ರೈತ ಪ್ರತಿನಿಧಿಗಳು ಭಾಗವಹಿಸಿದ್ದರು.

ಮೆಡಿಕಲ್ ಶಿಕ್ಷಣ ಲಾಭ ಗಳಿಸುವ ವ್ಯವಹಾರವಲ್ಲ: ಬೋಧನಾ ಶುಲ್ಕ ಕೈಗೆಟುಕುವಂತಿರಬೇಕು

ಸುಪ್ರೀಂಕೋರ್ಟ್ ಆದೇಶ

ನವದೆಹಲಿ: ಶಿಕ್ಷಣ ಲಾಭಗಳಿಸುವ ವ್ಯವಹಾರವಲ್ಲ. ಬೋಧನಾ ಶುಲ್ಕ ಯಾವಾಗಲೂ ಕೈಗೆಟುಕುವ ದರದಲ್ಲಿ ಇರಬೇಕು ಎಂದು ಹೇಳುವ ಮೂಲಕ ಸುಪ್ರೀಂ ಕೋರ್ಟ್ ಆಂಧ್ರಪ್ರದೇಶ ಹೈಕೋರ್ಟ್‌ನ ಆದೇಶವನ್ನು ಎತ್ತಿ ಹಿಡಿದಿದೆ.

ಕೋರ್ಟ್ 2017 ರಲ್ಲಿ ಅನುದಾನ ರಹಿತ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಎಂಬಿಬಿಎಸ್ ಕೋರ್ಸ್‌ನ ವಾರ್ಷಿಕ ಬೋಧನಾ ಶುಲ್ಕವನ್ನು 24 ಲಕ್ಷ ರೂ.ಗಳಿಗೆ ಏರಿಕೆ ಮಾಡಿದ ಆಂಧ್ರ ಸರ್ಕಾರದ ಆದೇಶವನ್ನು ರದ್ದು ಮಾಡಿದೆ. 2011ರಲ್ಲಿ ನಿಗದಿಪಡಿಸಿದ್ದ ಶುಲ್ಕಕ್ಕಿಂತ ಏಳು ಪಟ್ಟು ಹೆಚ್ಚಿರುವ ವಾರ್ಷಿಕ ಶುಲ್ಕವನ್ನು 24 ಲಕ್ಷ ರೂ.ಗಳಿಗೆ ಹೆಚ್ಚಿಸಿರುವ 2017ರ ರಾಜ್ಯ ಸರ್ಕಾರದ ನಿರ್ಧಾರ ಸರಿಯಲ್ಲ ಎಂದು ನ್ಯಾಯಮೂರ್ತಿಗಳಾದ ಎಂ.ಆರ್. ಷಾ ಹಾಗೂ ಎಂ.ಎಂ.ರುದ್ರೇಶ್ ಅವರಿದ್ದ ದ್ವಿಸದಸ್ಯ ಪೀಠ ಹೇಳಿದೆ.

ಈ ಹಿಂದೆ ನಿಗದಿಪಡಿಸಿದ್ದ ಶುಲ್ಕಕ್ಕಿಂತ 7 ಪಟ್ಟು ಶುಲ್ಕವನ್ನು 24 ಲಕ್ಷ ರೂಗೆ ಹೆಚ್ಚಿಸಿರುವುದು ಸಮರ್ಥನೀಯವಲ್ಲ. ಶಿಕ್ಷಣವು ಲಾಭ ಗಳಿಸುವ ವ್ಯವಹಾರವಲ್ಲ. ಹಾಗಾಗಿ ಬೋಧನಾ ಶುಲ್ಕ ಯಾವಾಗಲೂ ಕೈಗೆಟುಕುವಂತಿರಬೇಕು ಎಂದು ಹೇಳಿದ ಕೋರ್ಟ್ ಸರ್ಕಾರಕ್ಕೆ ಚಾಟಿ ಬೀಸಿದೆ.

ರಾಜ್ಯ ಸರ್ಕಾರ ಹಾಗೂ ಮೇಲ್ಮನವಿದಾರರಾಗಿರುವ ವೈದ್ಯಕೀಯ ಕಾಲೇಜು, ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ (NALSA) ಹಾಗೂ ಸುಪ್ರೀಂಕೋರ್ಟ್‌ನ ಮಧ್ಯಸ್ಥಿಕೆ ಮತ್ತು ಸಮನ್ವಯ ಯೋಜನಾ ಸಮಿತಿ (MCPC)ಗೆ ತಲಾ 2.5 ಲಕ್ಷ ದಂಡ ಪಾವತಿಸುವಂತೆ ಸೂಚಿಸಿದೆ. ಜೊತೆಗೆ 2017ರ ಸೆಪ್ಟಂಬರ್‌ನಲ್ಲಿ ಹೊರಡಿಸಲಾದ ಸರ್ಕಾರಿ ಆದೇಶ (GO) ಅಡಿಯಲ್ಲಿ ವಿದ್ಯಾರ್ಥಿಗಳಿಂದ ಹೆಚ್ಚುವರಿಯಾಗಿ ವಸೂಲಿ ಮಾಡಿದ ಶುಲ್ಕವನ್ನು ಮರುಪಾವತಿಸಬೇಕೆಂದು ಕೋರ್ಟ್ ಸೂಚಿಸಿದೆ.

ಕಲಾಮಂದಿರ ನವೀಕರಣಕ್ಕೆ ಕೂಡಿಬಂದ ಮುಹೂರ್ತ

ನವೀಕರಣಕ್ಕೆ 63 ಲಕ್ಷ ಅಂದಾಜು ಪಟ್ಟಿ ತಯಾರಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೈಸೂರು ವಿಭಾಗದ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ಭೇಟಿ, ಪರಿಶೀಲನೆ



ಮಂಡ್ಯ,ನ.8– ಕಳೆದೊಂದು ದಶಕಗಳಿಂದ ಶಿಥಿಲಾವಸ್ಥೆಯಲ್ಲಿದ್ದ ಮಂಡ್ಯ ನಗರದ ಪ್ರತಿಷ್ಠಿತ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದ ನವೀಕರಣಕ್ಕೆ ಕಾಲ ಕೂಡಿ ಬಂದಿದೆ. ನವೀಕರಣಕ್ಕೆ ಖರ್ಚಾಗುವ ಅಂದಾಜು ಪಟ್ಟಿ ತಯಾರು ಮಾಡಿದ್ದು, ಮಂಗಳವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಭೇಟಿ ನೀಡಿ, ಕಲಾಮಂದಿರ ಪರಿಶೀಲನೆ ನಡೆಸಿದರು.

ನಗರದಲ್ಲಿರುವ ಕಲಾಮಂದಿರ ಆವರಣಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ, ಸ್ಥಳೀಯ ಕಲಾವಿದರು ಮತ್ತು ಕಲಾಪೋಷಕರಿಂದ ಮಾಹಿತಿ ಪಡೆದ ಅವರು, ಕಲಾಮಂದಿರ ಅಭಿವೃದ್ಧಿಗೆ ಸರ್ಕಾರದ ಅನುದಾನದೊಂದಿಗೆ ಸ್ಥಳೀಯ ಶಾಸಕರು ಮತ್ತು ಸಂಘ–ಸಂಸ್ಥೆ, ಕಾರ್ಖಾನೆಗಳ ಆರ್ಥಿಕ ನೆರವು ಅವಶ್ಯ ಎಂದು ಹೇಳಿದರು. ಮೈಸೂರಿನಲ್ಲಿರುವ ಕಲಾಮಂದಿರವನ್ನು ಸ್ಥಳೀಯ ಶಾಸಕರ ಅನುದಾನ, ಸ್ಥಳೀಯ ಕಾರ್ಖಾನೆಗಳ ಆರ್ಥಿಕ ನೆರವು, ಸಮಾಜ ಸೇವಕರಿಂದ ದೇಣಿಗೆ ಪಡೆದು ಅಭಿವೃದ್ಧಿ ಮಾಡಲಾಗಿದೆ. ಸರ್ಕಾರದ ಅನುದಾನವನ್ನು ಬಳಕೆ ಮಾಡಿ ಸುಸಜ್ಜಿತ ಕಲಾಮಂದಿರವನ್ನು ನವೀಕರಣಗೊಳಿಸಿದೆ. ಅದೇ ರೀತಿ ಮಂಡ್ಯ ನಗರದಲ್ಲಿರುವ ಕಲಾಮಂದಿರವನ್ನು ನವೀಕರಣಗೊಳಿಸಬಹುದು ಎಂದು ಸಲಹೆ ನೀಡಿದರು.

ಪ್ರಸ್ತುತ ಮಂಡ್ಯದ ಕಲಾಮಂದಿರ ನವೀಕರಣಕ್ಕೆ 63 ಲಕ್ಷ ರೂ.ಬೇಕಾಗಬಹುದು ಎಂದು ಅಂದಾಜು ವೆಚ್ಚ ತಯಾರಿಸಲಾಗಿದೆ. ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರಕ್ಕೆ ಅಂದಾಜು ಪಟ್ಟಿ ಕಳಿಸಲಾಗುವುದು. ಸ್ಥಳ ಪರಿಶೀಲನೆ ವೇಳೆ ಕಲಾವಿದರು ನೀಡಿದ ಮನವಿಗಳನ್ನು ಸಲ್ಲಿಸಲಾಗುವುದು ಎಂದು ಮಲ್ಲಿಕಾರ್ಜುನಸ್ವಾಮಿ ಹೇಳಿದರು.

ಬಳಿಕ ಮಾತನಾಡಿದ ಕಲಾಪೋಷಕ ಬಿ.ಎಂ.ಅಪ್ಪಾಜಪ್ಪ, ಕಲಾಮಂದರಕ್ಕೆ ಮೂಲಭೂತ ಸೌಲಭ್ಯಗಳ ಅವಶ್ಯವಿದೆ. ತುರ್ತಾಗಿ ಕಾರ್ಯಯೋಜನೆಗೊಳ್ಳಲಿ, ಸರ್ಕಾರಗಳು ಮತ್ತು ಸ್ಥಳೀಯ ಜನಪ್ರತಿನಿಧಿಗಳು ಕಲಾವಿದರಿಗೆ ಅನುಕೂಲವಾಗುವಂತೆ ನೆರವಾಗಲಿ. ಕಲಾಮಂದಿರ ನವೀಕರಣಗೊಳ್ಳದಿದ್ದರೆ ಕಲಾವಿದರು ಮತ್ತು ಕಲಾಪೋಷಕರಿಂದ ಹೋರಾಟಗಳನ್ನು ರೂಪಿಸಲು ಸಂಕಲ್ಪ ಮಾಡಬೇಕಾಗುವುದು ಎಂದು ಎಚ್ಚರಿಕೆ ನೀಡಿದರು.

ಇದೇ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಉದಯಕುಮಾರ್, ರಂಗಭೂಮಿ ನಿರ್ದೇಶಕ ಕಾರಸವಾಡಿ ಸುರೇಶ್, ರಂಗಭೂಮಿ ಕಲಾವಿದ ಗುರುರಾಜ್, ಕಲಾವಿದ ದೇವರಾಜ್ ಕೊಪ್ಪ ಮತ್ತು ಇನ್ನಿತರ ಕಲಾವಿದರು ಹಾಜರಿದ್ದರು.

ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ದೂರದೃಷ್ಟಿ ಯೋಜನೆ ಸಹಕಾರಿ



ಮಂಡ್ಯ, ನ.8– ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ದೂರದೃಷ್ಟಿ ಯೋಜನೆ ಸಹಕಾರಿಯಾಗಲಿದ್ದು, ಜನಪ್ರತಿನಿಧಿಗಳು ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಭಾಗವಹಿಸುವಿಕೆ ಅತಿಮುಖ್ಯ ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ತಿಳಿಸಿದರು.

ಮಂಗಳವಾರ ಜಿಲ್ಲಾ ಪಂಚಾಯಿತಿ ಕಾವೇರಿ ಸಭಾಂಗಣದಲ್ಲಿ ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮ ಪಂಚಾಯತ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕಾರ ಎಲ್ಲಾ ಗ್ರಾಮ ಪಂಚಾಯಿತಿಗಳು ಹೊಸದಾಗಿ ರಚನೆಯಾದ ಬಳಿಕ ಮುಂದಿನ 5 ವರ್ಗಗಳಿಗೆ ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸಬೇಕಿದೆ. ಇದಕ್ಕಾಗಿ ಜನಪ್ರತಿನಿಧಿಗಳು ಹಾಗೂ ಜಿಲ್ಲಾ ಪಂಚಾಯತ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗುತ್ತಿದ್ದು, ಎಲ್ಲರೂ ತರಬೇತಿ ಪಡೆಯುವ ಮೂಲಕ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ಗ್ರಾಮೀಣ ಪ್ರದೇಶದ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಸಾಧಿಸಬೇಕಾಗಿರುವ ಗುರಿಗಳನ್ನು ನಿಗದಿಪಡಿಸಿ, ಅವುಗಳನ್ನು ಸಮುದಾಯದ ಭಾಗವಹಿಸುವಿಕೆಯೊಂದಿಗೆ ಕಾರ್ಯರೂಪಕ್ಕೆ ತರುವ ಕಾರ್ಯಕ್ರಮವೇ ದೂರದೃಷ್ಟಿ ಯೋಜನೆ. ಇದೊಂದು ಬಹಳ ಉಪಯುಕ್ತ ಕಾರ್ಯಕ್ರಮವಾಗಿದ್ದು, ಇದನ್ನು ಕಾರ್ಯರೂಪಕ್ಕೆ ತರುವುದು ನಮ್ಮ ಕೈಯಲ್ಲಿಯೇ ಇರುತ್ತದೆ. ಗ್ರಾಮಗಳ ಅಭಿವೃದ್ಧಿಗೆ ಏನು ಮಾಡಬೇಕು ಎಂದು ಪಟ್ಟಿ ಮಾಡಿಕೊಂಡು ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕೆಂದು ಸೂಚಿಸಿದರು.

ಗ್ರಾಮ ಪಂಚಾಯಿತಿ ಪಿಡಿಓಗಳು ಹಾಗೂ ಜನಪ್ರತಿನಿಧಿಗಳು ಗ್ರಾಮಸಭೆ ಮಾಡಿ, ಯಾವುದಕ್ಕೆ ಮೊದಲ ಆದ್ಯತೆ ನೀಡಬೇಕು ಎಂಬ ಬಗ್ಗೆ ಚರ್ಚೆ ಮಾಡಿ ಕಾರ್ಯಕ್ರಮ ರೂಪಿಸುವ ಮೂಲಕ ಗ್ರಾಮಗಳ ಅಭಿವೃದ್ಧಿಗೆ ಮುಂದಾಗುವಂತೆ ಕಿವಿಮಾತು ಹೇಳಿದರು.

ಜಿ.ಪಂ. ಸಿಇಓ ಶಾಂತಾ ಎಲ್.ಹುಲ್ಮನಿ ಮಾತನಾಡಿ, ಗ್ರಾಮೀಣ ಭಾಗದ ಸಮಸ್ಯೆಗಳನ್ನು ನಿವಾರಿಸುವ ಸಲುವಾಗಿ ದೂರದೃಷ್ಟಿ ಯೋಜನೆ ಜಾರಿಗೆ ಬಂದಿದೆ. ಈಗಾಗಲೇ ಜನಪ್ರತಿನಿಧಿಗಳು ಹಾಗೂ ಪಿಡಿಓಗಳಿಗೆ ತರಬೇತಿ ನೀಡಲಾಗಿದೆ. ಆರೋಗ್ಯ, ಶಿಕ್ಷಣ, ಬಡತನ, ಜೀವನೋಪಾಯ ನಿರ್ವಹಣೆ ಸೇರಿದಂತೆ 8 ವಲಯಗಳ 10 ಹಂತಗಳಲ್ಲಿ ಗ್ರಾಮಗಳ ಸಮಸ್ಯೆ ಗುರುತಿಸಿ ಸಮಸ್ಯೆಗಳ ಆಧಾರದ ಮೇಲೆ ಗುರಿ ನಿಗದಿ ಪಡಿಸಿಕೊಂಡು, ಗ್ರಾಮ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವ ಮೂಲಕ ಕಾರ್ಯರೂಪಕ್ಕೆ ತರಬೇಕು ಎಂದರು. ಕಾರ್ಯಕ್ರಮದಲ್ಲಿ ಡಿಸಿ ಡಾ. ಹೆಚ್.ಎನ್. ಗೋಪಾಲಕೃಷ್ಣ, ಜಿಪಂ ಉಪ ಕಾರ್ಯದರ್ಶಿ (ಆಡಳಿತ) ಸರಸ್ವತಿ, ಯೋಜನಾ, ಅಂದಾಜು ಮತ್ತು ಮೌಲ್ಯಮಾಪನಾಧಿಕಾರಿ ಪವನ್ ಕುಮಾರ್ ಹಾಜರಿದ್ದರು.


ಇಂದು ಸೈಕಲ್ ರ್‍ಯಾಲಿ

ಮಂಡ್ಯ, ನ.8– ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ–2023 ರ ಸಂಬಂಧ ಮತದಾರರಲ್ಲಿ ಜಾಗೃತಿ ಮೂಡಿ ಸಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನ.9 ರಂದು ಬೆಳಿಗ್ಗೆ 8.30 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಿಂದ ಸೈಕಲ್ ರ್‍ಯಾಲಿ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ನ.8– ಮಂಡ್ಯ ಮತ್ತು ತುಂಬಕೆರೆ ವ್ಯಾಪ್ತಿಯ ಪ್ರದೇಶಗಳಾದ ಗುತ್ತಲು, ಫ್ಯಾಕ್ಟರಿ ವೃತ್ತ, ಕೈಗಾರಿಕಾ ಬಡಾವಣೆಗಳು, ಎಂ.ಸಿ.ರಸ್ತೆ, ತಾವರೆಗೆರೆ, ನೆಹರು ನಗರ, ಉದಯಗಿರಿ, ಸಾದತ್ ಮೊಹಲ್ಲ, ಚನ್ನಯ್ಯ ಬಡಾವಣೆ, ಸಿದ್ಧಾರ್ಥ ಬಡಾವಣೆ, ಬೆಂಗಳೂರು ಮುಖ್ಯ ಹೆಬ್ಬಾಳ ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಮತ್ತು ಗ್ರಾಮಾಂತರ ಪ್ರದೇಶಗಳಾದ ಶ್ರೀನಿವಾಸಪುರ ಗೇಟ್, ಹನಕೆರೆ ಐ.ಪಿ ವ್ಯಾಪ್ತಿ, ಬಸವನಪುರ ಐ.ಪಿ ವ್ಯಾಪ್ತಿ, ಬೂದನೂರು, ಭೂತನಹೊಸೂರು, ಚನ್ನಪನ್ನ ದೊಡ್ಡಿ, ಹಂಬರಹಳ್ಳಿ, ಹೊಡಾಘಟ್ಟ, ಕೀಲಾರ, ಹೊಸಬೂದನೂರು, ಹಟ್ನೂದನೂರು, ಈಚಗೆರೆ, ಹಂಬರುಹಳ್ಳಿ, ಆಲಕೆರೆ, ನಲ್ಲಹಳ್ಳಿ, ಅಚ್ಚಿಗೆರೆ, ಹೊನಗನಹಳ್ಳಿಮಠ, ತುಂಬಕೆರೆ, ಚಾಮಲಾಪುರ, ಉಮ್ಮಡಹಳ್ಳಿ, ಬಸವನಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ನ.9 ರಂದು ವಿದ್ಯುತ್ ಸರಬರಾಜು ವ್ಯತ್ಯಯವಾಗಲಿದೆ.

ದೊಡ್ಡರಸಿನಕೆರೆ ಗ್ರಾಮದಲ್ಲಿ ಜೆಡಿಎಸ್ ಕಾರ್ಯಕರ್ತರ ಸಭೆ



ಭಾರತೀನಗರ, ನ.8– ಮುಂದಿನ ಚುನಾವಣೆಯಲ್ಲಿ ರೈತರ ಹಾಗೂ ಬಡವರ ಆಶಾಕಿರಣರಾದ ಎಚ್.ಡಿ.ಕುಮಾರಸ್ವಾಮಿ ನೇತೃತ್ವದ ಜೆಡಿಎಸ್ ಪಕ್ಷವನ್ನು ಆಯ್ಕೆಗೊಳಿಸುವ ಮೂಲಕ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಸಹಕರಿಸಬೇಕೆಂದು ಶಾಸಕ ಡಿ.ಸಿ.ತಮ್ಮಣ್ಣ ಕೋರಿದರು.

ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆ ಗ್ರಾಮದಲ್ಲಿ ಆಯೋಜಿಸಿದ್ದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮಂಡ್ಯದ ಅಭಿವೃದ್ಧಿಗಾಗಿ 8 ಸಾವಿರ ಕೋಟಿ ರೂ. ಹಣವನ್ನು ಬಿಡುಗಡೆಗೊಳಿಸಿದ್ದರು. ಆಗ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷದವರು ಮಂಡ್ಯ ಬಜೆಟ್ ಎಂದು ಟೀಕೆ ಮಾಡುತ್ತಿದ್ದರು. ಇದನ್ನು ಮಂಡ್ಯ ಜಿಲ್ಲೆಯವರು ಅರ್ಥಮಾಡಿಕೊಳ್ಳಬೇಕೆಂದು ತಿಳಿಸಿದರು.

ಸಮ್ಮಿಶ್ರ ಸರಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ. ಕುಮಾರಸ್ವಾಮಿ ರಾಜ್ಯದ ರೈತರ 45 ಸಾವಿರ ಕೋಟಿ ರೂ. ಸಾಲಮನ್ನಾ ಮಾಡುವ ಮೂಲಕ ರೈತರ ನೆರವಿಗೆ ಧಾವಿಸಿದ್ದರು. ಈಗಾಗಲೇ ರಾಜ್ಯಾದ್ಯಂತ ಪಂಚರತ್ನ ಯೋಜನೆಯನ್ನು ಜಾರಿಗೊಳಿಸಿ ಪ್ರತಿಯೊಬ್ಬರಿಗೂ ಆರೋಗ್ಯ, ಶಿಕ್ಷಣ, ನೀರಾವರಿ, ರೈತ ಚೈತನ್ಯ, ಯುವ ಸಮುದಾಯ ಸಬಲೀಕರಣಗಳ ಯೋಜನೆ ರೂಪಿಸಿದ್ದು, ಮುಂದಿನ ದಿನಗಳಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದಲ್ಲಿ ಈ ಯೋಜನೆಗಳನ್ನು ಜಾರಿ ಮಾಡಲಿದ್ದಾರೆಂದರು.

ಜೆಡಿಎಸ್ ರಾಜ್ಯಸಂಘಟನಾ ಕಾರ್ಯದರ್ಶಿ ಬಿಳಿಯಪ್ಪ ಮಾತನಾಡಿ, ಕ್ಷಣಿಕ ಸುಖಗಳಿಗೆ, ಆಮಿಷಗಳಿಗೆ ಒಳಗಾಗದೆ ಜೆಡಿಎಸ್ ಪ್ರತಿನಿಧಿಯನ್ನು ಆಯ್ಕೆಗೊಳಿಸಬೇಕು. ಕ್ಷೇತ್ರದಲ್ಲಿ ಪ್ರಜ್ಞಾವಂತ ಮತದಾರರಿದ್ದೀರಿ. ನಮ್ಮ ಆಯ್ಕೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪೂರಕವಾಗಬೇಕಾದರೆ ಶಾಸಕ ಡಿ.ಸಿ.ತಮ್ಮಣ್ಣ ಅವರನ್ನು ಮುಂದಿನ ಚುನಾವಣೆಯಲ್ಲಿ ಆಯ್ಕೆಗೊಳಿಸಬೇಕೆಂದು ಕೋರಿದರು. ಕಾರ್ಯಕ್ರಮಕ್ಕೂ ಮೊದಲು ಶ್ರೀಮಹಾ ಕಾಳಮ್ಮ, ರಾಮಮಂದಿರ ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಹೊನ್ನೇಗೌಡ, ಚಿಕ್ಕತಿಮ್ಮೇ ಗೌಡ, ಎಚ್.ಎಂ.ಮರಿಮಾದೇಗೌಡ, ಮಾದನಾಯಕನಹಳ್ಳಿ ರಾಜಣ್ಣ, ನಗರಕೆರೆ ಸಂದೀಪ್, ತೊಪ್ಪನಹಳ್ಳಿ ಮಹೇಂದ್ರ, ಚಿಕ್ಕಹುಚ್ಚೇಗೌಡ, ಮಂಚೇಗೌಡ, ಆನಂದ, ಮಧು, ಹೊನ್ನಪ್ಪ ಪ್ರದೀಪ್ ಸೇರಿದಂತೆ ಹಲವರಿದ್ದರು.

ಶಾರದಮ್ಮ ನಿಧನ



ಕೆ.ಆರ್.ಪೇಟೆ, ನ.8– ತಾಲೂಕು ಹೊಸಹೊಳಲು ಗ್ರಾಮದ ಲೇ. ರಂಗಸ್ವಾಮಿಶೆಟ್ಟಿ ಅವರ ಧರ್ಮಪತ್ನಿ, ಶಾರದಮ್ಮ (80) ಅವರು ಇಂದು ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಓರ್ವ ಪುತ್ರ, ಸೊಸೆ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹೊಸಹೊಳಲು ಗ್ರಾಮದ ರುದ್ರಭೂಮಿಯಲ್ಲಿ ನಡೆಯಿತು. ಮೃತರ ನಿಧನಕ್ಕೆ ಎಚ್.ಆರ್.ಲೋಕೇಶ್, ಎಚ್.ಎನ್.ಪ್ರವೀಣ್, ಹೆಚ್.ಡಿ.ಅಶೋಕ್ ಸಂತಾಪ ಸೂಚಿಸಿದ್ದಾರೆ.

ನ.24, ಮಳವಳ್ಳಿಯಲ್ಲಿ ಉದ್ಯೋಗ ಮೇಳ

ಮಂಡ್ಯ, ನ8– ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಮಳವಳ್ಳಿ ಶಾಂತಿ ಪದವಿ ಕಾಲೇಜು ಆವರಣದಲ್ಲಿ ನವೆಂಬರ್ 24 ರಂದು ಬೃಹತ್ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದೆ.

20ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು ಆಸಕ್ತಿಯುಳ್ಳ ಎಸ್.ಎಸ್.ಎಲ್.ಸಿ, ಪಿಯುಸಿ, ಐಟಿಐ ಯಾವುದೇ ಪದವಿ, ಡಿಪ್ಲೊಮೊ, ಬಿ.ಇ, ವಿದ್ಯಾರ್ಹತೆ ಹೊಂದಿರುವ ಕನಿಷ್ಠ 18 ವರ್ಷ 35 ವರ್ಷದೊಳಗಿನ ಅಭ್ಯರ್ಥಿಗಳು ಸ್ವ ವಿವರದೊಂದಿಗೆ ಹಾಗೂ ಎಲ್ಲಾ ಮೂಲ ದಾಖಲಾತಿ ಪ್ರತಿಗಳೊಂದಿಗೆ ಭಾಗವಹಿಸಬಹುದಾಗಿದೆ.

ಮಾಹಿತಿಗಾಗಿ ಉದ್ಯೋಗಾಧಿಕಾರಿಗಳ ದೂ.ಸಂ.08232–295124, ಮೊ.ನಂ. 8618332893 ಅನ್ನು ಸಂಪರ್ಕಿಸಬಹುದೆಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲಾಡಳಿತದಿಂದ ಕೆಂಪೇಗೌಡ ಮೃತ್ತಿಕೆಗೆ ಪೂಜೆ



ಮಂಡ್ಯ, ನ.8– ನಾಡಪ್ರಭು ಕೆಂಪೇಗೌಡರ 108 ಅಡಿ ಕಂಚಿನ ಪ್ರತಿಮೆ ಅನಾವರಣ ಹಾಗೂ ಥೀಮ್ ಪಾರ್ಕ್‌ಗೆ ಕಳೆದ 10 ದಿನಗಳಿಂದ ಜಿಲ್ಲೆಯ ಗ್ರಾಮ ಪಂಚಾಯತಿ ಹಾಗೂ ವಾರ್ಡ್‌ಗಳಿಂದ ಪವಿತ್ರ ಮೃತ್ತಿಕೆ ಸಂಗ್ರಹಣೆ ಮಾಡಲಾಗಿದ್ದು, ಪವಿತ್ರ ಮೃತ್ತಿಕೆಗೆ ಜಿಲ್ಲಾಧಿಕಾರಿ ಡಾ.ಎಚ್.ಎನ್.ಗೋಪಾಲಕೃಷ್ಣ ಪೂಜೆ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ಪವಿತ್ರ ಮೃತ್ತಿಕೆಗೆ ಮಂಗಳವಾರ ಶಿವಪುರದ ಸತ್ಯಾಗ್ರಹ ಸೌಧದಲ್ಲಿ ವಿಜೃಂಭಣೆಯಿಂದ ಪೂಜೆ ಸಲ್ಲಿಸಿ ಬೆಂಗಳೂರಿನ ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಕಳುಹಿಸಿಕೊಡಲಾಗುವುದು ಎಂದರು. ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್, ಜಿ.ಪಂ. ಸಿಇಓ ಶಾಂತ ಹುಲ್ಮನಿ, ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜು, ಉಪವಿಭಾಗಾಧಿಕಾರಿ ಕೀರ್ತನ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಂಜೀವಪ್ಪ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಮುರುಘಾಶ್ರೀ ಮಾಡಿರುವುದು ಅಕ್ಷಮ್ಯ ಅಪರಾಧ

ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ



ಉಡುಪಿ: ಮುರುಘಾ ಶರಣರು ಕ್ಷಮಿಸಲಾರದ ಅಕ್ಷಮ್ಯ ಅಪರಾಧ ಮಾಡಿದ್ದಾರೆ. ಇಷ್ಟು ಕೆಳಮಟ್ಟಕ್ಕೆ ಇಳಿಯುತ್ತಾರೆ ಅಂತ ಯಾರೂ ನಿರೀಕ್ಷೆ ಮಾಡಿರಲಿಲ್ಲ. ಎಲ್ಲರೂ ಖಂಡಿಸಬೇಕು. ಶ್ರೀಗಳಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಮಂಗಳವಾರ ಹೇಳಿದ್ದಾರೆ.

ಮುರುಘಾ ಶರಣರಿಂದ ಲೈಂಗಿಕ ಕಿರುಕುಳ ವಿಚಾರಕ್ಕೆ ಸಂಬಂಧಿಸಿದಂತೆ ಮೊದಲ ಬಾರಿಗೆ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರತಿಕ್ರಿಯೆ ನೀಡಿದ ಅವರು, ಮುರುಘಾ ಶರಣರು ಕ್ಷಮಿಸಲಾರದ ಅಕ್ಷಮ್ಯ ಅಪರಾಧ ಮಾಡಿದ್ದಾರೆ. ಇಷ್ಟು ಕೆಳಮಟ್ಟಕ್ಕೆ ಇಳಿಯುತ್ತಾರೆಂದು ಅಂದುಕೊಂಡಿರಲಿಲ್ಲ. ಎಲ್ಲರೂ ಇದನ್ನು ಖಂಡಿಸಬೇಕು. ಶ್ರೀಗಳಿಗೆ ತಕ್ಕ ಶಿಕ್ಷೆಯಾಗಬೇಕು ಎಂದು ಹೇಳಿದರು.

ಒಂದನೇ ಪುಟದಿಂದ

ಜೆಡಿಎಸ್ ಸೇರ್ಪಡೆಗೆ ಸಿದ್ಧತೆ

ಅಷ್ಟೇ ಅಲ್ಲ, ಮುಂದಿನ ದಿನಗಳಲ್ಲಿ ಮುಂಬೈ ಕರ್ನಾಟಕ ಭಾಗದಲ್ಲಿ ಜೆಡಿಎಸ್ ಅನ್ನು ಬಲಗೊಳಿಸಿ, ಹೆಚ್ಚು ಸ್ಥಾನ ಪಡೆಯುವುದಾಗಿಯು ತಿಳಿಸಿದ್ದಾರೆ. ಬಾಲಚಂದ್ರ ಜಾರಕಿಹೊಳಿ ಅವರ ಮಾತಿಗೆ ಸ್ಪಂದಿಸಿರುವ ಕುಮಾರಸ್ವಾಮಿ ಕೆಲವು ಷರತ್ತುಗಳನ್ನು ವಿಧಿಸಿ, ಪಕ್ಷಕ್ಕೆ ಸೇರ್ಪಡೆ ಮಾಡಿಕೊಳ್ಳಲು ತಮ್ಮ ಅಭ್ಯಂತರ ಇಲ್ಲ ಎಂದಿದ್ದಾರೆ.

ಬಾಲಚಂದ್ರ ಜಾರಕಿಹೊಳಿ ಜೆಡಿಎಸ್‌ನಿಂದಲೇ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದರು. ಯಡಿಯೂರಪ್ಪ ಮೊದಲ ಬಾರಿಗೆ ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಆಪರೇಷನ್ ಕಮಲಕ್ಕೆ ಒಳಗಾಗಿ ಅವರು ಜೆಡಿಎಸ್ ತೊರೆದು ಬಿಜೆಪಿ ಸೇರಿದ್ದರು.

ಕುಮಾರಸ್ವಾಮಿ ನೇತೃತ್ವದ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರವನ್ನು ರಮೇಶ್ ಜಾರಕಿಹೊಳಿ ಹಾಗೂ ಬಾಲಚಂದ್ರ ಜಾರಕಿಹೊಳಿ ನೇತೃತ್ವದಲ್ಲಿ 17 ಶಾಸಕರನ್ನು ಸೆಳೆದು, ಅಂದಿನ ಮೈತ್ರಿ ಸರ್ಕಾರ ಪತನಗೊಳ್ಳಲು ಪ್ರಮುಖ ರೂವಾರಿಗಳಾಗಿದ್ದರು.

ಆನಂತರ ಯಡಿಯೂರಪ್ಪ ಸರ್ಕಾರದಲ್ಲಿ ರಮೇಶ್ ಜಾರಕಿಹೊಳಿ ನೀರಾವರಿ ಸಚಿವರಾಗಿ ಅಧಿಕಾರ ವಹಿಸಿಕೊಂಡಿದ್ದರು. ಇವರು ಸಚಿವರಾಗಿದ್ದ ಸಂದರ್ಭದಲ್ಲೇ ಲೈಂಗಿಕ ಹಗರಣಕ್ಕೆ ಸಿಲುಕಿ ತಮ್ಮ ಸ್ಥಾನ ತೊರೆಯಬೇಕಾಯಿತು. ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಬಾಲಚಂದ್ರ ಜಾರಕಿಹೊಳಿಗೂ ಸಂಪುಟದಲ್ಲಿ ಅವಕಾಶ ನೀಡಿರಲಿಲ್ಲ. ಅಷ್ಟೇ ಅಲ್ಲ, ಇವರ ಕುಟುಂಬದವರನ್ನು ರಾಜಕೀಯವಾಗಿ ಬಿಜೆಪಿ ವರಿಷ್ಠರು ಕಡೆಗಾಣಿಸಲು ಮುಂದಾದರು. ಬಿಜೆಪಿಗೆ ತಮ್ಮ ಶಕ್ತಿ ತೋರಿಸಲೇಂದೇ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್‌ಗೆ ನಡೆದ ಚುನಾವಣೆಯಲ್ಲಿ ತಮ್ಮ ಸಹೋದರ ಲಖನ್ ಜಾರಕಿಹೊಳಿ ಅವರನ್ನು ಕಣಕ್ಕಿಳಿಸಿ, ಬಿಜೆಪಿಯ ಅಧಿಕೃತ ಅಭ್ಯರ್ಥಿಯನ್ನೇ ಪರಾಭವಗೊಳಿಸಿದರು. ಅಷ್ಟೇ ಅಲ್ಲ, ಆನಂತರ ನಡೆದ ಶಿಕ್ಷಕರ ಕ್ಷೇತ್ರದಿಂದ ಪರಿಷತ್ತಿಗೆ ನಡೆದ ಚುನಾವಣೆಯಲ್ಲೂ ಬಿಜೆಪಿ ಅಭ್ಯರ್ಥಿ ಸೋಲುಂಡರು. ಈ ಬೆಳವಣಿಗೆಯ ನಂತರ ಜಾರಕಿಹೊಳಿ ಕುಟುಂಬವನ್ನು ದೆಹಲಿ ವರಿಷ್ಠರು ಕಡೆಗಾಣಿಸುತ್ತಾ ಬಂದಿದ್ದರು. ದಕ್ಷಿಣ ಭಾರತದಲ್ಲಿ ಮತ್ತೆ ಅಧಿಕಾರಕ್ಕೆ ತಂದ ತಮ್ಮನ್ನೇ ಕಡೆಗಾಣಿಸಲಾಗಿದೆ ಎಂದ ಈ ಕುಟುಂಬ ಇದೀಗ ಪಕ್ಷವನ್ನೇ ತೊರೆದು, ತಮ್ಮ ಬೆಂಬಲಿಗರ ಜೊತೆಗೂಡಿ ಜೆಡಿಎಸ್ ಸೇರಲು ಮುಂದಾಗಿದೆ.

ವರದಿ ಬಂದ ಬಳಿಕ ಮುಂದಿನ ಕ್ರಮ: ಸಿಎಂ

ಸತೀಶರ ಶಾಲಾ ದಾಖಲಾತಿಯಲ್ಲಿ ಹಿಂದೂ ಎಂದು ಇದೆ ಅಲ್ಲವೇ ತಾಂತ್ರಿಕವಾದ ಸರ್ಟಿಫಿಕೇಟ್, ನಂಬಿಕೆ ಶತಮಾನದಿಂದ ಇದೆ. ಜನರ ನಂಬಿಕೆಗೆ ಘಾಸಿ ಮಾಡಿದ ಬಳಿಕ ಚರ್ಚೆ ಏನು ಮಾಡುವುದು. ಚರ್ಚೆಯೂ ಬೇಕಿಲ್ಲ, ಕ್ಷಮೆಯೂ ಬೇಕಿಲ್ಲ, ಜನ ತೀರ್ಮಾನಿಸುತ್ತಾರೆ ಎಂದು ಕಿಡಿಕಾರಿದರು.

ಸಿದ್ಧರಾಮಯ್ಯ ಬಂದು ಜನಸಂಕಲ್ಪ ಯಾತ್ರೆ ನೋಡಲಿ: ಬಿಜೆಪಿ ಜನ ಸಂಕಲ್ಪ ಯಾತ್ರೆಗೆ ಜನರ ಕೊರತೆ ಎಂದು ಸಿದ್ಧರಾಮಯ್ಯ ವ್ಯಂಗ್ಯವಾಡಿದ ಕುರಿತು ಪ್ರತಿಕ್ರಿಯಿಸಿ ಸಿದ್ಧರಾಮಯ್ಯ ಅವರಿಗೆ ಬಂದು ಜನಸಂಕಲ್ಪ ಯಾತ್ರೆ ನೋಡಲು ಹೇಳಿ. ಆಹ್ವಾನ ನೀಡುತ್ತೇವೆ ಸಿದ್ಧರಾಮಯ್ಯ ಬಂದು ನೋಡಲಿ ಎಂದರು.

ಚೆನ್ನಮ್ಮ ವಸತಿ ಶಾಲೆಗೆ ಸಿಎಂ ಬೊಮ್ಮಾಯಿ ಭೇಟಿ: ಇದೇ ವೇಳೆ ಸಾಣೇಹಳ್ಳಿ ಬಳಿಯ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಮೈದಾನಕ್ಕೆ ಸಿಎಂ ಬೊಮ್ಮಾಯಿ ಭೇಟಿ ನೀಡಿದರು. ಈ ವೇಳೆ ಮಕ್ಕಳಿಗೆ ಚಾಕೋಲೇಟ್ ನೀಡಿದರು. ವಿದ್ಯಭ್ಯಾಸ ಮಾಡಿ ಏನಾಗಬೇಕೆಂದಿದ್ದೀರಿ ಎಂದು ಮಕ್ಕಳಿಗೆ ಸಿಎಂ ಪ್ರಶ್ನೆ ಮಾಡಿದರು. ಆಗ ವಿದ್ಯಾರ್ಥಿಗಳು ಡಾಕ್ಟರ್, ಸೈಂಟಿಸ್ಟ್, ಎಸ್ಪಿ, ಡಿಸಿ ಆಗುವ ಗುರಿಯಿದೆ ಎಂದು ಹೇಳಿದರು. ಆಗ ಸಿಎಂ ಬೊಮ್ಮಾಯಿ ಉತ್ತಮ ವಿದ್ಯಭ್ಯಾಸ ಮಾಡಿ ಶಾಲೆ ಮತ್ತು ಪೋಷಕರಿಗೆ ಗೌರವ ತರಬೇಕೆಂದು ಕಿವಿಮಾತು ಹೇಳಿದರು.

ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ, ಹೇಳಿಕೆ ತಪ್ಪಾದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ

ಶಾಸಕ ಸತೀಶ್ ಜಾರಕಿಹೊಳಿ ಸ್ಪಷ್ಟನೆ



ಬೆಳಗಾವಿ: ಹಿಂದು ಪದದ ಬಗ್ಗೆ ನೀಡಿದ್ದ ಹೇಳಿಕೆ ಕುರಿತು ಕ್ಷಮೆ ಕೇಳುವ ಪ್ರಶ್ನೆಯೇ ಇಲ್ಲ, ಹೇಳಿಕೆ ತಪ್ಪೆಂದು ಸಾಬೀತಾದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲು ಸಿದ್ಧನಿದ್ದೇನೆಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿಯವರು ಮಂಗಳವಾರ ಹೇಳಿದ್ದಾರೆ.

ಈ ಕುರಿತು ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ನನ್ನ ಹೇಳಿಕೆಯು ತಪ್ಪು ಎಂದಾದರೆ ಕ್ಷಮೆ ಯಾಚಿಸುವುದಷ್ಟೇ ಅಲ್ಲ, ರಾಜೀನಾಮೆಯನ್ನೂ ಕೊಡುತ್ತೇನೆ ಎಂದು ಹೇಳಿದರು.


ನಾನು ಅರೆಬರೆ ಓದಿದವನಲ್ಲ, 30 ವರ್ಷಗಳಿಂದ ಓದುತ್ತಲೇ ಇದ್ದೇನೆ. ಆಳವಾದ ಅಧ್ಯಯನದ ಅನುಭವದಿಂದಲೇ ನಾನು ಈ ಹೇಳಿಕೆ ನೀಡಿದ್ದೇನೆಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಗೆ ತಿರುಗೇಟು ನೀಡಿದರು.

ಹಿಂದೂ ಎಂಬುದು ಪರ್ಷಿಯನ್ ಭಾಷೆಯಿಂದ ಬಂದ ಶಬ್ದ. ಹಿಂದೂ ಪದದ ಬಗ್ಗೆ ಶಬ್ದಕೋಶದಲ್ಲಿ, ವಿಕಿಪಿಡಿಯಾದಲ್ಲಿ ಇರುವ ವಿವರಣೆಯನ್ನು ನಾನು ಹೇಳಿದ್ದೇನೆ. ಹಿಂದೂ ಪದದ ಬಗ್ಗೆ ಚರ್ಚೆಯಾಗಬೇಕು ಎಂದು ನಾನು ಹೇಳಿದ್ದೇನೆ. ಆದರೆ, ನಾನು ಏನು ಹೇಳಿದ್ದೇನೆಯೋ ಅದು ಬಗ್ಗೆ ಅಥವಾ ಹಿಂದೂ ಪದದ ನಿಜವಾದ ಅರ್ಥದ ಬಗ್ಗೆ ಚರ್ಚೆ ನಡೆಯುತ್ತಿಲ್ಲ. ಬೇರೆ ಯಾವುದೋ ವಿಷಯಗಳ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ನಾನು ತಪ್ಪು ಹೇಳಿದ್ದೇನೆಂದು ಸಾಬೀತುಪಡಿಸಿದರೆ ಕ್ಷಮೆಯಾಚಿಸುವುದಷ್ಟೇ ಅಲ್ಲ, ಶಾಸಕ ಸ್ಥಾನಕ್ಕೂ ರಾಜೀನಾಮೆ ನೀಡುತ್ತೇನೆ ಎಂದು ಸವಾಲು ಹಾಕಿದರು.

ಹಿಂದು ಪದಕ್ಕೆ ಶಬ್ದಕೋಶದಲ್ಲಿ ಅಶ್ಲೀಲ ಎಂಬ ಅರ್ಥವಿದೆ. ಶಬ್ದಕೋಶ ಮತ್ತು ವಿಕಿಪೀಡಿಯಾದಲ್ಲಿ ಇರುವುದನ್ನೇ ನಾನು ಹೇಳಿದ್ದೇನೆ. ನನ್ನ ಹೇಳಿಕೆಯನ್ನು ಸಾರಾಸಗಟಾಗಿ ವಿರೋಧಿಸುವ ಬದಲು, ಸಮರ್ಪಕವಾಗಿ ಪರಿಶೀಲಿಸಲಿ. ಯಾವುದೇ ಧರ್ಮ, ಜಾತಿ, ಸಮಾಜದ ವಿರುದ್ಧ ನಾನು ಹೇಳಿಕೆ ನೀಡಿಲ್ಲ ಈಗ ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದೆ, ಅವರಿಗೆ ಸೂಕ್ತ ಎನಿಸುವ ಸಂಸ್ಥೆಗಳಿಗೆ ತನಿಖೆ ಮಾಡಿಸಲಿ. ನನ್ನ ಜತೆ ಚರ್ಚೆಗೆ ಬಂದರೆ ನಾನೇ ಅವರಿಗೆ ಮನವರಿಕೆ ಮಾಡಿಕೊಡುವೆ. ಚರ್ಚೆಗೆ ಬಂದವರಿಗೆ ದಾಖಲೆ ಸಮೇತ ವಿವರಣೆ ನೀಡಲು ಸಿದ್ಧನಿರುವೆ ಎಂದು ತಿಳಿಸಿದರು.

ಸತೀಶ್ ಜಾರಕಿಹೊಳಿ ಅರೆಬರೆ ಓದು, ಜ್ಞಾನದಿಂದ ಹೇಳಿಕೆ ನೀಡಿದ್ದಾರೆ

ರಾಹುಲ್ ಗಾಂಧಿ, ಸಿದ್ದರಾಮಯ್ಯ ಮೌನ ಏಕೆ: ಸಿಎಂ ಬೊಮ್ಮಾಯಿ



ಉಡುಪಿ: ಕಾಂಗ್ರೆಸ್ ನಾಯಕ ಶಾಸಕ ಸತೀಶ್ ಜಾರಕಿಹೊಳಿಯವರು ಈ ದೇಶದ ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗುವ ರೀತಿಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಸಂಪೂರ್ಣವಾದ ಆಳವಾದ ಅಧ್ಯಯನವಿಲ್ಲದೆ ಅರೆಬರೆಯ ಓದು, ಜ್ಞಾನದಿಂದ ಹೇಳಿಕೆ ನೀಡಿದ್ದಾರೆ. ಕೇವಲ ಓಟಿಗಾಗಿ, ತುಷ್ಟಿ ರಾಜಕಾರಣ ಮಾಡುವುದು, ಈ ರೀತಿ ಮಾತನಾಡಿದರೆ ಅಲ್ಪಸಂಖ್ಯಾತರ ಮತಗಳನ್ನು ಗಳಿಸಬಹುದು ಎಂಬ ಭ್ರಮೆಯಲ್ಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಉಡುಪಿಯಲ್ಲಿಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು, ಭಾರತದ ಜನರ ನಂಬಿಕೆ, ಬುನಾದಿಗಳಿಗೆ ಧಕ್ಕೆ ತರುವ ರೀತಿಯಲ್ಲಿ ಮಾತನಾಡಿದ್ದಾರೆ. ದೇಶದಲ್ಲಿ ಆಂತರಿಕ ಕ್ಷೋಭೆಯನ್ನುಂಟು ಮಾಡುವುದು ದೇಶದ್ರೋಹದ ಕೆಲಸ, ಇದನ್ನು ಪ್ರತಿಯೊಬ್ಬರೂ ಖಂಡಿಸಬೇಕು ಎಂದರು.

ಕಾಂಗ್ರೆಸ್ ಪಕ್ಷ ಸತೀಶ್ ಜಾರಕಿಹೊಳಿಯವರ ಹೇಳಿಕೆಗೆ ಸಹಮತ ರೀತಿಯಲ್ಲಿ ನಡೆದುಕೊಳ್ಳುತ್ತಿದೆ. ಸಣ್ಣಪುಟ್ಟ ವಿಚಾರಕ್ಕೆ ಕೂಗುವ ರಾಹುಲ್ ಗಾಂಧಿ, ಸಿದ್ದರಾಮಯ್ಯನವರು ಈಗೇಕೆ ಮೌನವಾಗಿದ್ದಾರೆ, ಅವರ ಮೌನ ರಾಹುಲ್ ಗಾಂಧಿಯುವರ ಸಮ್ಮತಿಯೇ, ಜಾರಕಿಹೊಳಿಯವರ ಹೇಳಿಕೆಯಿಂದ ಈ ದೇಶದ ಬಹುಸಂಖ್ಯಾತ ಹಿಂದೂಗಳ ಭಾವನೆಗಳಿಗೆ ಧಕ್ಕೆಯಾದರೂ ಕೂಡ ಮಾತನಾಡುವುದಿಲ್ಲ ಎಂದರೆ ಅರ್ಥವೇನು ಎಂದು ಬೊಮ್ಮಾಯಿ ಪ್ರಶ್ನಿಸಿದ್ದಾರೆ.

ಇಷ್ಟೆಲ್ಲಾ ವಿವಾದ ಎದ್ದರೂ, ವಿರೋಧ ಕೇಳಿಬರುತ್ತಿದ್ದರೂ ಸತೀಶ್ ಜಾರಕಿಹೊಳಿಯವರು ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಇದು ಅತ್ಯಂತ ಹೇಯ ಕೃತ್ಯ. ಸಮಾಜದಲ್ಲಿ ಹುಳಿಹಿಂಡುವ ಕೆಲಸ ಮಾಡುತ್ತಿದ್ದಾರೆ. ಅವರು ಮತ್ತು ಕಾಂಗ್ರೆಸ್ ಪಕ್ಷ ಕೂಡಲೇ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದ್ದಾರೆ

ಇನ್ನು ಉಡುಪಿಯಲ್ಲಿ ಮಾತನಾಡಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಹಿಂದೂಗಳಿಗೆ ಅಪಮಾನ ಮಾಡುವ ರೀತಿಯಲ್ಲಿ ಮಾತನಾಡಿರುವುದು ಖಂಡನೀಯ. ಅವರು ರಾಜ್ಯದ ಜನತೆಯ ಕ್ಷಮೆ ಕೇಳಬೇಕೆಂದು ಒತ್ತಾಯಿಸಿದ್ದಾರೆ.

ಹಿಂದೂಗಳ ಬಗ್ಗೆ ಹಗುರವಾಗಿ ಮಾತನಾಡಿ ತಾನು ದೊಡ್ಡವನಾಗುತ್ತೇನೆ ಎಂಬ ಭ್ರಮೆಯಲ್ಲಿ ಸತೀಶ್ ಜಾರಕಿಹೊಳಿಯವರು ಇದ್ದಂತೆ ಕಂಡುಬರುತ್ತಿದೆ. ಇನ್ನು ಮುಂದೆ ಯಾದರೂ ಗೌರವದಿಂದ ನಡೆದುಕೊಂಡು ಹಿಂದೂಗಳಿಗೆ ಅಪಮಾನವಾಗುವ ರೀತಿಯಲ್ಲಿ ನಡೆದುಕೊಳ್ಳಬಾರದೆಂದು ಒತ್ತಾಯಿಸುತ್ತೇನೆ ಎಂದು ಹೇಳಿದ್ದಾರೆ.

ಒಬ್ಬ ಹಿಂದೂವಾಗಿ ಸತೀಶ್ ಜಾರಕಿಹೊಳಿ ಹೇಳಿಕೆಯನ್ನು ನಾನೂ ಒಪ್ಪಲ್ಲ



ಹುಬ್ಬಳ್ಳಿ: ಸತೀಶ್ ಜಾರಕಿಹೊಳಿ ಹೇಳಿಕೆಯನ್ನು ನಾನು ಒಬ್ಬ ಹಿಂದೂವಾಗಿ ಒಪ್ಪುವುದಿಲ್ಲ. ಅದು ಅವರ ವೈಯಕ್ತಿಕ ಅಭಿಪ್ರಾಯ. ನಾವು ಮತ್ತು ಕಾಂಗ್ರೆಸ್ ಪಕ್ಷ ಅವರ ಹೇಳಿಕೆಯನ್ನು ಒಪ್ಪುವುದಿಲ್ಲ. ನಮ್ಮ ಸಂಸ್ಕೃತಿ ಎಲ್ಲ ಧರ್ಮ, ಜಾತಿ ಒಟ್ಟಿಗೆ ತೆಗೆದುಕೊಂಡು ಹೋಗುವುದು ನಮ್ಮ ಕರ್ತವ್ಯ ಅಂತ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಈ ಬಗ್ಗೆ ಹುಬ್ಬಳ್ಳಿಯಲ್ಲಿ ಮಾಧ್ಯಮಗಳಿಗೆ ಮಾತನಾಡಿದ ಅವರು, ನಾನು ಒಬ್ಬ ಹಿಂದೂ ಧರ್ಮದವನು ಧರ್ಮಕ್ಕೆ ನಮ್ಮದೇ ಆದ ಇತಿಹಾಸವಿದೆ. ಸತೀಶ್ ಹೇಳಿಕೆ ಯಿಂದ ಪಕ್ಷಕ್ಕೆ ಡ್ಯಾಮೇಜ್ ಆಗೋದಿಲ್ಲ. ಕೆಪಿಸಿಸಿ ಇಂದ ಈ ಬಗ್ಗೆ ಸ್ಪಷ್ಟನೆ ಪಡೆಯುತ್ತೇವೆ. ಸಾರ್ವಜನಿಕ ಬದುಕಿನಲ್ಲಿ ಈ ರೀತಿ ಹೇಳಿಕೆ ನೀಡುವುದು ಖಂಡನೀಯ ಎಂದರು. ಬೀದಿಬದಿ ವ್ಯಾಪಾರಸ್ಥರಿಂದ ಬೈರತಿ ಬಸವರಾಜ್ ಕಮಿಷನ್ ಪಡೆದ ಆರೋಪ ಬಗ್ಗೆ ಮಾತನಾಡಿದ ಅವರು, ಸರ್ಕಾರ ನಿಂತಿರುವುದೇ ಕಮಿಷನ್ ಮೇಲೆ ಬಸವರಾಜ ಬೊಮ್ಮಾಯಿ ಅವರು ಇದಕ್ಕೆ ಉತ್ತರ ಕೊಡಬೇಕು. ಬೀದಿ ಬದಿ ವ್ಯಾಪಾರಿಗಳಿಂದಲೂ ಹಣ ಪಡೆಯುವ ಮಟ್ಟಕ್ಕೆ ಸರ್ಕಾರ ಬಂದಿದೆ ಅಂತ ಆರೋಪ ಮಾಡಿದರು.

2023 ರಾಜ್ಯ ವಿಧಾನಸಭಾ ಚುನಾವಣೆಗೆ ಬಿಜೆಪಿ ಭರ್ಜರಿ ಸಿದ್ಧತೆ


ವಸತಿ ಯೋಜನೆಗಳ ಮೂಲಕ ಮತದಾರರ ಓಲೈಕೆ

ಬೆಂಗಳೂರು: 2023ರ ವಿಧಾನಸಭಾ ಚುನಾವಣೆಯ ಮೇಲೆ ಕಣ್ಣಿಟ್ಟಿರುವ ರಾಜ್ಯ ಬಿಜೆಪಿಯು ವಸತಿ ಯೋಜನೆಗಳ ಮೂಲಕ ಮತದಾರರ ಗಮನ ಸೆಳೆಯಲು ಸಿದ್ಧತೆ ನಡೆಸಿದೆ ಎಂದು ತಿಳಿದುಬಂದಿದೆ. ಮಹತ್ವಾಕಾಂಕ್ಷೆಯ 2 ವಸತಿ ಯೋಜನೆಗಳನ್ನು ಡಿಸೆಂಬರ್‌ನಲ್ಲಿ ಪ್ರಾರಂಭಿಸಲು ಬಿಜೆಪಿ ಸಿದ್ಧತೆ ನಡೆಸಿದ್ದು, ಡಿ.2ರಂದು ಪ್ರಧಾನಿ ಮೋದಿಯವರು ಈ ಯೋಜನೆಗಳಿಗೆ ಉದ್ಘಾಟನೆ ಮಾಡುವ ಸಾಧ್ಯತೆಗಳಿವೆ ಎನ್ನಲಾಗಿದೆ.

ಬಡವರಿಗೆ 1 ಲಕ್ಷ ನಿರ್ಮಿಸುವ ಯೋಜನೆ ಮತ್ತು ಬೆಂಗಳೂರು ಹೊರವಲಯದಲ್ಲಿರುವ ಸೂರ್ಯನಗರದಲ್ಲಿರುವ ವಸತಿ ಟೌನ್ ಶಿಪ್ ಬಿಜೆಪಿಯ ಮಹತ್ವಾಕಾಂಕ್ಷೆಯ ಯೋಜನೆಗಳಾಗಿವೆ ಎಂದು ಹೇಳಲಾಗುತ್ತಿದೆ. ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೊರೇಷನ್ ಲಿಮಿಟೆಡ್ ಅಡಿಯಲ್ಲಿ ಒಂದು ಲಕ್ಷ ಮನೆಗಳನ್ನು ನಿರ್ಮಿಸಲಾಗುತ್ತಿದ್ದು, ಕೆಲವು ಫಲಾನುಭವಿಗಳು ಯೋಜನೆಯಡಿ ಮನೆಗಳನ್ನು ಪಡೆಯಲಿದ್ದಾರೆ. ಸೂರ್ಯನಗರ ಯೋಜನೆಯಡಿ 30 ಸಾವಿರ ಕುಟುಂಬಗಳಿಗೆ ನಿವೇಶನ ಸಿಗಲಿದೆ.

ಈ ಸಂಬಂಧ ವಸತಿ ಸಚಿವ ವಿ.ಸೋಮಣ್ಣ ಪ್ರತಿಕ್ರಿಯೆ ನೀಡಿದ್ದು, ಮೋದಿಯವರಿಂದ ಯೋಜನೆಗಳ ಉದ್ಘಾಟಿಸಲು ಚಿಂತನೆ ನಡೆಸುತ್ತಿದೆ. ಈ ಬಗ್ಗೆ ಸಿಎಂ ಬೊಮ್ಮಾಯಿ ಅವರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾ ಗುತ್ತದೆ ಎಂದು ಹೇಳಿದ್ದಾರೆ. 2016ರಲ್ಲಿ ಸಿದ್ದರಾಮಯ್ಯ ಸರ್ಕಾರ 1 ಲಕ್ಷ ವಸತಿ ಯೋಜನೆಯನ್ನು ಘೋಷಿಸಿತ್ತು. ಅಂದಿನಿಂದ ಹಾಲಿ ಬೊಮ್ಮಾಯಿ ಸೇರಿದಂತೆ ನಾಲ್ವರು ಮುಖ್ಯಮಂತ್ರಿಗಳು ಮತ್ತು ನಾಲ್ವರು ವಸತಿ ಸಚಿವರಾದ ಎಂ.ಕೃಷ್ಣಪ್ಪ, ಯು.ಟಿ.ಖಾದರ್, ಎಂಟಿಬಿ ನಾಗರಾಜ್ ಮತ್ತು ವಿ.ಸೋಮಣ್ಣ ಅಧಿಕಾರಕ್ಕೆ ಬಂದಿದ್ದಾರೆ, ಆದರೆ, ಯೋಜನೆ ಉದ್ಘಾಟನೆ ಮಾಡಲು ಸಾಧ್ಯವಾಗಿರಲಿಲ್ಲ. ಕಳೆದ ವರ್ಷ ಮೇನಲ್ಲಿ ಬಿಎಸ್ ಯಡಿಯೂರಪ್ಪ ಸರ್ಕಾರದ ಅವಧಿಯಲ್ಲಿ ವಸತಿ ಸಚಿವರಾಗಿದ್ದ ಸೋಮಣ್ಣ ಅವರು. ಆಗಸ್ಟ್ 15ರಂದು ಮೊದಲ ಬ್ಯಾಚ್ 6,000 ಮನೆಗಳನ್ನು ಹಸ್ತಾಂತರಿಸುವುದಾಗಿ ಘೋಷಿಸಿದ್ದರು. ಆದರೆ, ಅದೂ ಸಾಧ್ಯವಾಗಲಿಲ್ಲ.

ಕಾಪಿ ಹೊಡೆದು ಸಿಕ್ಕಿಬಿದ್ದ ವಿದ್ಯಾರ್ಥಿ: 14ನೇ ಮಹಡಿಯಿಂದ ಹಾರಿ ಆತ್ಮಹತ್ಯೆ



ಬೆಂಗಳೂರು: ವಿದ್ಯಾರ್ಥಿಯೊಬ್ಬ ಅಪಾರ್ಟ್‌ಮೆಂಟ್‌ನ ಹದಿನಾಲ್ಕನೇ ಮಹಡಿ ಯಿಂದ ಹಾರಿ ಆತ್ಮಹತ್ಯೆಗೆ ಶರಣಾದ ಘಟನೆ ಬೆಂಗಳೂರಿನಲ್ಲಿ ನಡೆದಿದೆ.

ಬೆಂಗಳೂರಿನ ನಾಗವಾರ ಬಳಿಯ ಆರ್ ಆರ್ ಸಿಗ್ನೇಚರ್ ಅಪಾರ್ಟ್‌ಮೆಂಟ್‌ನಲ್ಲಿ ಮೋಹಿನ್ ಎಂಬಾತ ಆತ್ಮಹತ್ಯೆಗೆ ಶರಣಾಗಿದ್ದಾನೆ. ಈತ ಮಹಮ್ಮದ್ ನೂರ್, ನೋಹೇರಾ ದಂಪತಿಯ ಒಬ್ಬನೇ ಮಗನಾಗಿದ್ದ. ಅಷ್ಟೇ ಅಲ್ಲದೇ ಮೋಹಿನ್ ಖಾಸಗಿ ಸ್ಕೂಲ್‌ನಲ್ಲಿ ಎಸ್ಎಸ್‌ಎಲ್‌ಸಿ ಓದುತ್ತಿದ್ದ. ಆದರೆ ಇಂದು ಪರೀಕ್ಷೆ ನಡೆಯುತ್ತಿದ್ದ ವೇಳೆ ಕಾಪಿ ಹೊಡೆಯುತ್ತಿದ್ದ ಮೋಹಿನ್ ಅನ್ನು ಕಂಡ ಶಿಕ್ಷಕರು ತರಗತಿಯಿಂದ ಹೊರಹಾಕಿದ್ದರು. ಈ ಹಿನ್ನೆಲೆಯಲ್ಲಿ ಬೆಳಗ್ಗೆ ಹನ್ನೊಂದು ಗಂಟೆಗೆ ಸ್ಕೂಲ್‌ನಿಂದ ಮೋಹಿನ್ ಹೊರಬಂದಿದ್ದನು. ಘಟನೆಯಿಂದ ಮನನೊಂದ ಮೋಹಿನ್ ಸಂಜೆ ಐದು ಗಂಟೆ ವೇಳೆಗೆ ಸಿಗ್ನೇಚರ್ ಅಪಾರ್ಟ್‌ಮೆಂಟ್‌ನ 14ನೇ ಮಹಡಿಯಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಆದರೆ ಮೋಹಿನ್ ಮನೆಯಿರುವುದು ಅಪಾರ್ಟ್‌ಮೆಂಟ್ ಮುಂಭಾಗದ ರಸ್ತೆಯ ಬದಿಯಲ್ಲಿ. ಅಪಾರ್ಟ್‌ಮೆಂಟ್‌ಗೆ ಅಪರಿಚಿತರ ಎಂಟ್ರಿ ಇಲ್ಲ, ಆದರೂ ಹೇಗೆ ಅಪಾರ್ಟ್‌ಮೆಂಟ್‌ನ ಟೆರೇಸ್‌ಗೆ ಮೋಹಿನ್ ಹೋದ ಎಂಬುದರ ಬಗ್ಗೆ ಇದೀಗ ಪ್ರಶ್ನೆ ಕಾಡುತ್ತಿದ್ದು, ಸಂಪಿಗೇಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಘಟನೆಗೆ ಸಂಬಂಧಿಸಿ ಮೋಹಿನ್ ಮೃತದೇಹವನ್ನು ಅಂಬೇಡ್ಕರ್ ಆಸ್ಪತ್ರೆಗೆ ರವಾನೆ ಮಾಡಲಾಗಿದೆ.

ಮೈಸೂರು ಮಿತ್ರ ಬುಧವಾರ 9, ನವೆಂಬರ್ 2022

ವಿದೇಶದಲ್ಲಿ ಕೆಲಸದ ಆಮಿಷವೊಡ್ಡಿ 1.50 ಲಕ್ಷ ರೂ. ವಂಚಿಸಿದ್ದ ವಂಚಕನ ಬಂಧನ

ಮಡಿಕೇರಿ ತಾಲೂಕು ಸಂಪಾಜೆಯ ಬಾಲಂಬಿ ಗ್ರಾಮದಲ್ಲಿ ಘಟನೆ

ಮಡಿಕೇರಿ, ನ.8– ವಿದೇಶದಲ್ಲಿ ಉದ್ಯೋಗ ಕೊಡಿಸುವುದಾಗಿ ಹೇಳಿ ಯುವಕನೊಬ್ಬನಿಂದ 1.50 ಲಕ್ಷ ರೂ.ಗಳನ್ನು ಪಡೆದು ವಂಚಿಸಿದ ಘಟನೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಕೇರಳ ರಾಜ್ಯ ಕಾಸರಗೋಡು ಮೂಲದ ಆರೋಪಿ ಎಂ.ಹೆಚ್. ಶ್ರೀನಾಥ್(45) ಎಂಬಾತನನ್ನು ಮಡಿಕೇರಿ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.



ವಂಚಕ ಶ್ರೀನಾಥ್

ಪ್ರಕರಣ ಹಿನ್ನೆಲೆ: ಮೂಲತಃ ಮಡಿಕೇರಿ ತಾಲೂಕು ಸಂಪಾಜೆ ಹೋಬಳಿ ಬಾಲಂಬಿ ಗ್ರಾಮ, ಎಂ.ಚೆಂಬು ನಿವಾಸಿ ಜೇಮ್ಸ್ ಜೋಸೆಫ್(24) ಎಂಬವರಿಗೆ ತಮ್ಮ ಧರ್ಮಗುರುಗಳ ಮೂಲಕ ಕೇರಳ ಕಾಸರಗೋಡು ಮುಟ್ಟತ್ತೋಡಿ ಗ್ರಾಮದ ಎಂ.ಹೆಚ್.ಶ್ರೀನಾಥ್ ಮತ್ತು ಅವನ ಸೋದರ ಸಂಬಂಧಿ ವಿನೋದ್ ಪರಿಚಯವಾಗಿತ್ತು.

2021ರ ನವೆಂಬರ್ 7ರಂದು ಸಂಜೆ 6 ಗಂಟೆಯ ವೇಳೆಗೆ ಜೇಮ್ಸ್ ಜೋಸೆಫ್ ಮನೆಗೆ ಆಗಮಿಸಿದ್ದ ಶ್ರೀನಾಥ್ ಮತ್ತು ವಿನೋದ್ ಅವರುಗಳು, 'ಜೆಕ್ ರಿಪಬ್ಲಿಕ್' ದೇಶದಲ್ಲಿ ಉದ್ಯೋಗ ಕೊಡಿಸುವ ಭರವಸೆ ನೀಡಿದ್ದರು. ಈ ಉದ್ಯೋಗ ಪಡೆಯಲು ಒಟ್ಟು 4 ಲಕ್ಷ ರೂ.ಗಳು ಖರ್ಚಾಗುತ್ತವೆ. ಮುಂಗಡ ಪ್ರೋಸೆಸಿಂಗ್ ಚಾರ್ಜ್ ಎಂಬಂತೆ 1.50 ಲಕ್ಷ ರೂ. ಹಾಗೂ ವೀಸಾ ಬಂದ ಬಳಿಕ ಇನ್ನುಳಿದ 2.50 ಲಕ್ಷ ರೂ.ಗಳನ್ನು ನೀಡುವಂತೆ ತಿಳಿಸಿದ್ದರು.

ಖಾತೆಗೆ ಹಣ ಜಮೆ: ಈ ಎಲ್ಲ ಬೆಳವಣಿಗೆಗಳ ನಡುವೆ ಜೇಮ್ಸ್ ಜೋಸೆಫ್, ಶ್ರೀನಾಥ್ ಹಾಗೂ ವಿನೋದ್ ಅವರುಗಳ ನಿರಂತರ ಸಂಪರ್ಕದಲ್ಲಿದ್ದರು ಎನ್ನಲಾಗಿದೆ. ಈ ನಡುವೆ ಜೇಮ್ಸ್ ಜೋಸೆಫ್ ಅವರಿಗೆ ಕೆಲಸದ ಆಫರಿಂಗ್ ಲೆಟರ್ ಬಂದಿತ್ತು ಈ ಹಿನ್ನೆಲೆಯಲ್ಲಿ ಜೇಮ್ಸ್ ಜೋಸೆಫ್ ಸಂಪಾಜೆಯ ಕೆನರಾ ಬ್ಯಾಂಕ್ ಖಾತೆಯಿಂದ ಶ್ರೀನಾಥ್ ನೀಡಿದ್ದ ಕಾಸರಗೋಡು ವಿನ ಖಾಸಗಿ ಬ್ಯಾಂಕ್ ಖಾತೆ ಒಂದಕ್ಕೆ 2021ರ ನ.15ರಂದು 1.50 ಲಕ್ಷ ರೂ.ಗಳನ್ನು ಜಮೆ ಮಾಡಿದ್ದರು. ಈ ವೇಳೆ ಮುಂದಿನ 3 ತಿಂಗಳಲ್ಲಿ ವೀಸಾ ಬರಲಿದ್ದು, ಇನ್ನುಳಿದ 2.50 ಲಕ್ಷ ರೂ.ಗಳನ್ನು ಹೊಂದಿಸಿಡುವಂತೆ ಶ್ರೀನಾಥ್, ಜೇಮ್ಸ್ ಜೋಸೆಫ್‌ಗೆ ತಿಳಿಸಿದ್ದ ಎನ್ನಲಾಗಿದೆ.

'ಪೋರ್ಚ್‌ಗಲ್' ಆಫರ್: ಶ್ರೀನಾಥ್ ತಿಳಿಸಿದಂತೆ 3 ತಿಂಗಳ ಕಳೆದರೂ ಕೂಡ ಜೆಕ್ ರಿಪಬ್ಲಿಕ್ ದೇಶದಿಂದ ಜೇಮ್ಸ್‌ಗೆ ಯಾವುದೇ ವೀಸಾ ಬರಲಿಲ್ಲ. ಈ ಹಿನ್ನೆಲೆಯಲ್ಲಿ ಶ್ರೀನಾಥ್‌ನನ್ನು ಜೇಮ್ಸ್ ಜೋಸೆಫ್ ಅವರು ಸಂಪರ್ಕಿಸಿದ ಸಂದರ್ಭ ಜೆಕ್ ರಿಪಬ್ಲಿಕ್ ದೇಶದಲ್ಲಿ ಉದ್ಯೋಗ ದೊರಕಿಸಲು ಸಾಧ್ಯವಾಗಿಲ್ಲ. ಆದರೆ 2022ರ ಮಾರ್ಚ್ ಅಂತ್ಯದೊಳಗೆ ಪೋರ್ಚ್‌ಗಲ್ ದೇಶದಲ್ಲಿ ಉದ್ಯೋಗ ಕೊಡಿಸುವುದಾಗಿ ಶ್ರೀನಾಥ್ ತಿಳಿಸಿದ್ದಲ್ಲದೇ, 2022ರ ಸೆಪ್ಟೆಂಬರ್ ಕೊನೆಯಲ್ಲಿ ವೀಸಾ ಬರಲಿದೆ. ಇಲ್ಲವಾದಲ್ಲಿ ಹಣ ಹಿಂದಿರುಗಿಸುವುದಾಗಿ ಆಶ್ವಾಸನೆ ನೀಡಿದ್ದ. ಆದರೆ ಸೆಪ್ಟೆಂಬರ್ ಕಳೆದರೂ ವೀಸಾ ಬಾರದ ಕಾರಣ ಶ್ರೀನಾಥ್ ನೀಡಿದ್ದ ಎಲ್ಲಾ ಭರವಸೆಗಳು ಹುಸಿಯಾಗಿದ್ದವು.

ಈ ಹಿನ್ನೆಲೆಯಲ್ಲಿ ಧರ್ಮಗುರುಗಳ ಮೂಲಕ ಶ್ರೀನಾಥ್ ಅವರ ಮನೆಗೆ ತೆರಳಿದ್ದ ಜೇಮ್ಸ್ ಜೋಸೆಫ್ ನಡೆದ ವಿಚಾರವನ್ನು ಶ್ರೀನಾಥ್‌ನ ಪತ್ನಿಗೆ ತಿಳಿಸಿದ್ದರು. ಆದರೆ ಅವರಿಂದ ಸಕಾರಾತ್ಮಕ ಉತ್ತರ ದೊರೆಯದೇ ಬಳಿಕ ಶ್ರೀನಾಥ್ ಜೊತೆ ಮನೆಗೆ ಬಂದಿದ್ದ ವಿನೋದ್ ಅವರನ್ನು ಸಂಪರ್ಕಿಸಿ ವಿಚಾರ ತಿಳಿಸಿದ್ದರೂ ಯಾವುದೇ ಪ್ರತಿಕ್ರಿಯೆ ಲಭ್ಯವಾಗಲಿಲ್ಲ.

ದೂರು ದಾಖಲು: ಈ ಎಲ್ಲಾ ವಿಚಾರಗಳಿಂದ ತಾನು ಮೋಸ ಹೋಗಿರುವುದಾಗಿ ಅರಿತ ಜೇಮ್ಸ್ ಜೋಸೆಫ್ 2022ರ ಅಕ್ಟೋಬರ್ 29ರಂದು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಂ.ಹೆಚ್.ಶ್ರೀನಾಥ್ ಮತ್ತು ವಿನೋದ್ ಅವರ ವಿರುದ್ಧ ಕೆಲಸ ಕೊಡಿಸುವುದಾಗಿ ವಂಚನೆ ಮಾಡಿರುವ ಕುರಿತು ದೂರು ದಾಖಲಿಸಿದ್ದರು. ಮೊ.ಸಂಖ್ಯೆ 137/2022ರ ಅಡಿ ದೂರು ದಾಖಲಿಸಿಕೊಂಡ ಮಡಿಕೇರಿ ಗ್ರಾಮಾಂತರ ಪೊಲೀಸರು ಆರೋಪಿಗಳ ವಿರುದ್ಧ 417, 420 ಐಪಿಸಿ ಸೆಕ್ಷನ್ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕೊಡಗು ಜಿಲ್ಲೆಯ ವಿವಿಧೆಡೆ ಭಾಗಶಃ ಚಂದ್ರಗ್ರಹಣ ವೀಕ್ಷಣೆ





ಮಡಿಕೇರಿ, ಕುಶಾಲನಗರ, ನ.8– ಜಿಲ್ಲೆಯ ವಿವಿಧೆಡೆ ನಾಗರಿಕರು ಖಗೋಳದ ಕೌತುಕವನ್ನು ವೀಕ್ಷಿಸಿ, ಆನಂದಿಸಿದರು.

ಖಗೋಳ ವಿದ್ಯಮಾನಗಳಲ್ಲಿ ಅಪರೂಪದ ಹಾಗೂ ಕೌತುಕದ ಚಂದ್ರಗ್ರಹಣ ಮಂಗಳವಾರ ಸಂಜೆ ಭಾಗಶಃ ಗೋಚರಿಸಿತು. ಜಿಲ್ಲೆಯ ವಿವಿಧ ಕಡೆಗಳಲ್ಲಿ ಸಂಜೆ ಅಂದಾಜು 5.55 ರಿಂದ 6.20 ರ ವರೆಗೆ ಭಾಗಶಃ ಚಂದ್ರಗ್ರಹಣ ಗೋಚರಿಸಿತು.

ಜಿಲ್ಲೆಯ ಕುಶಾಲನಗರದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ವತಿಯಿಂದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಬಳಿ ಚಂದ್ರಗ್ರಹಣ ವೀಕ್ಷಿಸಲಾಯಿತು. ಯಾವುದೇ ಗ್ರಹಣ ಸಂಭವಿಸಿದಾಗ ಅಧ್ಯಯನ, ಸಂಶೋಧನೆಗೆ ಗ್ರಹಣವನ್ನು ಪ್ರೇರಣೆಯಾಗಬೇಕೇ ವಿನಃ ಇಲ್ಲಸಲ್ಲದ ಮೌಢ್ಯ, ಅಂಧಾಚರಣೆಗೆ ನಾಂದಿಯಾಗಬಾರದು ಎಂದು ಹವ್ಯಾಸಿ ಖಗೋಳ ವೀಕ್ಷಕರಾದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಸಂಪನ್ಮೂಲ ವ್ಯಕ್ತಿ ಜಿ.ಶ್ರೀನಾಥ್ ತಿಳಿಸಿದರು.

ಖಗೋಳಾಸಕ್ತರು ಎತ್ತರದ ಬಯಲು ಪ್ರದೇಶ, ಮೈದಾನ ಮತ್ತು ಮನೆಗಳ ಮಹಡಿ ಮೇಲೆ ನಿಂತು ಚಂದ್ರಗ್ರಹಣ ವೀಕ್ಷಿಸಿ ಆನಂದಿಸಿದರು ಎಂದು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಕೊಡಗು ಜಿಲ್ಲಾ ಸಮಿತಿ ಅಧ್ಯಕ್ಷ ಟಿ.ಜಿ.ಪ್ರೇಮಕುಮಾರ್ ತಿಳಿಸಿದರು.

ಅಪರೂಪದ ಚಂದ್ರಗ್ರಹಣವನ್ನು ವಿದ್ಯಾರ್ಥಿಗಳು ಹಾಗೂ ನಾಗರಿಕರು ಆಸಕ್ತಿ ಹಾಗೂ ಕುತೂಹಲದಿಂದ ವೀಕ್ಷಿಸಿರುವುದು ಸಂತಸದಾಯಕವಾಗಿದೆ. ಗ್ರಹಣ ಸಂದರ್ಭದಲ್ಲಿ ಯಾವುದೇ ಮೌಢ್ಯಾಚರಣೆಗೆ ಒಳಗಾಗದೇ ಖಗೋಳದಲ್ಲಿ ನಡೆಯುವ ಅಪರೂಪದ ವಿದ್ಯಮಾನವನ್ನು ವೀಕ್ಷಿಸುವುದು ವಿಜ್ಞಾನದ ಕೌತುಕಗಳಲ್ಲಿ ಒಂದಾಗಿದೆ ಎಂದರು. ಜಿಲ್ಲೆಯ ಕೆಲವು ಕಡೆ ಮೋಡ ಮುಸುಕಿದ ವಾತಾವರಣವಿದ್ದ ಕಾರಣ ಚಂದ್ರಗ್ರಹಣ ವೀಕ್ಷಣೆ ಅಷ್ಟಾಗಿ ಗೋಚರಿಸಲಿಲ್ಲ.

ಜನರ ಕಣ್ಣೀರು ಒರೆಸುವವರು ಮುಖ್ಯಮಂತ್ರಿಯಾಗಬೇಕು

ವಿರಾಜಪೇಟೆ ತಾಲೂಕು ಜೆಡಿಎಸ್‌ನಿಂದ ಸಂಕೇತ್‌ಪೂವಯ್ಯಗೆ ಸನ್ಮಾನ



ವಿರಾಜಪೇಟೆ, ನ.8– ಜಾತ್ಯಾತೀತ ಜನತಾದಳ ರಾಜ್ಯ ವಕ್ತಾರರು ಮತ್ತು ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಮೇರಿಯಂಡ ಸಂಕೇತ್ ಪೂವಯ್ಯ ಅವರನ್ನು ಜೆಡಿಎಸ್ ತಾಲೂಕು ಘಟಕದ ವತಿಯಿಂದ ಅವರ ನಿವಾಸದಲ್ಲಿ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿದ ಸಂಕೇತ್ ಪೂವಯ್ಯ ಅವರು ನಂತರ ನಡೆದ ಸಭೆಯಲ್ಲಿ ಮಾತನಾಡಿ, ಎರಡು ರಾಷ್ಟ್ರೀಯ ಪಕ್ಷಗಳ ಮೇಲೆ ಮತದಾರರಿಗೆ ನಂಬಿಕೆಯೇ ಇಲ್ಲದಂತಾಗಿದೆ. ಇದರಿಂದ ಜನರು ಭ್ರಮ ನಿರಶನಗೊಂಡಿದ್ದಾರೆ. ಆದ್ದರಿಂದ ಕನ್ನಡ ನಾಡಿನಲ್ಲಿ ಜನರ ಕಣ್ಣೀರು ಒರೆಸುವಂತವರು ಮುಖ್ಯಮಂತ್ರಿ ಆಗಬೇಕಾಗಿದೆ. ಈ ಹಿಂದೆ ಸಮ್ಮಿಶ್ರ ಸರಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಅವರು, ಚುನಾವಣೆ ಸಂದರ್ಭ ನುಡಿದಂತೆ ಕಾರ್ಮಿಕರು ಹಾಗೂ ಕಟ್ಟಕಡೆಯ ಜನರಿಗೂ ತಲುಪುವಂತಹ ಯೋಜನೆಗಳನ್ನು ಜಾರಿಗೆ ತಂದಿದ್ದರು ಎಂದರು.

ಸಾರಾಯಿ ಮತ್ತು ಲಾಟರಿ ನಿಷೇಧ ಮಾಡಿದರಲ್ಲದೆ ರಾಜ್ಯದ ರೈತರ ಸಾಲ ಮನ್ನಾ ಮಾಡಿದ ಮಹಾನ್ ನಾಯಕ ಕುಮಾರಸ್ವಾಮಿ ಎಂದರಲ್ಲದೆ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಿಂದಿನಿಂದಲೂ ಪ್ರಾದೇಶಿಕ ಪಕ್ಷವನ್ನು ಉಳಿಸಿ ಬೆಳೆಸಿಕೊಂಡು ಬರುವಲ್ಲಿ ಯಶಸ್ವಿಯಾಗಿದ್ದಾರೆ. ಅವರು ಸಕ್ರಿಯ ಕಾರ್ಯಕರ್ತರನ್ನು ಬೆನ್ನುತಟ್ಟುವ ಮೂಲಕ ಬೆಳೆಸಿ ಪ್ರೋತ್ಸಾಹ ನೀಡಿದ್ದಾರೆ. ಆದ್ದರಿಂದ ಜೆಡಿಎಸ್ ಕಾರ್ಯಕರ್ತರು ಮುಂದಿನ ಚುನಾವಣೆಗೆ ಪಂಚಾಯಿತಿ ಮಟ್ಟದಿಂದಲು ಪಕ್ಷವನ್ನು ಬೆಳೆಸುವ ನಿಟ್ಟಿನಲ್ಲಿ ಚುನಾವಣೆಗೆ ಸಜ್ಜಾಗಬೇಕಾಗಿದೆ ಎಂದರು.

ಜೆಡಿಎಸ್ ಪಕ್ಷದ ತಾಲೂಕು ಅಧ್ಯಕ್ಷ ಪಿ.ಎ.ಮಂಜುನಾಥ್ ಸಭೆಯಲ್ಲಿ ಮಾತನಾಡಿ, ಕಾರ್ಯಕರ್ತರು ಪಕ್ಷದ ಏಳಿಗೆಗೆ ಬೂತ್ ಮಟ್ಟದಿಂದ ಕೆಲಸ ಮಾಡಬೇಕಾಗಿದೆ. ಈ ಸಂಬಂಧ ಕೆಲವೇ ದಿನಗಳಲ್ಲಿ ಪಕ್ಷದ ತಾಲೂಕು ಮಟ್ಟದ ಸಭೆ ಕರೆಯುವುದಾಗಿ ತಿಳಿಸಿದರು. ಜೆಡಿಎಸ್‌ನ ತಾಲೂಕು ಮುಖಂಡರಾದ ಆರ್.ಕೆ.ಸಕ್ಲೇನ್, ಅಶ್ರಫ್ ಅಲಿ, ಟಿ.ಆರ್.ಹರ್ಷ, ನೂರ್ ಅಹ್ಮದ್, ಅಪ್ಪಂಡೆರವಂಡ ಸನ್ನು ಕುಶಾಲಪ್ಪ, ಬಾಳೆಕುಟ್ಟಿರ ದಿನಿ, ಪಂದ್ಯಂಡ ರವಿ ಮಾದಪ್ಪ ಮತ್ತಿತರರು ಉಪಸ್ಥಿತರಿದ್ದರು.

ಇಂದು ಕರಡು ಮತದಾರರ ಪಟ್ಟಿ ಪ್ರಕಟ

ಮಡಿಕೇರಿ, ನ.8– ಭಾವಚಿತ್ರವಿರುವ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಕಾರ್ಯವನ್ನು ಚುನಾವಣಾ ಆಯೋಗದ ನಿರ್ದೇಶನದಂತೆ ಈಗಾಗಲೇ ಕೈಗೊಳ್ಳಲಾಗಿದ್ದು, ಈ ಸಂಬಂಧ ಕರಡು ಮತದಾರರ ಪಟ್ಟಿಯ ಪ್ರತಿಯನ್ನು ನ.9 ರಂದು ಪ್ರಕಟಿಸಲಾಗುತ್ತದೆ ಎಂದು ಡಿಸಿ ಡಾ.ಬಿ.ಸಿ.ಸತೀಶ ತಿಳಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಏಪ್ರಿಲ್, ಮೇ ತಿಂಗಳಲ್ಲಿ ನಡೆಯುವ ವಿಧಾನ ಸಭಾ ಚುನಾವಣೆ ಹಿನ್ನೆಲೆ ನ.9 ರಂದು ಬೆಳಗ್ಗೆ 10.15 ಗಂಟೆಗೆ ನಗರದ ಗಾಂಧಿ ಮೈದಾನದಿಂದ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದ್ದು, ಎಲ್ಲಾ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಪಾಲ್ಗೊಳ್ಳುವಂತೆ ಅವರು ಹೇಳಿದರು. ಜಾಥಾವು ಮಂಗೇರಿರ ಮುತ್ತಣ್ಣ ವೃತ್ತ, ಅಜ್ಜಮಾಡ ದೇವಯ್ಯ ವೃತ್ತದ ಮೂಲಕ ಜನರಲ್ ಕೆ.ಎಸ್.ತಿಮ್ಮಯ್ಯ ವೃತ್ತ ಮಾರ್ಗ ಗಾಂಧಿ ಮೈದಾನಕ್ಕೆ ಬರಲಿದೆ.

ಗ್ರಾಪಂ ಸದಸ್ಯ ನಿಧನ

ಗೋಣಿಕೊಪ್ಪ, ನ.8– ಪೊನ್ನಂಪೇಟೆ ತಾಲೂಕಿನ ನಿಟ್ಟೂರು ಗ್ರಾಪಂ ಸದಸ್ಯ, ತಟ್ಟೆಕೆರೆ ಹಾಡಿಯ ಜೇನು ಕುರುಬರ ಸಾಸು (49) ನಿಧನರಾದರು.



ಮಂಗಳವಾರ ಸಂಜೆ ತಟ್ಟೆಕೆರೆ ಹಾಡಿ ಸಮೀಪ ಅಂತ್ಯಕ್ರಿಯೆ ನೆರವೇರಿತು. ಮೂರು ತಿಂಗಳಿನಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಮೃತರಿಗೆ ಪತ್ನಿ ಹಾಗೂ ಇಬ್ಬರು ಪುತ್ರರಿದ್ದಾರೆ.

ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ವಾರ್ಡ್ ಸಂಖ್ಯೆ 1 ರಿಂದ ಚುನಾಯಿತರಾಗಿದ್ದರು. ವನವಾಸಿ ಕಲ್ಯಾಣ ಸಂಸ್ಥೆಯಲ್ಲಿ ಕಾರ್ಯಕರ್ತರಾಗಿ ದುಡಿದಿದ್ದರು. ನಿಟ್ಟೂರು ಗ್ರಾಮ ಸಿಬ್ಬಂದಿ ವರ್ಗ ಸಂತಾಪ ಸೂಚಿಸಿದೆ

ಕಾವೇರಿ ನಿಸರ್ಗಧಾಮಕ್ಕೆ ಪ್ರವೇಶ ನಿಷೇಧ

ಕುಶಾಲನಗರ, ನ.8– ಕೊಡಗು ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿರುವ ಕಾವೇರಿ ನಿಸರ್ಗಧಾಮದ ತೂಗು ಸೇತುವೆ ಶಿಥಿಲಾವಸ್ಥೆಯಲ್ಲಿದ್ದು, ತೂಗು ಸೇತುವೆ ದುರಸ್ತಿ ಕಾರ್ಯ ಕೈಗೊಳ್ಳಬೇಕಾಗಿರುವ ಹಿನ್ನೆಲೆಯಲ್ಲಿ ನ.9 ರಿಂದ ಪ್ರವಾಸಿಗರಿಗೆ ಪ್ರವೇಶ ನಿಷೇಧಿಸಲಾಗಿದೆ.



ಮಡಿಕೇರಿ ವಿಭಾಗದ ಉಪ ಅರಣ್ಯಾಧಿಕಾರಿ ಪೂವಯ್ಯ ಅವರ ನಿರ್ದೇಶನದಂತೆ ಮಂಗಳವಾರದಿಂದ ಮುಂದಿನ ಆದೇಶ ಬರುವವರೆಗೂ ಕಾವೇರಿ ನಿಸರ್ಗಧಾಮವನ್ನು ಬಂದ್ ಮಾಡಲಾಗುತ್ತದೆ. ತೂಗು ಸೇತುವೆಯ ದುರಸ್ತಿ ಕಾರ್ಯ ಪೂರ್ಣಗೊಂಡ ಬಳಿಕ ಎಂದಿನಂತೆ ಪ್ರವಾಸಿಗರಿಗೆ ಪ್ರವೇಶಾವಕಾಶ ಕಲ್ಪಿಸಲಾಗುತ್ತದೆ. ಗುಜರಾತ್ ಮೊರ್ಬಿಯಲ್ಲಿನ ತೂಗು ಸೇತುವೆ ದುರಂತದಿಂದ ಅನೇಕ ಜನರು ಪ್ರಾಣ ಕಳೆದುಕೊಂಡ ಹಿನ್ನೆಲೆಯಲ್ಲಿ ಇದೀಗ ಇಲಾಖೆ ಎಚ್ಚೆತ್ತುಗೊಂಡಿದ್ದು, ಮುಂಜಾಗ್ರತಾ ಕ್ರಮವಾಗಿ ದುರಸ್ತಿ ಕಾರ್ಯ ಕೈಗೆತ್ತಿಕೊಂಡಿದೆ. ಅತ್ತೂರು ಶಾಖಾ ವ್ಯಾಪ್ತಿಯ ಹಾರಂಗಿಯಲ್ಲಿ ನೂತನವಾಗಿ ಪ್ರಾರಂಭಿಸಿರುವ ಹಾರಂಗಿ ಸಸ್ಯೋದ್ಯಾನವನ ಹಾಗೂ ಸಾಕಾನೆ ಶಿಬಿರವು ಪ್ರವಾಸಿಗರಿಗೆ ತೆರೆದಿರುತ್ತದೆ ಎಂದು ಕುಶಾಲನಗರ ವಲಯ ಅರಣ್ಯಾಧಿಕಾರಿ ಶಿವರಾಮ್ ತಿಳಿಸಿದ್ದಾರೆ.

ಇಂದಿನಿಂದ ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್ ವಿತರಣೆ

ಮಡಿಕೇರಿ, ನ.8– ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನಾರೋಗ್ಯ ಯೋಜನಾ ಆರೋಗ್ಯ ಕರ್ನಾಟಕ ಕಾರ್ಡ್ ಸಂಬಂಧ ಜಿಲ್ಲೆಯ ವಿವಿಧ ಗ್ರಾಪಂ ವ್ಯಾಪ್ತಿಯ ಗ್ರಾಮ ಒನ್ ಕೇಂದ್ರಗಳಲ್ಲಿ ನ.9 ರಿಂದ 15 ರವರೆಗೆ ಕಾರ್ಡ್‌ಗಳನ್ನು ವಿತರಿಸಲಾಗುತ್ತಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಆರ್.ವೆಂಕಟೇಶ್ ತಿಳಿಸಿದ್ದಾರೆ.

ಮಾಹಿತಿಗೆ ಹತ್ತಿರದ ಗ್ರಾಪಂ ವ್ಯಾಪ್ತಿಯ ಗ್ರಾಮ ಒನ್ ಕೇಂದ್ರ ಅಥವಾ ಆರೋಗ್ಯ ಕೇಂದ್ರ ವನ್ನು ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ಹಣ, ಮೊಬೈಲ್ ಇದ್ದ ಪರ್ಸ್ ಹಿಂದಿರುಗಿಸಿದ ವ್ಯಕ್ತಿ



ಸುಂಟಿಕೊಪ್ಪ, ನ.8– ರಸ್ತೆಯಲ್ಲಿ ಬಿದ್ದಿದ್ದ ನಗದು ಹಾಗೂ ಮೊಬೈಲ್ ಇದ್ದ ಪರ್ಸ್ ಅನ್ನು ವಾರಸುದಾರರಿಗೆ ಹಸ್ತಾಂತರಿಸುವ ಮೂಲಕ ವ್ಯಕ್ತಿಯೊಬ್ಬರು ಪ್ರಾಮಾಣಿಕತೆ ಮೆರೆದಿದ್ದಾರೆ.

ಸುಂಟಿಕೊಪ್ಪ ಗದ್ದೆಹಳ್ಳದ ಗಿರಿಯಪ್ಪ ಮನೆ ನಿವಾಸಿ ಫೈರೋಜ್ ಖಾನ್ ಸುಂಟಿಕೊಪ್ಪ ಪಟ್ಟಣಕ್ಕೆ ಕಾರ್ಯನಿಮಿತ್ತ ಆಗಮಿಸಿದ್ದರು. ಈ ವೇಳೆ ಕನ್ನಡ ವೃತ್ತದ ಬಳಿ ನಗದು ಹಾಗೂ ಮೊಬೈಲ್ ಇರುವ ಪರ್ಸ್ ದೊರೆತ್ತಿದ್ದು, ಅದನ್ನು ಪೊಲೀಸ್ ಠಾಣೆಗೆ ನೀಡುವ ಮೂಲಕ ವಾರಸುದಾರರಿಗೆ ಹಸ್ತಾಂತರಿಸುವಂತೆ ಮನವಿ ಮಾಡಿದ್ದರು. ಇದೇ ಸಂದರ್ಭ ಪರ್ಸ್‌ನಲ್ಲಿದ್ದ ಮೊಬೈಲ್‌ಗೆ ಕರೆಯೊಂದು ಬಂದಿದ್ದು, ಪೊಲೀಸರು ಕರೆ ಮಾಡಿದ ವ್ಯಕ್ತಿಯನ್ನು ವಿಚಾರಿಸಿದಾಗ ಮಾದಾಪುರ ಸಮೀಪದ ಜಾರ್‌ಕೊಲ್ಲಿ ನಿವಾಸಿ ಕಾರ್ಮಿಕ ಮಹಿಳೆ ಸಿಂಧು ಪ್ರಸನ್ನ ಎಂಬುವರಿಗೆ ಸೇರಿದ ಹಣ ಹಾಗೂ ಮೊಬೈಲ್ ಎಂದು ಗೊತ್ತಾಗಿದೆ. ತಕ್ಷಣ ಅವರನ್ನು ಠಾಣೆಗೆ ಕರೆಯಿಸಿ ವಿಚಾರಿಸಿದಾಗ ಕೇರಳದ ಎರ್ನಾಕುಲಂನಲ್ಲಿ ಅನಾರೋಗ್ಯದಲ್ಲಿರುವ ತಂಗಿಯನ್ನು ಕಾಣಲು ತೆರಳುವ ಸಂದರ್ಭ 10 ಸಾವಿರ ನಗದು ಹಾಗೂ ಮೊಬೈಲ್ ಕಳೆದುಕೊಂಡಿದ್ದಾಗಿ ಮಾಹಿತಿ ನೀಡಿದ್ದಾರೆ. ಬಳಿಕ ಪೊಲೀಸರು ಫೈರೋಜ್ ಖಾನ್ ಅವರ ಮೂಲಕ ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದ ಸಿಂಧು ಅವರಿಗೆ ಹಣ ಹಾಗೂ ಮೊಬೈಲ್ ಹಸ್ತಾಂತರಿಸಿದರು. ಈ ಸಂದರ್ಭ ಠಾಣಾಧಿಕಾರಿ ಮಂಜು, ಎಎಸ್ಐ ಜಯಕುಮಾರ್ ಹಾಜರಿದ್ದರು.

ಶ್ರೀ ಪಾರ್ವತಾಂಭ ಜಾತ್ರಾ ಮಹೋತ್ಸವ



ಗುಂಡ್ಲುಪೇಟೆ, ನ.8– ತಾಲೂಕಿನ ಹೆಗ್ಗಡಹಳ್ಳಿ ಗ್ರಾಮದಲ್ಲಿ ಅಲ್ಲಳ್ಳಿ ಶ್ರೀ ಪಾರ್ವತಾಂಭಾ ಜಾತ್ರಾ ಮಹೋತ್ಸವ ಶ್ರದ್ಧಾ ಭಕ್ತಿಗಳಿಂದ ನೆರವೇರಿತು. ಮಂಗಳ ವಾದ್ಯಗಳು, ನಂದೀಧ್ವಜ, ಸತ್ತಿಗೆ ಸುರಾಪಾನಿ ಮುಂತಾದ ಜನಪದ ಕಲಾತಂಡಗಳೊಂದಿಗೆ ಗ್ರಾಮದ ಹೊರವಲಯದ ಶ್ರೀ ಪಾರ್ವತಾಂಭಾ ದೇವಾಲಯದಿಂದ ಹೊರಟ ರಥವನ್ನುಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಭಕ್ತರು ಬಾಯಿ ಬೀಗ ಹಾಕಿಸಿಕೊಂಡು ಹರಕೆ ತೀರಿಸಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ಹಾಗೂ ಅಕ್ಕಪಕ್ಕದ ಗ್ರಾಮಗಳ ಭಕ್ತರು ಇದ್ದರು.

ಹುಲಿ ಸಂರಕ್ಷಿತ ಪ್ರದೇಶಕ್ಕೆ 50ರ ಸಂಭ್ರಮ

ವಿದ್ಯಾರ್ಥಿಗಳಿಗೆ ಉಚಿತ ಸಫಾರಿ, ರಾಷ್ಟ್ರೀಯ ಪ್ರಾಧಿಕಾರದ ಸಭೆಗೆ ಸಿದ್ಧತೆ

ಗುಂಡ್ಲುಪೇಟೆ, ನ.8– ರಾಷ್ಟ್ರೀಯ ಉದ್ಯಾನವನವಾದ ಪ್ರಖ್ಯಾತ ಬಂಡೀಪುರವನ್ನು ಹುಲಿ ಸಂರಕ್ಷಿತ ಪ್ರದೇಶವನ್ನಾಗಿ ಘೋಷಿಸಿ 50 ವರ್ಷಗಳಾಗುತ್ತಿರುವ ಹಿನ್ನೆಲೆಯಲ್ಲಿ ಅರಣ್ಯ ಸಂರಕ್ಷಣೆಗೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂದು ಹುಲಿ ಯೋಜನೆಯ ನಿರ್ದೇಶಕ ಡಾ.ಸಿ.ರಮೇಶ್ ಕುಮಾರ್ ಹೇಳಿದರು.



ತಾಲೂಕಿನ ಬಂಡೀಪುರದಲ್ಲಿ ಆಯೋಜಿಸಿದ್ದ ಮಾಧ್ಯಮ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸುತ್ತಮುತ್ತಲಿನ ಜನರ ಸಹಕಾರದಿಂದ ಅರಣ್ಯ ಸಂರಕ್ಷಣೆ ಮಾಡಬೇಕಾಗಿದ್ದು ಬಂಡೀಪುರ ಸಂರಕ್ಷಣೆ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಅರಣ್ಯ ಇಲಾಖೆ ಸೋಮವಾರದಿಂದ ಶುಕ್ರವಾರದವರೆಗೆ ಪ್ರತಿ ದಿನವೂ ವಿದ್ಯಾರ್ಥಿಗಳಿಗೆ ಉಚಿತ ಸಫಾರಿ ಆಯೋಜಿಸಲು ಎರಡು ಬಸ್ಸುಗಳನ್ನು ಖರೀದಿಸಲಾಗುತ್ತಿದೆ ಎಂದರು. ಬಂಡೀಪುರದಲ್ಲಿ ಶೀಘ್ರವೇ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಸಭೆಯನ್ನು ನಡೆಸಲು ಸಿದ್ಧತೆ ಮಾಡಲಾಗುತ್ತಿದ್ದು ಕೇಂದ್ರ ಅರಣ್ಯ ಸಚಿವರೂ ಆಗಮಿಸಲಿದ್ದಾರೆ. ಇದಕ್ಕಾಗಿ ಎಲ್ಲಾ ರೀತಿಯ ತಯಾತಿ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಬಂಡೀಪುರದಲ್ಲಿ ಶೇ.30 ರಷ್ಟು ಸಿಬ್ಬಂದಿಯ ಕೊರತೆಯಿದ್ದರೂ ಹಗಲು ಮತ್ತು ಇರುಳಿನಲ್ಲಿ ಕಾರ್ಯನಿರ್ವಹಿಸಿ ಅರಣ್ಯ ಸಂರಕ್ಷಣೆ ಮಾಡುತ್ತಿರುವ ಪರಿಣಾಮ 50 ವರ್ಷಗಳ ಹಿಂದೆ ಕೇವಲ 12 ರಷ್ಟಿದ್ದ ಹುಲಿಗಳ ಸಂಖ್ಯೆ ಈಗ 146 ಕ್ಕೇರಿದೆ. ಈ ಬಾರಿ ಪ್ರವಾಸೋದ್ಯಮ, ಬೆಂಕಿನಿರ್ವಹಣೆ ಅರಣ್ಯ ಸಂರಕ್ಷಣೆ, ಮಾನವ ಪ್ರಾಣ ಸಂಘರ್ಷ ಇಳಿಕೆ ಮುಂತಾದ ಅಂಶಗಳ ಆಧಾರದ ಮೇಲೆ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ), ಎಂವೈಎಫ್, ಡಬ್ಲ್ಯೂಐ ಮುಂತಾದ ಸಂಸ್ಥೆಗಳು ನಡೆಸಿದ ಸಮೀಕ್ಷೆಯಲ್ಲಿ ಕಳೆದ ಬಾರಿ ಶೇ.87 ಇದ್ದ ಸ್ಕೋರ್ ಈ ಬಾರಿ ಶೇ 97.5ಕ್ಕೇರಿ ರಾಜ್ಯದ ಎಲ್ಲಾ ಹುಲಿ ಸಂರಕ್ಷಿತ ಪ್ರದೇಶಗಳಿಗಿಂತ ಮೊದಲ ಸ್ಥಾನದಲ್ಲಿದ್ದು ದೇಶದಲ್ಲಿ ಎರಡು ಹಾಗೂ ಮೂರನೇ ರ್‍ಯಾಂಕಿನಲ್ಲಿದೆ. ಬಂಡೀಪುರದ ಇತಿಹಾಸದಲ್ಲಿಯೇ ಇದೊಂದು ಅತ್ಯುತ್ತಮ ಸಾಧನೆಯಾಗಿದೆ ಎಂದು ಹೇಳಿದರು.

ಬಂಡೀಪುರದಲ್ಲಿ ಎರಡು ರಾಷ್ಟ್ರೀಯ ಹೆದ್ದಾರಿಗಳು ಹಾದುಹೋಗಿದ್ದು ಶನಿವಾರ ಮತ್ತು ಭಾನುವಾರ ಹಾಗೂ ರಜಾ ದಿನಗಳಲ್ಲಿ ಪ್ರವಾಸಿ ವಾಹನಗಳ ಸಂಖ್ಯೆ ಹೆಚ್ಚಾಗುವುದರಿಂದ ಡ್ರೋಣ್ ಕ್ಯಾಮರಾ ಕಣ್ಗಾವಲು ನಡೆಸಲಾಗುವುದು. ಮದ್ದೂರು. ಮೂಲೆಹೊಳೆ, ಕೆಕ್ಕನಹಳ್ಳ, ಮೇಲುಕಾಮನಹಳ್ಳಿ ಚೆಕ್ ಪೋಸ್ಟ್‌ಗಳಲ್ಲಿ ಪ್ರವಾಸಿಗರಿಗೆ ರೆಸ್ಟ್ ರೂಂ ಹಾಗೂ ಕಾಡಿನ ಹೆದ್ದಾರಿಗಳಲ್ಲಿ ವಾಹನಗಳ ಸಂಚಾರ ಅನಗತ್ಯ ವಿಳಂಬ ತಪ್ಪಿಸಲು ಪಾಸ್ ವಿತರಿಸುವ ವ್ಯವಸ್ಥೆ ಮಾಡಲಾಗುವುದು ಎಂದು ವಿವರ ನೀಡಿದರು.

ಈ ಸಂದರ್ಭದಲ್ಲಿ ಎಸಿಎಫ್‌ಗಳಾದ ನವೀನ್, ಕೆ.ಪರಮೇಶ್, ರವೀಂದ್ರ, ಆರ್ ಎಫ್ಓ ಗಳಾದ ಶಶಿಧರ, ಮಂಜುನಾಥ್, ಶ್ರೀನಿವಾಸನಾಯ್ಕ, ಪುಟ್ಟರಾಜು, ಮಲ್ಲೇಶ್ ಮತ್ತು ಸಿಬ್ಬಂದಿಗಳು ಇದ್ದರು.

ಬಿಳಿಗಿರಿರಂಗನಬೆಟ್ಟ: 37.74 ಲಕ್ಷ ರೂ. ಸಂಗ್ರಹ

ಯಳಂದೂರು, ನ.8– ತಾಲೂಕಿನ ಬಿಳಿಗಿರಿರಂಗನಬೆಟ್ಟದಲ್ಲಿರುವ ಪುರಾಣ ಪ್ರಸಿದ್ಧ ಬಿಳಿಗಿರಿರಂಗನಾಥಸ್ವಾಮಿ ದೇಗುಲದ ಹುಂಡಿ ಹಣದ ಎಣಿಕೆ ಕಾರ್ಯ ಮಂಗಳವಾರ ನಡೆದಿದ್ದು, ಒಟ್ಟು 37.74,562 ರೂ. ಸಂಗ್ರಹವಾಗಿದೆ.

ಜುಲೈ ತಿಂಗಳಿಂದ ಇದುವರೆಗೆ ಸಂಗ್ರಹಗೊಂಡಿರುವ ಮೊತ್ತ ಇದಾಗಿದೆ. ಅಲಮೇಲು ರಂಗನಾಯಕಿ ಅಮ್ಮನವರ ದೇಗುಲದ ಆವರಣದಲ್ಲಿ ಮಂಗಳವಾರ ರಾತ್ರಿ 7ರ ತನಕವೂ ಹುಂಡಿ ಹಣವನ್ನು ಎಣಿಕೆ ಮಾಡಲಾಗಿದೆ. ಇದರಲ್ಲಿ ಕಂದಾಯ ಇಲಾಖೆ, ದೇಗುಲ ಹಾಗೂ ಬ್ಯಾಂಕಿನ ಸಿಬ್ಬಂದಿ ಪಾಲ್ಗೊಂಡಿದ್ದರು.

ಹುಂಡಿಯಲ್ಲಿ ನೋಟು, ನಾಣ್ಯವೂ ಸೇರಿದೆ. ಇದರೊಂದಿಗೆ 8 ಅಮೆರಿಕನ್ ಡಾಲರ್ ಕೂಡ ಲಭಿಸಿದೆ ಎಂದು ದೇಗುಲದ ಕಾರ್ಯನಿರ್ವಾಹಕ ಅಧಿಕಾರಿ ಮೋಹನ್ ಕುಮಾರ್ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಆರ್.ಐ.ಯದುಗಿರಿ, ಗ್ರಾಮ ಸೇವಕ ಚಂಗಚಹಳ್ಳಿ, ಮಹದೇವಸ್ವಾಮಿ, ಮುಖ್ಯಪೇದೆ ಮುರುಳಿಧರ್ ಸೇರಿದಂತೆ ದೇಗುಲದ ಸಿಬ್ಬಂದಿಗಳು ಹಾಜರಿದ್ದರು

ಸ್ಫೋಟಕ ಅಕ್ರಮ ಸಂಗ್ರಹ: ಕ್ವಾರಿ ಸಿಬ್ಬಂದಿ ಬಂಧನ

ಚಾಮರಾಜನಗರ, ನ.8– ತಾಲೂಕಿನ ಹೆಗ್ಗೋತಾರ ಗ್ರಾಮದ ಬಿಳಿ ಕಲ್ಲು ಕ್ವಾರಿಯೊಂದರಲ್ಲಿ ಅಕ್ರಮವಾಗಿ ಸ್ಫೋಟಕ ಸಂಗ್ರಹಿಸಿದ್ದ ಆರೋಪದಲ್ಲಿ ಕ್ವಾರಿ ಸಿಬ್ಬಂದಿಯೊಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಕ್ವಾರಿಯಿಂದ 42 ಜಿಲೆಟಿನ್ ಕಡ್ಡಿ, 25 ಜೆಲ್ ಅನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಕಿಲಗೆರೆಯ ಚಂದ್ರಶೇಖರ್ ಎಂಬುವವರಿಗೆ ಸೇರಿದ ಕ್ವಾರಿ ಇದಾಗಿದ್ದು, ಖಚಿತ ಮಾಹಿತಿ ಮೇರೆಗೆ ಸೋಮವಾರ ರಾತ್ರಿ ದಾಳಿ ನಡೆಸಲಾಗಿದೆ. ಕ್ವಾರಿ ಸಿಬ್ಬಂದಿ ಪ್ರಣವ್ ಎಂಬುವರನ್ನು ಬಂಧಿಸಲಾಗಿದೆ. ಸ್ಫೋಟಕ ನಿಯಂತ್ರಣ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಚಿಕ್ಕರಾಜಶೆಟ್ಟಿ ತಿಳಿಸಿದ್ದಾರೆ. ಅಕ್ರಮ ಸ್ಫೋಟಕಗಳ ಸಂಗ್ರಹಕ್ಕೆ ಸಂಬಂಧಿಸಿದಂತೆ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಇನ್‌ಸ್ಪೆಕ್ಟರ್ ಚಿಕ್ಕರಾಜಶೆಟ್ಟಿ, ಸಿಬ್ಬಂದಿದ ಮಲ್ಲಿಕಾರ್ಜುನ, ನಟರಾಜು ಕಾರ್ಯಾಚರಣೆಯಲ್ಲಿದ್ದರು.

ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದ ಮೂರು ಹಸುಗಳ ಸಾವು

ಚಾಮರಾಜನಗರ, ನ.8– ತಾಲೂಕಿನ ಚಂದಕವಾಡಿ ಹೋಬಳಿಯ ದೇವರಾಜಪುರ ಸಮೀಪ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ಮೂರು ಹಸುಗಳು ಮೃತಪಟ್ಟಿವೆ.

ಮೃತ ಹಸುಗಳು ಅರಳೀಪುರ ಗ್ರಾಮದ ಮಾಯಮ್ಮ ಹಾಗೂ ಚಿಕ್ಕಣ್ಣ ಎಂಬುವವರಿಗೆ ಸೇರಿವೆ. ಮಲ್ಲೇಶ್ ಎಂಬುವರ ಜಮೀನಿನಲ್ಲಿ ವಿದ್ಯುತ್ ತಂತಿ ತುಂಡಾಗಿ ಬಿದ್ದಿತ್ತು ಮಂಗಳವಾರ ಮಧ್ಯಾಹ್ನ ಹಸುಗಳು ಮೇಯುವುದಕ್ಕಾಗಿ ಹೋಗುತ್ತಿದ್ದಾಗ ಬಿದ್ದಿದ್ದ ತಂತಿಯನ್ನು ತುಳಿದಿವೆ. ವಿದ್ಯುತ್ ಆಘಾತದಿಂದ ಅವು ಮೃತಪಟ್ಟಿವೆ. ತಂತಿ ತುಂಡಾಗಿ ಬಿದ್ದಿರುವುದನ್ನು ಗಮನಿಸಿದ ಚಿಕ್ಕಣ್ಣ ಅವರು ಗ್ರಾಮಸ್ಥರಿಗೆ ತಿಳಿಸಿದರು. ಅವರು ಸೆಸ್ಕ್ ಅಧಿಕಾರಿಗಳಿಗೆ ವಿಷಯ ಮುಟ್ಟಿಸಿದರು. ಸ್ಥಳಕ್ಕೆ ಭೇಟಿ ನೀಡಿದ ಸೆಸ್ಕ್ ಕಾರ್ಯಪಾಲಕ ಎಂಜಿನಿಯರ್ ಶಶಿಧರ್ ಹಾಗೂ ಕಿರಿಯ ಎಂಜಿನಿಯರ್ ಮರಿಸ್ವಾಮಿ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಪಶುವೈದ್ಯರು ನೀಡುವ ವರದಿಯ ಆಧಾರದಲ್ಲಿ ಹಸುಗಳ ಮಾಲೀಕರಿಗೆ ಪರಿಹಾರ ನೀಡುವ ಭರವಸೆ ನೀಡಿದರು.

ಕೇರಳ ಲಾಟರಿ ಮಾರುತ್ತಿದ್ದವನ ಬಂಧನ

ಚಾಮರಾಜನಗರ, ನ.8– ಕೇರಳ ಲಾಟರಿಯನ್ನು ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಸಿಇಹೆಚ್ ಅಪರಾಧ ವಿಭಾಗದ ಪೊಲೀಸರು ನಗರದಲ್ಲಿ ಬಂಧಿಸಿದ್ದಾರೆ.

ನಗರದ ಗಾಳಿಪುರದ ಬೀಡಿ ಕಾಲೊನಿಯ ಅಬ್ದುಲ್ ರಹೀಮ್ (60) ಬಂಧಿತ. ಅಬ್ದುಲ್ ಅವರು ಗಾಳಿಪುರ ರಸ್ತೆಯಲ್ಲಿರುವ ಅನ್ವರ್ ಪಾಷಾ ಕಲ್ಯಾಣ ಮಂಟಪದ ಬಳಿ ಸೋಮವಾರ ಅಕ್ರಮವಾಗಿ ಕೇರಳ ಲಾಟರಿಗಳನ್ನು ಮಾರಾಟ ಮಾಡುತ್ತಿದ್ದರು. ಮಾಹಿತಿ ಆಧರಿಸಿ ಸಿಇಎನ್ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಯಿಂದ 6 ಲಾಟರಿ ಹಾಗೂ 2,760 ರೂ.ಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಠಾಣೆಯ ಸಬ್ ಇನ್‌ಸ್ಪೆಕ್ಟರ್ ಮಾದೇಶ್, ಎಎಸ್ಐ ಪ್ರಕಾಶ್, ಹೆಡ್ ಕಾನ್‌ಸ್ಟೆಬಲ್‌ಗಳಾದ ಮಹದೇವಸ್ವಾಮಿ, ರಮೇಶ್, ಮಹೇಶ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಚಾ.ನಗರ ಜಿಲ್ಲೆ ಜಾನಪದ ಕಾಶಿ

ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ ಪದಗ್ರಹಣ ಕಾರ್ಯಕ್ರಮ



ಚಾಮರಾಜನಗರ, ನ.8– ಜಾನಪದ ಎಂದರೆ ಕುಣಿಯೋದು, ಹಾಡುವುದು ಅಲ್ಲ. ಅದೊಂದು ಸಂಸ್ಕೃತಿ ಪರಂಪರೆಯಾಗಿದೆ. ಅವರ ಜೀವನ ಕಲೆಯನ್ನು ಅಭಿವ್ಯಕ್ತಿಗೊಳಿಸಲು ಮೊದಲ ಆದ್ಯತೆ ನೀಡಲಾಗಿದೆ ಎಂದು ಕನ್ನಡ ಜಾನಪದ ಪರಿಷತ್ ರಾಜ್ಯಾಧ್ಯಕ್ಷ ಡಾ.ಜಾನಪದ ಬಾಲಾಜಿ ಹೇಳಿದರು

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ತಂಬೂರಿ ಬಾರಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಜಾನಪದ ಕೃಷಿ ಮೂಲಕ ಹುಟ್ಟಿದೆ. ಜಾನಪದ ಕಲೆಗಳ ತವರಾಗಿರುವ ಚಾಮರಾಜನಗರ ಜಾನಪದಗಳ ಕಾಶಿಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಮಾತನಾಡಿ, ಒಂದು ಬಾರಿ ಜನಪ್ರತಿನಿಧಿಯಾದರೆ ಸರ್ಕಾರ ಅವರಿಗೆ ಎಲ್ಲ ಸೌಲಭ್ಯಗಳನ್ನು ಜೀವಿತ ಅವಧಿವರೆಗೂ ಕಲ್ಪಿಸುತ್ತದೆ ಅದೇ ಮಾದರಿಯಲ್ಲಿ ಜಾನಪದ ಜೀವನದ ಮೌಲ್ಯಗಳನ್ನು ಎತ್ತಿ ಸಾರುವ ಕಲಾವಿದರಿಗೆ ಮಾಸಾಶನ ಕೊಡಬೇಕು ಎಂದು ಒತ್ತಾಯಿಸಿದರು.

ಬೆಂಗಳೂರಿನ ಜಾನಪದ ವಿಶ್ವವಿದ್ಯಾನಿಲಯದ ಒಂದು ಭಾಗ ಜಿಲ್ಲೆಯಲ್ಲಿ ಆಗಬೇಕಿದೆ. ಜಿಲ್ಲೆಯಲ್ಲಿ ಶ್ರೀಮಲೇಮಹದೇಶ್ವರ, ಮಂಟೇಸ್ವಾಮಿ, ಬಿಳಿಗಿರಿರಂಗಸ್ವಾಮಿ, ಸಿದ್ದಪ್ಪಾಜಿ ಮಹಾತ್ಮರು ನೆಲೆಸಿರುವ ಜಿಲ್ಲೆ ಇದಾಗಿದೆ ಎಂದರು. ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯ ಬ್ರಹ್ಮಕುಮಾರಿ ದಾನೇಶ್ವರಿ ದಿವ್ಯ ಸಾನ್ನಿಧ್ಯವಹಿಸಿ ಮಾತನಾಡಿ, ಜಾನಪದ ಮೌಲ್ಯಗಳನ್ನು ಪ್ರತಿಪಾದಿಸುತ್ತದೆ. ಜಾನಪದದ ಉದ್ದೇಶ ಮಾನವೀಯ ಮೌಲ್ಯ ಕಲಿಸುವುದು. ದೇಶಿಯ ಗ್ರಾಮೀಣ ಸೊಗಡಗಳು ಮರೆಯಾಗುತ್ತಿದೆ. ಅದನ್ನು ಉಳಿಸುವ ಜವಾಬ್ದಾರಿ ಎಲ್ಲರದು ಆಗಿದೆ ಎಂದರು.

ಪದವಿ ಸ್ವೀಕಾರ: ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಜ.ಸುರೇಶ್ ನಾಗ್ ಹರದ್ನಳ್ಳಿ, ಪ್ರಧಾನ ಕಾರ್ಯದರ್ಶಿಯಾಗಿ ರಂಗನಾಥ್, ಖಜಾಂಚಿಯಾಗಿ ಪ್ರಕಾಶ್, ಕಾರ್ಯಾಧ್ಯಕ್ಷರಾಗಿ ಮುಡಿಗುಂಡಮೂರ್ತಿ, ಜಿಲ್ಲಾ ಸಂಚಾಲಕರಾಗಿ ಡಾ ಜಯಣ್ಣ ಬಿ.ಆರ್., ಜಂಟಿ ಕಾರ್ಯದರ್ಶಿಯಾಗಿ ಉಮ್ಮತ್ತೂರುಚಂದ್ರು, ಪತ್ರಿಕಾ ಕಾರ್ಯದರ್ಶಿಯಾಗಿ ಸಿ.ಲಕ್ಷ್ಮಣ್, ಸಂಘಟನಾ ಕಾರ್ಯದರ್ಶಿಯಾಗಿ ಲೋಕೇಶ್, ಸದಸ್ಯರಾಗಿ ಮೇಘಶ್ರೀ, ಶಿವಮಲ್ಲೇಗೌಡ, ಹರಿಪ್ರಸಾದ್, ದೊಡ್ಡಗವಿ ಬಸಪ್ಪ ಬೆಟ್ಟದ ಬಸವರಾಜು ಹಾಗೂ ಚಾಮರಾಜನಗರ ತಾಲೂಕು ಅಧ್ಯಕ್ಷರಾಗಿ ಜಯರಾಜು, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷರಾಗಿ ಉಮೇಶ್ ಕೊಟಗೆರೆ, ಯಳಂದೂರು ತಾಲೂಕು ಅಧ್ಯಕ್ಷರಾಗಿ ಸುರೇಶ್, ಕೊಳ್ಳೇಗಾಲ ತಾಲೂಕು ಅಧ್ಯಕ್ಷರಾಗಿ ರಾಮದಾಸ್ ಪಾಳ್ಯ, ಹನೂರು ತಾಲೂಕು ಅಧ್ಯಕ್ಷರಾಗಿ ಸಿ.ಪಿ.ಕೃಷ್ಣಕುಮಾರ್ ಅವರು ಪದವಿ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಜಾನಪದ ಪರಿಷದ್ ವಿಭಾಗೀಯ ಸಂಚಾಲಕಿ ಕಾವೇರಿ ಪ್ರಕಾಶ್, ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ್ ಋಗ್ವೇದಿ, ಜಿ.ಪಂ. ಲೆಕ್ಕಾಧಿಕಾರಿ ಎಚ್.ಎಸ್.ಗಂಗಾಧರ್, ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ಡಾ.ಎಸ್.ಪಿ. ಬಾಲಸುಬ್ರಹ್ಮಣ್ಯಂ ಗಾನ ಗಂಧರ್ವ ಕಲಾವೇದಿಕೆ ಗೌರವಾಧ್ಯಕ್ಷ ಸುರೇಶ್‌ಗೌಡ, ಕರ್ನಾಟಕ ರಕ್ಷಣಾ ಸೇನೆ ಅಧ್ಯಕ್ಷ ಮಿಂಚುನಾಗೇಂದ್ರ ಇತರರು ಹಾಜರಿದ್ದರು.

ಇಂದು ಆರೋಗ್ಯ ಕಾರ್ಡುಗಳ ಸೌಲಭ್ಯಕ್ಕಾಗಿ ಮೆಗಾ ನೋಂದಣಿ

ಚಾಮರಾಜನಗರ, ನ.8– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆರೋಗ್ಯ ಭಾರತ್ ಹೆಲ್ತ್ ಅಕೌಂಟ್ (ಅಭಾ) ಮತ್ತು ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ (ಪಿ.ಎಂ.ಜೆ ಎವೈ) ಕಾರ್ಡ್ ನೋಂದಣಿ ಮೆಗಾ ಆಂದೋಲನವನ್ನು ಜಿಲ್ಲಾದ್ಯಂತ ನವೆಂಬರ್ 9 ರಂದು ಬೆಳಗ್ಗೆ 6 ರಿಂದ ರಾತ್ರಿ 10 ಗಂಟೆ ವರೆಗೆ ಹಮ್ಮಿಕೊಳ್ಳಲಾಗಿದೆ. ಈ ಆರೋಗ್ಯ ಕಾರ್ಡ್‌ಗಳಿಂದ ಬಿಪಿಎಲ್ ಕಾರ್ಡ್‌ದಾರರಿಗೆ 5 ಲಕ್ಷದ ವರೆಗೆ ಚಿಕಿತ್ಸ ವೆಚ್ಚ ಭರಿಸಲಾಗುತ್ತದೆ. ಎಪಿಎಲ್ ಕಾರ್ಡ್‌ದಾರರಿಗೆ 1.5 ಲಕ್ಷದವರೆಗೆ ಚಿಕಿತ್ಸ ವೆಚ್ಚ ಭರಿಸಲಾಗುತ್ತದೆ. ಜಿಲ್ಲೆಯ ಜನತೆ ಆರೋಗ್ಯ ಸೌಲಭ್ಯಕ್ಕಾಗಿ ನೀಡಲಾಗುತ್ತಿರುವ ಅಭಾ ಮತ್ತು ಪಿ.ಎಂ.ಜೆ. ಎವೈ ಕಾರ್ಡ್‌ಗಳಿಗಾಗಿ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಅಥವಾ ಗ್ರಾಮ ಒನ್ ಕೇಂದ್ರಗಳಲ್ಲಿ ನೋಂದಣಿ ಮಾಡಿಸುವಂತೆ ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಜಾಗೃತಿಗಾಗಿ ಸೈಕಲ್ ಜಾಥಾ

ಚಾಮರಾಜನಗರ, ನ.8– ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ–2023ರ ಸಂಬಂಧ ಸಾರ್ವಜನಿಕರಿಗೆ ಹೆಚ್ಚಿನ ಜಾಗೃತಿ ಮೂಡಿಸಲು ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ನ.9ರಂದು ಬೆಳಿಗ್ಗೆ 8 ಗಂಟೆಗೆ ನಗರದ ಪ್ರವಾಸಿ ಮಂದಿರದಿಂದ ಜಿಲ್ಲಾಡಳಿತ ಭವನದವರೆಗೆ ಸೈಕಲ್ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯಿತ್ರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಇಬ್ಬರ ಬಂಧನ; ಕಾರು, ಸ್ಕೂಟರ್ ವಶ

ಸ್ನೇಹಿತನ ಕಾರು ಬಳಕೆ: ಕಟ್ಟಡ ನಿರ್ಮಾಣಕ್ಕೆ ಅಡ್ಡಿ ಮಾಡಿದ್ದಾರೆಂದು ಕುಲಕರ್ಣಿ ಅವರ ಬಗ್ಗೆ ದ್ವೇಷ ಬೆಳೆಸಿಕೊಂಡಿದ್ದ ಮಾದಪ್ಪನವರ ಮಗ ಮನು, ಸ್ನೇಹಿತ ವರುಣ್ ಗೌಡನೊಂದಿಗೆ ಸೇರಿ ಹತ್ಯೆಗೆ ಯೋಜನೆ ರೂಪಿಸುತ್ತಾನೆ. ಅಲ್ಲದೆ ಕೃತ್ಯಕ್ಕೆ ಮತ್ತೊರ್ವ ಸ್ನೇಹಿತನ ಕಾರು ಬಳಕೆ ಮಾಡಿದ್ದಾನೆ. ಮಾರಾಟ ಮಾಡಿಸುವಂತೆ ತನ್ನ ಸ್ನೇಹಿತ ರಘು ನೀಡಿದ್ದ ಹೋಂಡಾ ಕಂಪನಿಯ ಕಾರಿನ ನಂಬರ್ ಪ್ಲೇಟ್ ತೆಗೆದು, ತಾನೇ ಚಾಲನೆ ಮಾಡಿಕೊಂಡು ಬಂದು ಮೈಸೂರಿನ ಮಾನಸ ಗಂಗೋತ್ರಿ ಆವರಣದ ಬಯೋಟೆಕ್ನಾಲಜಿ ವಿಭಾಗದ ಬಳಿ ನವೆಂಬರ್ 4ರ ಶುಕ್ರವಾರ ಸಂಜೆ ಸುಮಾರು 5.45 ಗಂಟೆಯಲ್ಲಿ ಒಂಟಿಯಾಗಿ ವಾಯುವಿಹಾರ ಮಾಡುತ್ತಿದ್ದ ನಿವೃತ್ತ ಐಬಿ ಅಧಿಕಾರಿ ಆರ್.ಎನ್. ಕುಲಕರ್ಣಿ ಅವರ ಮೇಲೆ ಹರಿಸಿ, ಪರಾರಿಯಾಗಿದ್ದ. ಮನುವಿನ ಸ್ನೇಹಿತ ವರುಣ್‌ಗೌಡ ದ್ವಿಚಕ್ರ ವಾಹನದಲ್ಲಿ ಅಂದು ಮಾನಸ ಗಂಗೋತ್ರಿಗೆ ಬಂದು ಕುಲಕರ್ಣಿ ಅವರು ವಾಯು ವಿಹಾರ ಮಾಡುತ್ತಿರುವುದನ್ನು ದೃಢಪಡಿಸಿಕೊಂಡು ಮಾಹಿತಿ ನೀಡಿದ್ದ ಎಂಬುದು ತನಿಖೆಯಿಂದ ತಿಳಿದುಬಂದಿದೆ. ಕೃತ್ಯಕ್ಕೆ ಬಳಸಿದ್ದ ಕಾರು ಮತ್ತು ದ್ವಿಚಕ್ರ ವಾಹನವನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಆಯುಕ್ತರು ವಿವರಿಸಿದರು.

ನೆರವಾದ ಸಿಸಿ ಕ್ಯಾಮರಾ: ಮಾನಸ ಗಂಗೋತ್ರಿ ಆವರಣದಲ್ಲಿ ಅಪಘಾತ ನಡೆದಿದೆ ಎಂಬ ಮಾಹಿತಿ ಬಂದ ತಕ್ಷಣ ವಿವಿ ಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಪ್ರಸನ್ನ ಹಾಗೂ ಸಿಬ್ಬಂದಿ ಸ್ಥಳಕ್ಕೆ ಮಹಜರು ನಡೆಸಿ ಅಪರಿಚಿತ ವಾಹನ ಡಿಕ್ಕಿ ಹೊಡೆದು ಪರಾರಿಯಾಗಿದೆ ಎಂದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಹಿಟ್ ಅಂಡ್ ರನ್ ಪ್ರಕರಣ ದಾಖಲಿಸಿದ್ದರು. ಡಿಕ್ಕಿ ಹೊಡೆದು ಪರಾರಿಯಾದ ವಾಹನದ ಪತ್ತೆಗಾಗಿ ತನಿಖೆ ಆರಂಭಿಸಿ, ಕೃತ್ಯ ನಡೆದ ಸ್ಥಳದಲ್ಲಿದ್ದ ಸಿಸಿ ಕ್ಯಾಮರಾ ಫುಟೇಜಸ್‌ಗಳ ಪರಿಶೀಲಿಸಿದಾಗ ಬೇರೆ ಯಾವುದೇ ವಾಹನ ಸಂಚಾರವಿಲ್ಲದ ರಸ್ತೆಯ ಎಡಬದಿಯಲ್ಲಿ ವಾಯು ವಿಹಾರ ಮಾಡುತ್ತಿದ್ದ ಕುಲಕರ್ಣಿ ಅವರ ಮೇಲೆ ಎದುರಿನಿಂದ ಬಂದ ಗ್ರೇ ಕಲರ್ ಕಾರು ಉದ್ದೇಶ ಪೂರ್ವಕವಾಗಿಯೇ ಡಿಕ್ಕಿ ಹೊಡೆದು ಪರಾರಿಯಾಗಿರುವುದು ತಿಳಿಯಿತು ಎಂದು ಪೊಲೀಸ್ ಆಯುಕ್ತರು ತಿಳಿಸಿದರು.

ನಿರ್ಜನ ರಸ್ತೆಯಲ್ಲಿ ಉದ್ದೇಶ ಪೂರ್ವಕವಾಗಿ ಕುಲಕರ್ಣಿ ಅವರಿಗೆ ಕಾರು ಡಿಕ್ಕಿ ಹೊಡೆಸಿರುವುದು, ಆ ಕಾರಿನ ಹಿಂದೆ-ಮುಂದೆ ನೋಂದಣಿ ಸಂಖ್ಯೆ ಬೋರ್ಡ್ ಇಲ್ಲದಿರುವುದು, ಘಟನಾ ಸ್ಥಳದಲ್ಲಿ ಲಭ್ಯವಾದ ಸಾಕ್ಷ್ಯಗಳು ಹಾಗೂ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದ ದೃಶ್ಯಾವಳಿಗಳನ್ನು ಗಮನಿಸಿದಾಗ ಅದು ಹಿಟ್ ಅಂಡ್ ರನ್ ಪ್ರಕರಣ ಅಲ್ಲ, ಇದೊಂದು ಪೂರ್ವ ಯೋಜಿತ ಕೊಲೆ ಎಂಬುದು ಖಾತರಿಯಾದ ಹಿನ್ನೆಲೆಯಲ್ಲಿ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಿಸಿ, ತನಿಖೆ ಆರಂಭಿಸಿದ್ದಾಗಿ ಅವರು ಇದೇ ವೇಳೆ ಹೇಳಿದರು.

ದೂರಿನಿಂದ ಪ್ರಕರಣಕ್ಕೆ ಪುಷ್ಟಿ: ಮರುದಿನ (ನ.5) ಆರ್.ಎನ್.ಕುಲಕರ್ಣಿ ಅವರ ಅಳಿಯ ಸಂಜಯ್ ಕುಲಕರ್ಣಿ ಅವರೂ ಲಿಖಿತ ದೂರು ನೀಡಿ, ತಮ್ಮ ಮಾವನವರ ಪಕ್ಕದ ಮನೆಯವರಾದ ಮಾದಪ್ಪ ಮತ್ತು ಅವರ ಮಕ್ಕಳು, ಸೆಟ್‌ಬ್ಯಾಕ್ ಬಿಡದೇ ಮನೆ ಕಟ್ಟುತ್ತಿದ್ದ ವಿವಾದ ಸಂಬಂಧ ತಮ್ಮ ಮಾವ ಆರ್.ಎನ್.ಕುಲಕರ್ಣಿ ಅವರನ್ನು ಈಗಾಗಲೇ ಹತ್ಯೆ ಮಾಡಲು ಹುನ್ನಾರ ಮಾಡಿದ್ದರು. ಅಲ್ಲದೇ ಹಲವು ಬಾರಿ ಅವರನ್ನು ಹಿಂಬಾಲಿಸಿರುವ ವಿಷಯವನ್ನು ಮಾವನವರು ನನ್ನ ಬಳಿ ಹೇಳಿದ್ದರು ಎಂದು ಗಂಭೀರ ಆರೋಪ ಮಾಡಿದ್ದರು ಎಂದು ಡಾ.ಚಂದ್ರಗುಪ್ತ ತಿಳಿಸಿದರು.

ತನಿಖೆಗೆ ನಾಲ್ಕು ತಂಡ: ಈ ಹಿನ್ನೆಲೆಯಲ್ಲಿ ಪ್ರಕರಣದ ತನಿಖೆ ನಡೆಸಲು ಎನ್‌ಆರ್ ಉಪವಿಭಾಗದ ಎಸಿಪಿ ಎಂ.ಶಿವಶಂಕರ್, ಸಿಸಿಬಿ ಎಸಿಪಿ ಸಿ.ಕೆ.ಅಶ್ವಥನಾರಾಯಣ ನೇತೃತ್ವದಲ್ಲಿ 4 ವಿಶೇಷ ತಂಡ ರಚಿಸಲಾಗಿದ್ದು, ಸಿಸಿಬಿ ಮತ್ತು ತಾಂತ್ರಿಕ ತಂಡದ ಸಿಬ್ಬಂದಿ ಸಹಾಯದೊಂದಿಗೆ ಮಾನಸ ಗಂಗೋತ್ರಿ ಆವರಣದ ಸಿಸಿ ಕ್ಯಾಮರಾ ಫುಟೇಜ್‌ಗಳಿಂದ ಲಭ್ಯವಾದ ಸುಳಿವಿನ ಆಧಾರದಲ್ಲಿ ಟವರ್ ಲೊಕೇಷನ್‌ಗಳ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ, ಮೊದಲು ಮನುವನ್ನು ಬಂಧಿಸಿ ಕೃತ್ಯಕ್ಕೆ ಬಳಸಿದ್ದ ಕಾರನ್ನು ವಶಪಡಿಸಿಕೊಳ್ಳಲಾಯಿತು. ನಂತರ ಇಂದು ಮಧ್ಯಾಹ್ನ ಸುಮಾರು 12.50 ಗಂಟೆಗೆ ವರುಣ್‌ಗೌಡ ಸಿಕ್ಕಿದ್ದಾನೆಂಬ ಮಾಹಿತಿ ತನಿಖಾ ತಂಡದ ಪೊಲೀಸರಿಂದ ಲಭ್ಯವಾಗಿದೆ ಎಂದು ಹೇಳಿದರು.

ಮಾದಪ್ಪನ ಕಿರಿಯ ಮಗ ಮನುವನ್ನು ಬಂಧಿಸಿ ವಿಚಾರಣೆಗೊಳಪಡಿಸಿದಾಗ, ಸ್ಕೂಟರ್‌ನಲ್ಲಿ ಬಂದಿದ್ದ ತನ್ನ ಸ್ನೇಹಿತ ವರುಣ್‌ಗೌಡ, ಕುಲಕರ್ಣಿ ಅವರು ಏಕಾಂಗಿಯಾಗಿ ವಾಯು ವಿಹಾರ ಮಾಡುತ್ತಿರುವ ಸ್ಥಳದ ಮಾಹಿತಿ ನೀಡಿದ ನಂತರ ನಾನು ಹೋಗಿ ಅವರಿಗೆ ಕಾರಿನಿಂದ ಡಿಕ್ಕಿ ಹೊಡೆದು ಅಲ್ಲಿಂದ ಪರಾರಿಯಾದೆ. ಕೃತ್ಯಕ್ಕೆ ಬಳಸಿದ್ದ ಕಾರು, ತನ್ನ ಮತ್ತೋರ್ವ ಸ್ನೇಹಿತ ರಘು ಮಾರಾಟ ಮಾಡಿಸಲೆಂದು ತನಗೆ ಕೊಟ್ಟಿದ್ದ ಎಂದು ಹೇಳಿಕೆ ನೀಡಿದ್ದಾನೆ ಎಂದು ಡಾ.ಚಂದ್ರಗುಪ್ತ ತಿಳಿಸಿದ್ದಾರೆ.

ಸೆಟ್‌ಬ್ಯಾಕ್ ಬಿಡದೇ ಕುಲಕರ್ಣಿ ಅವರ ಮನೆಗೆ ಹೊಂದಿಕೊಂಡಂತೆ ಮಾದಪ್ಪ ವಸತಿ ಕಟ್ಟಡ ನಿರ್ಮಿಸುತ್ತಿರುವ ವಿವಾದ ತಾರಕಕ್ಕೇರಿದ್ದು, ಮೈಸೂರು ಮಹಾನಗರ ಪಾಲಿಕೆ, ಸಿಟಿ ಸಿವಿಲ್ ನ್ಯಾಯಾಲಯ ಹಾಗೂ ರಾಜ್ಯ ಉಚ್ಛ ನ್ಯಾಯಾಲಯಗಳಲ್ಲೂ ಈ ಸಂಬಂಧ ವಿವಿಧ ಹಂತಗಳಲ್ಲಿ ತೀರ್ಪು ಹೊರಬಂದಿರುವುದರಿಂದ ಅದೇ ವೈಷಮ್ಯದಿಂದ ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಅವರ ಕೊಲೆ ಮಾಡಲಾಗಿದೆ ಎಂಬುದು ತನಿಖೆಯಿಂದ ದೃಢಪಟ್ಟಿದೆ ಎಂದರು.

ಹೊಂಚು ಹಾಕಿ ದುಷ್ಕೃತ್ಯ: ಬಿಲ್ಡಿಂಗ್ ಬೈಲಾಗಳನ್ನು ಉಲ್ಲಂಘಿಸಿ ಮಾದಪ್ಪ ನಿರ್ಮಿಸುತ್ತಿದ್ದ ಕಟ್ಟಡದ ಅನಧಿಕೃತ ಭಾಗವನ್ನು ನೆಲಸಮಗೊಳಿಸುವಂತೆ ಮೈಸೂರು ಮಹಾನಗರ ಪಾಲಿಕೆಯು ಅಂತಿಮ ನೋಟಿಸ್ ನೀಡಿದ್ದರಿಂದ ಕೆರಳಿದ ಮಾದಪ್ಪನ ಮಗ ಮನು, ಇದಕ್ಕೆ ಕಾರಣರಾಗಿದ್ದ ಕುಲಕರ್ಣಿ ಅವರನ್ನು ಕೊಲೆ ಮಾಡಲು ನಿರ್ಧರಿಸಿದ್ದ. ಕಳೆದ ಬುಧವಾರದಿಂದ ಹಿಂಭಾಲಿಸಿ ಕುಲಕರ್ಣಿ ಅವರು ವಾಯು ವಿಹಾರ ಮಾಡುವ ಜಾಗ, ಅವರ ಕಾರು ಮತ್ತು ಚಾಲಕ ನಿಲ್ಲುವ ಸ್ಥಳವನ್ನು ನೋಡಿಕೊಂಡು ಪೂರ್ವ ಯೋಜನೆ ಮಾಡಿಕೊಂಡಿದ್ದರು. ಅದರಂತೆ ನವೆಂಬರ್ 4ರಂದು ಸಂಜೆ ಸ್ಕೂಟರ್‌ನಲ್ಲಿ ಕುಲಕರ್ಣಿ ಅವರ ಕಾರನ್ನು ಹಿಂಬಾಲಿಸಿದ ವರುಣ್‌ಗೌಡ ನೀಡಿದ ಮಾಹಿತಿ ಆಧರಿಸಿ ನಂಬರ್ ಪ್ಲೇಟ್ ತೆಗೆದಿದ್ದ ಕಾರಿನಲ್ಲಿ ಮಾನಸ ಗಂಗೋತ್ರಿಗೆ ಬಂದು ಬಯೋಟೆಕ್ನಾಲಜಿ ವಿಭಾಗದ ನಿರ್ಜನ ರಸ್ತೆಯಲ್ಲಿ ವಾಯು ವಿಹಾರ ಮಾಡುತ್ತಿದ್ದ ಆರ್.ಎನ್.ಕುಲಕರ್ಣಿ ಅವರಿಗೆ ಡಿಕ್ಕಿ ಹೊಡೆದು ಮನು ಪರಾರಿಯಾಗಿದ್ದ ಎಂದು ಡಾ.ಚಂದ್ರಗುಪ್ತ ವಿವರಿಸಿದರು.

ಇನ್ನೊಂದು ಕೇಸ್ ಇದೆ: ಕುಲಕರ್ಣಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ಮನು ವಿರುದ್ಧ ಬಿಳಿಕೆರೆ ಪೊಲೀಸ್ ಠಾಣೆಯಲ್ಲೂ ಹೊಡೆದಾಟ, ಹಲ್ಲೆ ಪ್ರಕರಣ ದಾಖಲಾಗಿದೆ. ಇದೀಗ ಹತ್ಯೆ ಪ್ರಕರಣದ ತನಿಖೆ ಮುಂದುವರಿದಿದ್ದು, ಕೊಲೆಗೆ ಪ್ರೇರಣೆ ನೀಡಿದವರು, ಸುಳಿವು ನೀಡಿದವರು, ಕೃತ್ಯದ ಬಳಿಕ ಆರೋಪಿಗಳಿಗೆ ಆಶ್ರಯ ನೀಡಿದವರು ಹಾಗೂ ಇನ್ನಿತರ ನೆರವು ನೀಡಿದವರನ್ನೂ ಪತ್ತೆ ಮಾಡಿ ಬಂಧಿಸಲಾಗುವುದು. ಸದ್ಯಕ್ಕೆ ಮನು ಮತ್ತು ವರುಣ್‌ಗೌಡನನ್ನು ಬಂಧಿಸಲಾಗಿದೆ. ಮನು ತಂದೆ ಹಾಗೂ ಕುಟುಂಬದವರೂ ಭಾಗಿಯಾಗಿದ್ದಾರೆಂಬುದು ದೃಢಪಟ್ಟಲ್ಲಿ ಅವರ ವಿರುದ್ಧವೂ ಕಾನೂನು ರೀತಿಯ ಕ್ರಮ ಜರುಗಿಸುತ್ತೇವೆ ಎಂದು ಪೊಲೀಸ್ ಆಯುಕ್ತರು ತಿಳಿಸಿದರು. ಪ್ರಕರಣದ ಪತ್ತೆಗಾಗಿ ರಚಿಸಲಾಗಿದ್ದ ವಿಶೇಷ ತನಿಖಾ ತಂಡದ ನೇತೃತ್ವ ವಹಿಸಿದ್ದ ಎನ್.ಆರ್. ಉಪವಿಭಾಗದ ಎಸಿಪಿ ಎಂ. ಶಿವಶಂಕರ ಹಾಗೂ ಸಿಸಿಬಿ ಎಸಿಪಿ ಸಿ.ಕೆ. ಅಶ್ವಥನಾರಾಯಣ ಸುದ್ದಿಗೋಷ್ಠಿಯಲ್ಲಿದ್ದರು.

ಅಕ್ರಮ ಪ್ರಶ್ನಿಸಿದ್ದೇ ಸಂಚಕಾರವಾಯ್ತು...

ವಿವಿಧ ಹಂತಗಳಲ್ಲಿ ತೀರ್ಪುಗಳು ಬಂದಿದ್ದು, ಅಂತಿಮವಾಗಿ ಅನಧಿಕೃತವಾಗಿ ನಿರ್ಮಿಸುತ್ತಿರುವ ಕಟ್ಟಡದ ಭಾಗವನ್ನು ಕೆಡವಲು ನಗರ ಪಾಲಿಕೆಯು ಮಾದಪ್ಪ ಅವರಿಗೆ ಅಂತಿಮ ನೋಟಿಸ್ ಜಾರಿ ಮಾಡಿದೆ ಎಂದು ತಿಳಿದು ಬಂದಿದೆ. ಕಳೆದ ಮೂರ್‍ನಾಲ್ಕು ವರ್ಷಗಳಿಂದ ಕುಲಕರ್ಣಿ ಮತ್ತು ಮಾದಪ್ಪ ಕುಟುಂಬದ ನಡುವೆ ಈ ವಿವಾದವಿದ್ದು, ವೈಷಮ್ಯ ತಾರಕ್ಕೆ ಹೋಗಿದ್ದರಿಂದ ಮಾದಪ್ಪನ ಕಿರಿಯ ಮಗ ಮನು ಈ ಕೃತ್ಯ ಎಸಗಿದ್ದಾನೆ. ಕೊಲೆ ಮಾಡಲು ತನ್ನ ಸ್ನೇಹಿತ ವರುಣ್ ಗೌಡನ ಸಹಾಯ ಪಡೆದಿದ್ದ. ಮಾರಾಟ ಮಾಡಲೆಂದು ಸ್ನೇಹಿತ ರಘು ನೀಡಿದ್ದ ಹೋಂಡಾ ಕಾರಿನ ನಂಬರ್ ಪ್ಲೇಟ್ ತೆಗೆದು ಆರ್.ಎನ್.ಕುಲಕರ್ಣಿ ಅವರಿಗೆ ಡಿಕ್ಕಿ ಹೊಡೆದು ಕೊಲೆ ಮಾಡಿದ್ದಾನೆಂಬುದು ದೃಢಪಟ್ಟಿದೆ ಎಂದು ಡಾ.ಚಂದ್ರಗುಪ್ತ ತಿಳಿಸಿದ್ದಾರೆ.

50,000 ರೂ. ಬಹುಮಾನ

ಎಂದು ದಾಖಲಾಗಿದ್ದ ಪ್ರಕರಣವನ್ನು ಘಟನಾ ಸ್ಥಳ ದಲ್ಲಿ ದೊರೆತ ಸಾಂದರ್ಭಿಕ ಸಾಕ್ಷ್ಯಗಳಿಂದಾಗಿ ಅಂದು ರಾತ್ರಿ(ನ.4)ಯೇ ಕೊಲೆ ಎಂದು ಪರಿಗಣಿಸಿ ಜಯಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲಿಸಿ, ನಮ್ಮ ಪೊಲೀಸರು ಕರ್ತವ್ಯ ಪ್ರಜ್ಞೆ ಮೆರೆದಿದ್ದಾರೆ ಎಂದು ಶ್ಲಾಘಿಸಿದರು. ತನಿಖೆ ಜವಾಬ್ದಾರಿ ವಹಿಸಿಕೊಂಡಿದ್ದ ವಿಶೇಷ ತಂಡದ ಇಬ್ಬರು ಎಸಿಪಿಗಳೂ ಕಾರ್ಯಾಚರಣೆಯ ನಡೆಸಿ ಅತೀ ಕಡಿಮೆ ಅವಧಿಯಲ್ಲಿ ಕುಲಕರ್ಣಿ ಅವರ ಕೊಲೆ ಪ್ರಕರಣ ಭೇದಿಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದು, ನಾಲ್ಕೂ ತಂಡದ 50 ಮಂದಿ ಸಿಬ್ಬಂದಿ, ಹತ್ಯೆ ಆರೋಪಿಗಳ ಪತ್ತೆಗೆ ನೆರವಾಗಿದ್ದಾರೆ. ತನಿಖಾ ತಂಡಗಳ ಅಧಿಕಾರಿಗಳು, ಸಿಬ್ಬಂದಿಯ ಕಾರ್ಯ ದಕ್ಷತೆ, ಸಮಯ ಪ್ರಜ್ಞೆ ಹಾಗೂ ಶ್ರಮವನ್ನು ಪ್ರಶಂಸಿಸಿ, 50,000 ರೂ. ನಗದು ಬಹುಮಾನ ನೀಡುತ್ತಿದ್ದೇವೆ ಎಂದರು.

ಸಿಸಿ ಕ್ಯಾಮರಾದಿಂದ ಮಹತ್ವದ ಮಾಹಿತಿ

ಹೊಡೆದು ಕುಲಕರ್ಣಿ ಅವರು ಸಾವನ್ನಪ್ಪಿದ್ದಾರೆಂದು ಸಂಚಾರ ಠಾಣೆ ಪೊಲೀಸರು ಆಕ್ಸಿಡೆಂಟ್ ಕೇಸ್ ದಾಖಲಿಸುತ್ತಿದ್ದರು. ಮಾನಸ ಗಂಗೋತ್ರಿ ಕ್ಯಾಂಪಸ್‌ನಲ್ಲಿ ಎಲ್ಲೆಡೆ ಯಥೇಚ್ಛವಾಗಿ ಸರ್ವಲನ್ಸ್ ಕ್ಯಾಮರಾ ಅಳವಡಿಸಿರುವುದು ಕಾಣುತ್ತಿದ್ದರೂ ಆಗಂತುಕರು ಕುಲಕರ್ಣಿ ಅವರನ್ನು ಹತ್ಯೆ ಮಾಡಲು ಕ್ಯಾಮರಾ ಇರುವ ಎದುರಿನ ರಸ್ತೆಯನ್ನೇ ಆಯ್ಕೆ ಮಾಡಿಕೊಂಡಿರುವುದು ಅಚ್ಚರಿ ಮೂಡಿಸಿದೆ. ಕಾರಿನಲ್ಲಿರುವ ಚಾಲಕ ಕ್ಯಾಮರಾದಲ್ಲಿ ಕಾಣಿಸುವುದಿಲ್ಲ ಎಂದೋ, ನಂಬರ್ ಪ್ಲೇಟ್ ತೆಗೆದರೆ ಕಾರು ಯಾವುದೆಂದು ಪತ್ತೆಯಾಗುವುದಿಲ್ಲ ಎಂದೋ ಅಥವಾ ಸಿಸಿ ಕ್ಯಾಮರಾ ಇರುವುದು ಗೊತ್ತಿಲ್ಲದೆಯೋ, ಪ್ರತ್ಯಕ್ಷ ಸಾಕ್ಷಿಗಳಿಲ್ಲದ ಕಾರಣ ತಾವು ಶಿಕ್ಷೆಯಿಂದ ಪಾರಾಗಬಹುದೆಂಬ ಧೈರ್ಯದಿಂದ ಅದೇ ಸ್ಥಳವನ್ನು ಕೊಲೆಗೆ ಆಯ್ಕೆ ಮಾಡಿಕೊಂಡಿರುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ. ಅಲ್ಲದೆ, ಮೊಬೈಲ್ ಫೋನ್ ಟ್ರ್ಯಾಪ್, ಟವರ್ ಲೊಕೇಷನ್, ತಂತ್ರಜ್ಞಾನ ಸಹ ಈ ಕೊಲೆ ಪ್ರಕರಣ ಅತೀ ಕಡಿಮೆ ಅವಧಿಯಲ್ಲಿ ಪತ್ತೆಯಾಗಲು ಕಾರಣ ಎಂದು ಪೊಲೀಸರು ಅಭಿಪ್ರಾಯಪಟ್ಟಿದ್ದಾರೆ.

ಕೆಸರೆ ಘನ ತ್ಯಾಜ್ಯ ವಿಲೇವಾರಿ ಘಟಕ ಡಿ.15ರೊಳಗೆ ಕಾರ್ಯಾರಂಭ

● ಮೈಸೂರಿನ ಸ್ವಚ್ಛತೆ ಕಾಯ್ದುಕೊಳ್ಳುವಲ್ಲಿ ಮತ್ತೊಂದು ಮಹತ್ವದ ಹೆಜ್ಜೆ ● ಮೇಯರ್ ಶಿವಕುಮಾರ್ ಜೊತೆ ಸ್ಥಳ ಪರಿಶೀಲನೆ ನಂತರ ಶಾಸಕ ರಾಮದಾಸ್ ಮಾಹಿತಿ ● ಈ ಘಟಕ ಕಾರ್ಯಾರಂಭದೊಂದಿಗೆ ಸಿವೇಜ್ ಫಾರಂ ಘಟಕಕ್ಕೆ ತ್ಯಾಜ್ಯ ಸಾಗಾಟ ಸ್ಥಗಿತ ● ಕೆಸರೆ ಘಟಕ 200 ಮೆಟ್ರಿಕ್ ಟನ್ ತ್ಯಾಜ್ಯ ವಿಲೇವಾರಿ ಸಾಮರ್ಥ್ಯ; ದುರ್ವಾಸನೆಗೂ ತಂತ್ರಜ್ಞಾನದಿಂದ ಬ್ರೇಕ್

ಮೈಸೂರು, ನ.8(ಎಂಟಿವೈ)- ಸಾಂಸ್ಕೃತಿಕ ಮೈಸೂರನ್ನು ಸ್ವಚ್ಛ ನಗರಿಯಾಗಿ ಮುಂದುವರೆಸುವ ನಿಟ್ಟಿನಲ್ಲಿ ಘನತ್ಯಾಜ್ಯ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕೆಸರೆಯಲ್ಲಿ ನಿರ್ಮಿಸುತ್ತಿರುವ ಕಸ ವಿಲೇವಾರಿ ಘಟಕ ಡಿಸೆಂಬರ್ 15ರೊಳಗೆ ಕಾರ್ಯಾರಂಭಿಸಲಿದೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದ್ದಾರೆ.



ಕೆಸರೆಯಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಮಂಗಳವಾರ ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ.ರೂಪ ಹಾಗೂ ಪಾಲಿಕೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಕಾಮಗಾರಿ ಪರಿಶೀಲಿಸಿದ ಬಳಿಕ ಮಾತನಾಡಿದ ಅವರು, ಕೆಸರೆಯಲ್ಲಿ 200 ಟನ್ ಕಸವನ್ನು ಸಂಗ್ರಹಣೆ ಮಾಡಿ, ವೈಜ್ಞಾನಿಕವಾಗಿ ಕಸವಿಲೇವಾರಿ ಮಾಡಲು ನೂತನ ಘಟಕ ಸ್ಥಾಪಿಸುತ್ತಿರುವುದು ಮೈಸೂರು ನಗರದ ಸ್ವಚ್ಛತೆಗೆ ಅಭೂತಪೂರ್ವ ಕೊಡುಗೆ ನೀಡಿದಂತಾಗುತ್ತದೆ. ಮೈಸೂರು 'ಕ್ಲೀನ್ ಸಿಟಿ' ಎನ್ನುವಂತಹ ಘೋಷಣೆಯೊಂದಿಗೆ 2014ರಲ್ಲಿ ಮೊದಲನೇ ಬಾರಿಗೆ ದೇಶದಲ್ಲೇ ಮೊದಲ ಸ್ವಚ್ಛ ನಗರ ಎಂಬ ಬಿರುದು ಪಡೆದಿತ್ತು. 2015ರಲ್ಲಿ 2ನೇ ಬಾರಿಯೂ ಪ್ರಶಸ್ತಿ ಪಡೆದಿತ್ತು. ಶೂನ್ಯ ಘನತ್ಯಾಜ್ಯ ನಿರ್ವಹಣೆ ಎನ್ನುವ ಪರಿಕಲ್ಪನೆಯನ್ನು ರಾಜ್ಯದಲ್ಲಿ ಮೊದಲ ಬಾರಿಗೆ ಮೈಸೂರಲ್ಲಿ ಜಾರಿಗೆ ತರಲಾಯಿತು. ಕಸವನ್ನು ಲಾಭದಾಯಕವಾಗಿ ಉಪಯೋಗಿಸಬೇಕೆಂಬ ಸಂದೇಶದೊಂದಿಗೆ ಮೈಸೂರಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲಾಗಿತ್ತು ಎಂದರು.

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ 65 ವಾರ್ಡ್‌ಗಳಲ್ಲಿ ಸುಮಾರು 18 ಸ್ಥಳಗಳಲ್ಲಿ ಮೈಸೂರಲ್ಲಿ ಮನೆ ಮನೆಯಿಂದ ಸಂಗ್ರಹವಾದ ಕಸವನ್ನು ಹಸಿ ಹಾಗೂ ಒಣ ಕಸವಾಗಿ ಬೇರ್ಪಡಿಸುವ ಕಾರ್ಯ ನಡೆಸಲಾಯಿತು. ಅದರಲ್ಲಿ ಲಾಭದಾಯಕವಾಗಿರುವ ವಸ್ತುಗಳನ್ನು ಪ್ರತ್ಯೇಕಿಸುವ ಯೋಜನೆಯೂ ಯಶಸ್ವಿಯಾಯಿತು. ಸಂಗ್ರಹವಾದ ಕಸವನ್ನು ವೈಜ್ಞಾನಿಕ ರೀತಿಯಲ್ಲಿ ಕಸ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಯಿತು. ಕೆಸರೆ ಬಡಾವಣೆಯಲ್ಲಿರುವ ಘಟಕದಲ್ಲಿ 200 ಮೆಟ್ರಿಕ್ ಟನ್ ಕಸ ವಿಲೇವಾರಿ ಮಾಡಬಹುದಾಗಿದೆ. ಕಸದಿಂದ ದುರ್ವಾಸನೆ ಬೀರದಂತೆ ಹೊಸ ಟೆಕ್ನಾಲಜಿ ಅಳವಡಿಸಲಾಗಿದೆ. ಈ ಘಟಕದಲ್ಲಿ ಎಲ್ಲಾ ಕಾಮಗಾರಿಗಳು ನವೆಂಬರ್ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ. ಉಪಕರಣಗಳ ಅಳವಡಿಕೆ, ವಿದ್ಯುತ್ ಸಂಪರ್ಕ ಹಾಗೂ ಇನ್ನಿತರ ಸೌಲಭ್ಯ ಕಲ್ಪಿಸಿದ ನಂತರ, ಡಿ.15ರೊಳಗೆ ಟ್ರಯಲ್ ಟೆಸ್ಟ್ ಪೂರ್ಣಗೊಳಿಸುವಂತೆ ಸೂಚನೆ ನೀಡಲಾಗಿದೆ. ನೂತನ ಘಟಕ ಡಿಸೆಂಬರ್ ಎರಡನೇ ವಾರದಿಂದ ಕಾರ್ಯ ನಿರ್ವಹಿಸುವುದರಿಂದ ಮೈಸೂರಲ್ಲಿ ತ್ಯಾಜ್ಯ ನಿರ್ವಹಣೆಯ ಸಮಸ್ಯೆ ಹಂತ ಹಂತವಾಗಿ ನಿವಾರಿಸಬಹುದಾಗಿದೆ ಎಂದು ತಿಳಿಸಿದರು.

ಕೆಸರೆ ಸಮೀಪದಲ್ಲಿರುವ ವಿಶಾಲವಾದ 11.5 ಎಕರೆ ಪ್ರದೇಶದಲ್ಲಿ ಘಟಕ ನಿರ್ಮಾಣವಾಗಿದ್ದು, ಅಂದಾಜು 22 ಕೋಟಿ ರೂ.ವೆಚ್ಚವಾಗಿದೆ. ಘಟಕದ ಕೆಲಸ ಶೇ.90ರಷ್ಟು ಮುಗಿದಿದ್ದು, ಅಳವಡಿಸಿರುವ ಯಂತ್ರವು ಪ್ರತಿನಿತ್ಯ 200 ಮೆಟ್ರಿಕ್ ಟನ್ ಕಸವನ್ನು ವಿಲೇವಾರಿ ಮಾಡಲಿದ್ದು, ನೂತನ ತಂತ್ರಜ್ಞಾನವನ್ನು ಹೊಂದಿದೆ. ವಿದ್ಯಾರಣ್ಯಪುರಂ ಟ್ರೀಟ್‌ಮೆಂಟ್ ಪ್ಲಾಂಟ್‌ನಲ್ಲಿರುವ ಯಂತ್ರದಿಂದ 150 ಮೆಟ್ರಿಕ್ ಟನ್ ಮಾತ್ರ ವಿಲೇವಾರಿ ಮಾಡಬಹುದಾಗಿದ್ದು, ಕೆಸರೆಯಲ್ಲಿ 200 ಮೆಟ್ರಿಕ್ ಟನ್ ವಿಲೇವಾರಿ ಮಾಡುವಂತಹ ವ್ಯವಸ್ಥೆ ಹೊಂದಲಾಗಿದೆ. ಈ ಘಟಕ ಆರಂಭವಾದ ಮೇಲೆ ನರಸಿಂಹರಾಜ ಕ್ಷೇತ್ರದ ವ್ಯಾಪ್ತಿಗೆ ಬರುವ ವಲಯ ಕಚೇರಿ 7, 8ರ ವ್ಯಾಪ್ತಿಯ ಎಲ್ಲಾ ವಾರ್ಡ್, ವಲಯ 5 ಮತ್ತು 9ರಲ್ಲಿ ತಲಾ ಎರಡೆರಡು ವಾರ್ಡ್‌ಗಳಿಂದ ಸಂಗ್ರಹಿಸಿರುವ ಘನತ್ಯಾಜ್ಯವನ್ನು ಕೆಸರೆ ಘಟಕಕ್ಕೆ ಸಾಗಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಇದರಿಂದ ವಿದ್ಯಾರಣ್ಯಪುರಂ ಘಟಕಕ್ಕೆ ಹೆಚ್ಚುವರಿ ತ್ಯಾಜ್ಯ ಶೇಖರಣೆ ನಿಲ್ಲುತ್ತದೆ ಎಂದರು.

ಕೆಸರೆ ಘಟಕ ಕಾರ್ಯಾರಂಭದ ಬಳಿಕ ಹೆಚ್.ಡಿ. ಕೋಟೆ ರಸ್ತೆಯಲ್ಲಿರುವ ರಾಯನಕೆರೆ ಸಮೀಪದಲ್ಲೂ ಮತ್ತೊಂದು ಘಟಕದ ನಿರ್ಮಾಣಕ್ಕೆ ಚಾಲನೆ ನೀಡಲಾಗುತ್ತದೆ. ಇದರಿಂದ ತ್ಯಾಜ್ಯ ನಿರ್ವಹಣೆ ಸಮಸ್ಯೆ ನಿವಾರಣೆಯಾಗಲಿದೆ. ರಾಯನಕೆರೆ ಮತ್ತು ಕೆಸರೆ ಎರಡು ಕಸ ವಿಲೇವಾರಿ ಘಟಕಗಳು ಸಕ್ರಿಯವಾಗಿ ಕಾರ್ಯಾಚರಣೆ ಮಾಡಲಾರಂಭಿಸಿದರೆ, ವಿದ್ಯಾರಣ್ಯಪುರಂನಲ್ಲಿರುವ ಎಕ್ಸೆಲ್ ಪ್ಲಾಂಟ್‌ನ ಕಸ ವಿಲೇವಾರಿ ಘಟಕದಲ್ಲಿ ಸಂಗ್ರಹವಾಗಿರುವ 7 ಲಕ್ಷ ಟನ್ ಕಸವನ್ನು ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕಾಗುತ್ತದೆ. ಹೊಸದಾಗಿ ಸಂಗ್ರಹವಾಗುವ ಕಸವನ್ನು ಎರಡು ಕಡೆಗೆ ವಿಂಗಡಣೆ ಮಾಡಿದರೆ ಆಗ ಎಕ್ಸೆಲ್ ಪ್ಲಾಂಟ್‌ನಲ್ಲಿರುವ ಕಸವನ್ನು ಸಂಪೂರ್ಣ ವಿಲೇವಾರಿ ಮಾಡಬಹುದಾಗಿದೆ ಎಂದು ಅಭಿಪ್ರಾಯಪಟ್ಟರು.

ಮೇಯರ್ ಶಿವಕುಮಾರ್ ಮಾತನಾಡಿ, ಕೆಸರೆಯಲ್ಲಿ ನಿರ್ಮಿಸುತ್ತಿರುವ ಘಟಕವು 200 ಟನ್ ಸಾಮರ್ಥ್ಯವನ್ನು ಹೊಂದಿರುವುದರಿಂದ ವಿದ್ಯಾರಣ್ಯಪುರಂ ಘಟಕದ ಮೇಲೆ ಒತ್ತಡ ಬೀಳುವುದು ಕಡಿಮೆಯಾಗಿದೆ. ಪ್ರತಿನಿತ್ಯ 500 ಟನ್‌ಗಿಂತಲೂ ಹೆಚ್ಚು ಕಸ ಸಂಗ್ರಹವಾಗುತ್ತಿರುವುದರಿಂದ ಲ್ಯಾಂಡ್‌ಫಿಲ್ಲಿಂಗ್ ಮಾಡುವುದು ಕಷ್ಟಕರವಾಗಲಿದೆ. ಹಾಗಾಗಿ, ಈ ಘಟಕ ಆರಂಭಿಸಿದ ಮೇಲೆ ನರಸಿಂಹರಾಜ ಕ್ಷೇತ್ರದಲ್ಲಿ ಉತ್ಪತ್ತಿಯಾಗುವ ಕಸವನ್ನು ಕೆಸರೆಗೆ ಕಳುಹಿಸಲಾಗುತ್ತದೆ.

ಈ ಸಂದರ್ಭದಲ್ಲಿ ಇಇ ರಂಜಿತ್‌ಕುಮಾರ್, ಎಇಇ ಸೋಮಶೇಖರ್, ಪರಿಸರ ಇಂಜಿನಿಯರ್‌ಗಳಾದ ಶ್ರೀದೇವಿ, ಮೃತ್ಯುಂಜಯ ಇದ್ದರು.

ನ.11ರಂದು ಕನಕ ಜಯಂತಿ; ಪ್ರತಿಮೆ ಬೃಹತ್ ಮೆರವಣಿಗೆ



ಮೈಸೂರು, ನ.8(ಆರ್‌ಕೆಬಿ)- ಸಂತ ಕನಕದಾಸರ ಜಯಂತಿ ಅಂಗವಾಗಿ ಮೈಸೂರಿನ ಸಂತ ಶ್ರೀ ಕನಕದಾಸರ ಜಯಂತ್ಯೋತ್ಸವ ಸಮಿತಿ ಹಾಗೂ ಜಿಲ್ಲಾಡಳಿತದ ವತಿಯಿಂದ ನ.11ರಂದು ಮೈಸೂರಿನ ಕಲಾಮಂದಿರದಲ್ಲಿ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ಅದ್ಧೂರಿಯಾಗಿ ಆಚರಿಸಲಾಗುತ್ತಿದೆ. ಜೊತೆಗೆ ಕನಕದಾಸರ ಪ್ರತಿಮೆಯ ಬೃಹತ್ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿಯ ಸಂಚಾಲಕ ಶಿವಣ್ಣ ಇಂದಿಲ್ಲಿ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ.11ರಂದು ಬೆಳಗ್ಗೆ 9 ಗಂಟೆಗೆ ಮೈಸೂರು ಅರಮನೆ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯಿಂದ ಅಲಂಕೃತ ರಥದಲ್ಲಿ ಕನಕದಾಸರ ಪ್ರತಿಮೆಯ ಮೆರವಣಿಗೆ ನಡೆಯಲಿದೆ. ಸಮಾಜದ ಗುರುಗಳಾದ ಶ್ರೀ ಶಿವಾನಂದ ಪುರಿ ಸ್ವಾಮೀಜಿ, ಮೇಯರ್ ಶಿವಕುಮಾರ್, ಇನ್ನಿತರರು ಭಾಗವಹಿಸುವರು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಭಾಗವಹಿಸಲಿವೆ ಎಂದರು.


ಮೆರವಣಿಗೆಯು ಕೆ.ಆರ್.ವೃತ್ತ, ಸಯ್ಯಾಜಿ ರಾವ್ ರಸ್ತೆ, ನಗರಪಾಲಿಕೆ ಕಚೇರಿ ಎದುರಿನಿಂದ ಸಂಸ್ಕೃತ ಪಾಠಶಾಲೆ, ಚಾಮರಾಜ ಜೋಡಿ ರಸ್ತೆ, ನಾರಾಯಣಶಾಸ್ತ್ರಿ ರಸ್ತೆ, ಜೆಎಲ್‌ಬಿ ರಸ್ತೆ, ಡಿ.ದೇವರಾಜ ಅರಸು ರಸ್ತೆ, ಮೆಟ್ರೋಪೋಲ್ ವೃತ್ತ ಮಾರ್ಗವಾಗಿ ಕಲಾಮಂದಿರ ತಲುಪಲಿದೆ. ಕಲಾಮಂದಿರದಲ್ಲಿ ಮಧ್ಯಾಹ್ನ 12.30ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

ಅಲ್ಲದೆ, ಸಿದ್ಧಾರ್ಥನಗರದಲ್ಲಿರುವ ಕನಕ ಭವನದಲ್ಲಿ ನ.12 ರಂದು ಬೆಳಗ್ಗೆ 9.30ಕ್ಕೆ ಮತ್ತು ನ.14ರಂದು ಸಂಜೆ 5 ಗಂಟೆಗೆ ಖ್ಯಾತ ಕಲಾವಿದರಿಂದ ಕನಕದಾಸರ ಕೀರ್ತನೆ, ಭಕ್ತಿಗೀತೆಗಳ ಕಾರ್ಯಕ್ರಮ, ಗಣ್ಯ ವ್ಯಕ್ತಿಗಳಿಂದ ಪ್ರತಿಭಾ ಪುರಸ್ಕಾರ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಬ್ಯಾಂಕ್ ಪುಟ್ಟಸ್ವಾಮಿ, ವಿಶ್ವನಾಥ್ ಇನ್ನಿತರರು ಉಪಸ್ಥಿತರಿದ್ದರು.

ಜೆಡಿಎಸ್‌ನಿಂದ ಅಭ್ಯರ್ಥಿಗಳ ಸಂದರ್ಶನ

ಕಾರ್ಪೋರೇಟ್ ಮಾದರಿ ಅಭ್ಯರ್ಥಿ ಆಯ್ಕೆಯಿಂದ ರಾಜಕೀಯ ಸಂಚಲನ

ಬೆಂಗಳೂರು, ನ.8(ಕೆಎಂಶಿ)- ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲುವ ಅಭ್ಯರ್ಥಿಗಳ ತಲಾಶೆಯಲ್ಲಿರುವ ಜೆಡಿಎಸ್ ಇದೀಗ ವಿಧ್ಯುಕ್ತವಾಗಿ ಸಂದರ್ಶನ ಆರಂಭಿಸಿದೆ. ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ದೆಹಲಿ, ತೆಲಂಗಾಣ, ಚೆನ್ನೈ ಹಾಗೂ ಮುಂಬೈನಿಂದ ಬಂದಿರುವ ಚುನಾವಣಾ ಪರಿಣಿತರು, ಅಭ್ಯರ್ಥಿಗಳ ಸಂದರ್ಶನ ನಡೆಸುತ್ತಿದ್ದಾರೆ.



ನಗರದಲ್ಲಿ ನಡೆಯುತ್ತಿರುವ ನಾಲ್ಕು ದಿನಗಳ ಸಂದರ್ಶನಕ್ಕೆ ಪಕ್ಷದ ಹಾಲಿ ಶಾಸಕರನ್ನು ಹೊರತುಪಡಿಸಿ 126 ಮಂದಿಗೆ ಕರೆ ನೀಡಲಾಗಿದ್ದು, ಮೊದಲ ದಿನ ಮೂವತ್ತೆಂಟು ಮಂದಿ ಟಿಕೆಟ್ ಆಕಾಂಕ್ಷಿಗಳು ಭಾಗಿಯಾಗಿದ್ದಾರೆ. ಸಂದರ್ಶನಕ್ಕೆ ಬಂದವರ ವೈಯಕ್ತಿಕ ವಿವರವನ್ನು ಸಂಗ್ರಹಿಸಲಾಗಿದ್ದು, ಯಾವ ಕ್ಷೇತ್ರಗಳಲ್ಲಿ ಅವರು ಟಿಕೆಟ್ ಕೇಳಿದ್ದಾರೋ ಅಲ್ಲಿ ಸ್ಪರ್ಧಿಸಲು ಅವರಿಗೆ ಇರುವ ಅನುಕೂಲಗಳೇನು, ಅನಾನುಕೂಲಗಳೇನು ಎಂಬುದು ಸೇರಿದಂತೆ ಅತಿಸೂಕ್ಷ್ಮ ಮಾಹಿತಿಗಳು ಅದರಲ್ಲಿವೆ.

ಆಕಾಂಕ್ಷಿಗೆ ಇರುವ ಅನುಕೂಲಗಳೇನು, ಸಮಸ್ಯೆ ಇದ್ದರೆ ಯಾವ ಭಾಗದಿಂದ ಸಮಸ್ಯೆ ಎದುರಾಗಬಹುದು ಅನ್ನುವುದನ್ನು ಪರಿಶೀಲಿಸಿ ಅದಕ್ಕೆ ಪರಿಹಾರವಿದೆಯೇ, ಇದ್ದರೆ ಏನು, ಪರಿಹಾರವೇ ಇಲ್ಲದಿದ್ದರೆ ಏನು ಅನ್ನುವವರಿಗೆ ಈ ಸಂದರ್ಶನ ಕರಾರುವಾಕ್ಕಾಗಿದೆ. ಅಂದ ಹಾಗೆ ಈ ಸಂದರ್ಶನ ನಡೆಸುವ ಜವಾಬ್ದಾರಿಯನ್ನು ಐದು ತಂಡಗಳಿಗೆ ವಹಿಸಲಾಗಿದ್ದು ದೆಹಲಿ, ಹೈದರಾಬಾದ್, ಮುಂಬಯಿ, ಬೆಂಗಳೂರು ಸೇರಿದಂತೆ ಐದು ಭಾಗಗಳ ತಂಡಗಳು ಟಿಕೆಟ್ ಆಕಾಂಕ್ಷಿಗಳ ಸಂದರ್ಶನ ನಡೆಸಿ, ಅವರಿಗೆ ಸಲಹೆ ನೀಡುತ್ತಿವೆ.

ಅಭ್ಯರ್ಥಿಯಾಗಲು ಬಯಸುವವರ ಹಣಕಾಸಿನ ಪರಿಸ್ಥಿತಿಯಿಂದ ಹಿಡಿದು, ಅವರಿಗೆ ಯಾವ್ಯಾವ ಕಡೆಗಳಿಂದ ಸಮಸ್ಯೆ ಇದೆ ಅನ್ನುವುದನ್ನು ಪರಿಶೀಲಿಸಿ, ಅದರ ಪರಿಹಾರ ಕಾರ್ಯ ಹೇಗೆ ಎಂಬಲ್ಲಿಯವರೆಗೆ ಈ ತಂಡಗಳು ಪ್ರತ್ಯೇಕವಾಗಿ ಆಕಾಂಕ್ಷಿಗಳ ಬಳಿ ಮಾತನಾಡಿ ಸಲಹೆ ಕೊಡುತ್ತಿವೆ. ಒಂದು ವೇಳೆ ಟಿಕೆಟ್ ಆಕಾಂಕ್ಷಿಗಳು ಕೌಟುಂಬಿಕವಾಗಿ ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ಅದರ ಪರಿಹಾರ ಕಾರ್ಯ ಹೇಗೆ ಎಂದು ಹೇಳುತ್ತಿರುವ ಈ ತಂಡ ಅಂತಿಮವಾಗಿ ಯಾರಿಗೆ ಟಿಕೆಟ್ ಕೊಡಬಹುದು, ಯಾರಿಗೆ ಟಿಕೆಟ್ ಕೊಟ್ಟರೆ ಉಪಯೋಗವಿಲ್ಲ ಎಂಬ ಕುರಿತು ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ವರದಿ ನೀಡಲಿದೆ.

ಈ ವರದಿಯ ಆಧಾರದ ಮೇಲೆ ಟಿಕೆಟ್ ಆಕಾಂಕ್ಷಿಗಳ ಭವಿಷ್ಯವನ್ನು ನಿರ್ಧರಿಸಲಿರುವ ಹೆಚ್.ಡಿ.ಕುಮಾರಸ್ವಾಮಿ, ನಿಮಗೆ ಟಿಕೆಟ್ ಕೊಡುತ್ತೇವೆ ಅಂತಲೋ, ಟಿಕೆಟ್ ಕೊಡುವುದಿಲ್ಲ ಅಂತಲೋ ಸ್ಪಷ್ಟವಾಗಿ ಹೇಳಲಿದ್ದಾರೆ ಎಂಬುದು ಉನ್ನತ ಮೂಲಗಳ ಹೇಳಿಕೆ. ಚುನಾವಣಾ ರಣತಂತ್ರ ಶರವೇಗದಲ್ಲಿ ಬದಲಾಗುತ್ತಿದ್ದು, ಇಂತಹ ಕಾಲದಲ್ಲಿ ಕಾರ್ಪೊರೇಟ್ ಮಾದರಿಯ ಸಂದರ್ಶನ ನಡೆಸಿರುವ ಜೆಡಿಎಸ್ ಕ್ರಮ ರಾಜಕೀಯ ವಲಯಗಳಲ್ಲಿ ಭಾರೀ ಸಂಚಲನ ಮೂಡಿಸಿದೆ

ಉನ್ನತ ಶಿಕ್ಷಣ ಪಡೆದ ಮಾತ್ರಕ್ಕೆ ಓದು ಮುಗಿಯಿತು ಎಂದರ್ಥವಲ್ಲ; ಜ್ಞಾನ ಸಂಪಾದನೆಗೆ ಮಿತಿಯೇ ಇಲ್ಲ

ಬೇಲಿಮಠ ಮಹಾಸಂಸ್ಥಾನದ ಶ್ರೀ ಶಿವರುದ್ರ ಸ್ವಾಮೀಜಿ ಅಭಿಮತ

ಮೈಸೂರು, ನ.8(ಎಂಟಿವೈ)- ಅಧ್ಯಯನ ಹಾಗೂ ಅಧ್ಯಾಪನದ ಶಕ್ತಿ ಕುಂದಿದರೆ ಜ್ಞಾನಾರ್ಜನೆಯೂ ಕ್ಷೀಣಿಸುತ್ತದೆ ಎಂದು ಬೇಲಿಮಠ ಮಹಾ ಸಂಸ್ಥಾನದ ಶ್ರೀ ಶಿವರುದ್ರ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಪ್ರತಿಭಾ ಸಂಸತ್ ಹಾಗೂ ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತು ಸಂಯುಕ್ತಾಶ್ರಯದಲ್ಲಿ ಮಂಗಳವಾರ ಆಯೋಜಿಸಿದ್ದ 'ಡಾ.ಜಿ.ಮರಳಸಿದ್ಧಯ್ಯ ಅವರ ಜನ್ಮಶತಮಾನೋತ್ಸವ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಓರ್ವ ವಿದ್ಯಾರ್ಥಿ ಉನ್ನತ ಶಿಕ್ಷಣ ಪಡೆದರೆ, ಮುಂದಿನ ದಿನಗಳಲ್ಲಿ ನಾನು ಓದಬೇಕಾದದ್ದು ಏನೂ ಇಲ್ಲ ಎಂದು ತಿಳಿದುಕೊಳ್ಳುತ್ತಾರೆ. ಜ್ಞಾನ ಸಂಪಾದನೆಗೆ ಯಾವುದೇ ಮಿತಿ ಇಲ್ಲ ಇಂತಿಷ್ಟೇ ಓದಬೇಕೆಂಬ ನಿಯಮವೂ ಇಲ್ಲ. ಹೆಚ್ಚು ಓದಿದಷ್ಟು ಹೆಚ್ಚು ಜ್ಞಾನ ಸಂಪಾದಿಸಬಹುದಾಗಿದೆ. ಆದರೆ, ಯುವಜನರಲ್ಲಿ ಬಹುತೇಕರು ಉನ್ನತ ಮಟ್ಟದ ಶಿಕ್ಷಣ ಪಡೆದ ಬಳಿಕ ಜ್ಞಾನ ಸಂಗ್ರಹದ ವ್ಯವಸ್ಥೆಯನ್ನು ಮುಂದುವರೆಸದೇ ಇರುವುದು ಶೋಚನೀಯ ಎಂದರು.

ಈ ಹಿಂದೆ ನಮ್ಮ ಹಿರಿಯರು ತಾವೇ ಸ್ವತಃ ಅಧ್ಯಯನ ಮಾಡಿ ಇನ್ನೊಬ್ಬರಿಗೆ ಬೋಧಿಸುತ್ತಿದ್ದರು. ಅದೇ ಮಾದರಿಯಲ್ಲಿ ಇಂದಿನ ಯುವಜನರು ತಾವೂ ತಿಳಿಯುವುದರೊಂದಿಗೆ ಇನ್ನಿತರರಿಗೂ ತಿಳುವಳಿಕೆ ನೀಡಬೇಕು. ಈ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿರಬೇಕು. ಇದಕ್ಕೆ ಉದಾಸೀನ ಮಾಡಿದರೆ, ಜ್ಞಾನ ಸಂಪತ್ತು ಕಳೆದುಕೊಂಡಂತೆ ಅರ್ಥ. ನಾವು ಕೇವಲ ಮೇಲ್ಮಟ್ಟದಲ್ಲಿ ಜ್ಞಾನವನ್ನು ಬಳಸಿಕೊಂಡು ಅಧ್ಯಯನ ಮಾಡುತ್ತೇವೆ. ಆದರೆ ವಾಸ್ತವ ಪ್ರಜ್ಞೆ ಇಟ್ಟುಕೊಂಡು ಅಧ್ಯಯನ ಮಾಡುವುದಿಲ್ಲ ಇದರಿಂದ ನಾವು ಬೆಳವಣಿಗೆ ಸಾಧಿಸಿ, ಸಾಧನೆ ಮಾಡಲು ಆಗುವುದಿಲ್ಲ. ನಮ್ಮ ಅಧ್ಯಾಪನ ಹಾಗೂ ಅಧ್ಯಯನದ ಶಕ್ತಿ ಕಡಿಮೆಯಾದರೆ. ಜ್ಞಾನ ಗಂಗೆಯ ಹರಿವು ಕಡಿಮೆಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್ ಮಾತನಾಡಿ, ವಿದ್ವಾಂಸರೊಬ್ಬರು ಪಾಠ ಮಾಡಲು ಸಾಕಷ್ಟು ಅಧ್ಯಯನ ಮಾಡಿಕೊಂಡು ಬರುತ್ತಾರೆ. ಪಾಠದ ವೇಳೆ ತಾವು ಮಾಡಿರುವ ಸಂಶೋಧನೆ ಹಾಗೂ ಲೇಖನಗಳ ಅನುಭವವನ್ನು ವಿದ್ಯಾರ್ಥಿಗಳಿಗೆ ತಿಳಿಸುತ್ತಾರೆ. ಇಂದು ಅಂತಹವರ ಸಂಖ್ಯೆ ಕಡಿಮೆ. ಬೋಧಕರು ಹೆಚ್ಚಿನ ಜ್ಞಾನ ಸಂಪಾದಿಸಿಕೊಂಡಾಗ ಮಾತ್ರ ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ಬೋಧಿಸಬಹುದು. ಕೇವಲ ಪಠ್ಯಕ್ರಮಕ್ಕೆ ಮಾತ್ರ ಅಧ್ಯಯನ ಸೀಮಿತಗೊಳ್ಳಬಾರದು. ವಿದ್ಯಾರ್ಥಿಗಳ ವಿಕಾಸಕ್ಕೆ ಪೂರಕವಾದ ಜ್ಞಾನಾರ್ಜನೆಗೆ ಮುಂದಾಗಬೇಕು ಎಂದು ತಿಳಿಸಿದರು.

ವಿದ್ಯಾರ್ಥಿಗಳಲ್ಲಿ ಕಲಿಕಾ ಆಸಕ್ತಿ ಇರಬೇಕು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈಯ್ದವರನ್ನು ಮಾದರಿಯಾಗಿ ಸ್ವೀಕರಿಸಿ, ಅವರಂತೆ ಸಾಧನೆ ಮಾಡಬೇಕೆಂಬ ಹಂಬಲ ವಿದ್ಯಾರ್ಥಿಗಳಲ್ಲಿರಬೇಕು. ಪ್ರಸ್ತುತ ಸಂದರ್ಭದಲ್ಲಿ ಜ್ಞಾನ ಸಂಪಾದನೆ ಹೆಚ್ಚಿಸಿಕೊಳ್ಳಲು ಬೇಕಾದ ಪೂರಕ ವಾತಾವರಣ ವಿದ್ಯಾರ್ಥಿಗಳಿಗೆ ಸುಲಭವಾಗಿ ಸಿಗುತ್ತದೆ. ಅಧ್ಯಯನ ಮಾಡಲು ಬೇಕಾದ ವಾತಾವರಣವೂ ಹೆಚ್ಚಾಗಿದೆ. ಎಲ್ಲಾ ಮೂಲಗಳನ್ನು ಬಳಸಿಕೊಂಡು ಅಧ್ಯಯನ ನಡೆಸುವಂತೆ ಸಲಹೆ ನೀಡಿದರಲ್ಲದೆ, ಡಾ.ಜಿ. ಮರಳಸಿದ್ಧಯ್ಯನಂತಹ ವಿದ್ವಾಂಸರು ಇಂದು ನಮಗೆ ಸಿಗುವುದಿಲ್ಲ. ಡಾ.ಜಿ. ಮರಳಸಿದ್ಧಯ್ಯ ಅವರು ಅನೇಕರಿಗೆ ಮಾರ್ಗದರ್ಶನ ನೀಡಿ ಅವರನ್ನು ಬೆಳೆಸಿದ್ದಾರೆ. ಅವರ ಆದರ್ಶವನ್ನು ಇಟ್ಟುಕೊಂಡು ನಾವು ಏನು ಕೆಲಸ ಮಾಡಿದರೂ ಸಫಲತೆ ಕಾಣಬಹುದಾಗಿದೆ ಎಂದರು. ಕಾರ್ಯಕ್ರಮದಲ್ಲಿ ವಿದ್ವಾನ್ ಡಾ. ಎಂ.ಶಿವಕುಮಾರಸ್ವಾಮಿ ಹಾಗೂ ಇನ್ನಿತರರು ಇದ್ದರು.

ಯಶಸ್ವಿನಿ ಯೋಜನೆ ಮರು ಜಾರಿ

ಮೈಸೂರು, ನ.8- 2022-23ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಸಹಕಾರ ರೈತರ ಆರೋಗ್ಯ ರಕ್ಷಣಾ ಯೋಜನೆಯನ್ನು ರಾಜ್ಯದಲ್ಲಿ ಮರು ಜಾರಿಗೊಳಿಸಿ ಸರ್ಕಾರ ಆದೇಶಿಸಿರುತ್ತದೆ. ಈ ಯೋಜನೆಯ ಬಗ್ಗೆ ಮಾರ್ಗಸೂಚಿಗಳನ್ನು ನೀಡಲಾಗಿದ್ದು, ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಸದರಿ ಯೋಜನೆಯಡಿ 1650 ಖಾಯಿಲೆಗಳಿಗೆ ಶಸ್ತ್ರಚಿಕಿತ್ಸೆಗಳನ್ನು ಒಳಗೊಂಡಂತೆ ಚಿಕಿತ್ಸೆ ನೀಡಲಾಗುತ್ತದೆ. ಈ ಹಿಂದೆ ಯಶಸ್ವಿನಿ ಯೋಜನೆಯಲ್ಲಿ ನೋಂದಾಯಿಸಿದ ನೆಟ್‌ವರ್ಕ್ ಆಸ್ಪತ್ರೆಗಳನ್ನೇ ಮುಂದುವರೆಸಲಾಗಿರುತ್ತದೆ.

ಮೈಸೂರು ಜಿಲ್ಲೆಯ ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವ 04 ಸದಸ್ಯರ ಕುಟುಂಬದ ನಗರ ಪ್ರದೇಶಕ್ಕೆ ರೂ.1000/- ಗಳ ವಂತಿಗೆ ಮತ್ತು ಗ್ರಾಮೀಣ/ ಸ್ವಸಹಾಯ ಗುಂಪುಗಳಿಗೆ ರೂ.500/- ಗಳ ವಂತಿಗೆಯನ್ನು ಪಾವತಿಸುವುದು, ಪ್ರತಿ ಹೆಚ್ಚುವರಿ ಸದಸ್ಯರಿಗೆ ಶೇ.20 ಅಂದರೆ ರೂ.100/- ಗಳನ್ನು ಪಾವತಿಸಿ ಯೋಜನೆಯ ಸದುಪಯೋಗಪಡಿಸಿಕೊಳ್ಳುವಂತೆ ಕೋರಿದೆ. ಸಹಕಾರಿಗಳು ಸಂಘಕ್ಕೆ ಭೇಟಿ ನೀಡಿ ತಮ್ಮ ಕುಟುಂಬದ ಸದಸ್ಯರ ಆಧಾರ ಕಾರ್ಡ್, ಪಡಿತರ ಕಾರ್ಡು ಮತ್ತು ಭಾವಚಿತ್ರಗಳನ್ನು ಕಾರ್ಯದರ್ಶಿಗಳಿಗೆ ನೀಡಿ ನೋಂದಣಿ ಮಾಡಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0821-2521956 ಮತ್ತು 0821-2443321 ಅನ್ನು ಸಂಪರ್ಕಿಸಿ ಎಂದು ಮೈಸೂರು ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಾದ ಜಿ.ಆರ್.ವಿಜಯ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಧನೆಗಳೇ ಇಲ್ಲದ ಬಿಜೆಪಿ ಜನಸಂಕಲ್ಪ ಯಾತ್ರೆಗೆ ಅರ್ಥವಿಲ್ಲ

ಕಾಂಗ್ರೆಸ್ ನಾಯಕರ ಬಗ್ಗೆ ಮುಖ್ಯಮಂತ್ರಿ ಆರೋಪಕ್ಕೆ ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್ ಖಂಡನೆ

ಮೈಸೂರು, ನ.8(ಆರ್‌ಕೆಬಿ)- ಉಡುಪಿಯಲ್ಲಿ ಬಿಜೆಪಿ ಜನಸಂಕಲ್ಪ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಾಂಗ್ರೆಸ್ ನಾಯಕರ ಬಗ್ಗೆ ಭ್ರಷ್ಟಾಚಾರದ ಆರೋಪ ಮಾಡಿರುವುದನ್ನು ಕೆಪಿಸಿಸಿ ವಕ್ತಾರ ಎಚ್.ಎ.ವೆಂಕಟೇಶ್ ಖಂಡಿಸಿದ್ದಾರೆ.



ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಡಳಿತ ಪಕ್ಷ ಜನಸಂಕಲ್ಪ ಯಾತ್ರೆಯಲ್ಲಿ ಜನರಿಗೆ ತಮ್ಮ ಸರ್ಕಾರ ಮಾಡಿರುವ ಸಾಧನೆಗಳನ್ನು ತಿಳಿಸಬೇಕು. ಆದರೆ, ಮುಖ್ಯಮಂತ್ರಿಗಳು ಸರ್ಕಾರದ ಸಾಧನೆ ಹೇಳುವುದನ್ನು ಬಿಟ್ಟು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ವಿಪಕ್ಷ ನಾಯಕ ಸಿದ್ದರಾಮಯ್ಯ ವಿರುದ್ಧ ಅನಗತ್ಯ ಆರೋಪಗಳನ್ನು ಮಾಡಿದ್ದಾರೆ. ಬಿಜೆಪಿ ಸರ್ಕಾರ ಹೇಳಿಕೊಳ್ಳಲು ಸಾಧನೆಗಳೇ ಇಲ್ಲ. ಇನ್ನು ಅವರ ಯಾವ ಸಾಧನೆ ಹೇಳಲು ಸಾಧ್ಯ ಎಂದು ಲೇವಡಿ ಮಾಡಿದರು.

ಆಡಳಿತ ಪಕ್ಷದ ವೈಫಲ್ಯಗಳನ್ನು ಎತ್ತಿ ಹಿಡಿಯುವುದು ವಿಪಕ್ಷಗಳ ಕರ್ತವ್ಯ. ಆ ಕೆಲಸವನ್ನು ಕಾಂಗ್ರೆಸ್ ಪಕ್ಷ ಪರಿಣಾಮಕಾರಿಯಾಗಿ ಮಾಡುತ್ತಾ ಬಂದಿದೆ. ಇದರಿಂದ ವಿಚಲಿತರಾಗಿರುವ ಮುಖ್ಯಮಂತ್ರಿ ಅನಗತ್ಯವಾಗಿ ಕಾಂಗ್ರೆಸ್ ನಾಯಕರ ವಿರುದ್ಧ ಟೀಕೆ, ಆರೋಪ ಮಾಡುತ್ತಿದ್ದಾರೆ ಎಂದು ಜರಿದರು.

ಬೆಲೆ ಏರಿಕೆ, ಅತಿವೃಷ್ಟಿಯಿಂದ ಕಂಗಾಲಾಗಿರುವ ಜನರು, ರೈತರನ್ನು ಸಂತೈಸುವುದನ್ನು ಬಿಟ್ಟು, ಬಿಜೆಪಿಯವರು ಸಾಧನೆಗಳೇ ಇಲ್ಲದೆ ಯಾವ ಪುರುಷಾರ್ಥಕ್ಕೆ ಜನಸಂಕಲ್ಪ ಯಾತ್ರೆ ಮಾಡುತ್ತಿದ್ದಾರೆ. ರಾಜ್ಯದ ಜನರು ಕಷ್ಟಕರ ಪರಿಸ್ಥಿತಿಯಲ್ಲಿದ್ದರೂ ಬಿಜೆಪಿಯವರು ಲೂಟಿಯಲ್ಲಿ ತೊಡಗಿದ್ದಾರೆ ಎಂದು ಆರೋಪಿಸಿದರು.

ಮಾತೆತ್ತಿದ್ದರೆ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಬಗ್ಗೆ ಬಾಯಿಗೆ ಬಂದಂತೆ ದೂರುತ್ತಿದ್ದಾರೆ. ಹಾಗೊಂದು ವೇಳೆ ಹಗರಣ, ಭ್ರಷ್ಟಾಚಾರಗಳಿದ್ದರೆ, ಕಳೆದ ಮೂರೂವರೆ ವರ್ಷದಿಂದ ಅವರದ್ದೇ ಸರ್ಕಾರ ಇದೆ, ಅಧಿಕಾರ ಇದೆ. ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರಿಂದ ತನಿಖೆ ನಡೆಸಿದ್ದರೆ ಅದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಮುಖ್ಯಮಂತ್ರಿ ಬೊಮ್ಮಾಯಿ ಹಾಗೆ ಮಾಡದೆ ಸಾವು-ನೋವು, ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿದ್ದರೂ ಅದರ ಬಗ್ಗೆ ಚಕಾರ ಎತ್ತುತ್ತಿಲ್ಲ. ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡುವ ನೈತಿಕತೆ ಮುಖ್ಯಮಂತ್ರಿಗಳಿಗೆ ಮತ್ತು ಬಿಜೆಪಿ ನಾಯಕರಿಗೆ ಇಲ್ಲ ಎಂದರು.

ಇಂಥ ನಿಷ್ಪ್ರಯೋಜಕ ಮುಖ್ಯಮಂತ್ರಿಯನ್ನು ಕರ್ನಾಟಕ ಹಿಂದೆಂದೂ ಕಂಡಿಲ್ಲ. ಇವರು ಪೂರ್ಣ ಪ್ರಮಾಣದ ಸಚಿವ ಸಂಪುಟ ವಿಸ್ತರಣೆ ಮಾಡಲಾಗದ ಮುಖ್ಯಮಂತ್ರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇನ್ನೊಮ್ಮೆ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಬಗ್ಗೆ ಮಾತನಾಡಿದರೆ, ಕಾಂಗ್ರೆಸ್ ಸುಮ್ಮನೆ ಕೂರುವುದಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಒಡಕಿಲ್ಲ. ಆದರೆ ಬಿಜೆಪಿಯಲ್ಲಿ ಬಸವರಾಜ ಬೊಮ್ಮಾಯಿ, ಬಿ.ಎಸ್.ಯಡಿಯುರಪ್ಪ, ಈಶ್ವರಪ್ಪ, ಅಶೋಕ್, ಬಿ.ಎಲ್.ಸಂತೋಷ್ ಹೀಗೆ ಅನೇಕ ಗುಂಪುಗಳಿವೆ. ಅಂಥವರಿಗೆ ಕಾಂಗ್ರೆಸ್ ವಿರುದ್ಧ ಮಾತನಾಡುವ ನೈತಿಕತೆ ಇಲ್ಲ ಎಂದು ಟೀಕಿಸಿದರು

ಸುದ್ದಿಗೋಷ್ಠಿಯಲ್ಲಿ ಪಕ್ಷದ ನಗರಾಧ್ಯಕ್ಷ ಆರ್.ಮೂರ್ತಿ, ನಗರ ಪ್ರಧಾನ ಕಾರ್ಯದರ್ಶಿ ಭಾಸ್ಕರ್‌ಗೌಡ, ಮುಖಂಡರಾದ ಗೋಪಿನಾಥ್, ಕೆಮಹೇಶ್, ಗಿರೀಶ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಎಂ.ಎಲ್.ಹುಂಡಿ, ನಿಲಸೋಗೆ ಘಟನೆಗೆ

ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ: ಆರೋಪ



ತಿ.ನರಸೀಪುರ, ನ.8– ತಾಲೂಕಿನ ಮದ್ಗಾರ ಲಿಂಗಯ್ಯನ ಹುಂಡಿ(ಎಂ.ಎಲ್.ಹುಂಡಿ) ಗ್ರಾಮದಲ್ಲಿ ಚಿರತೆ ದಾಳಿಯಿಂದ ಯುವಕ ಸಾವು ಮತ್ತು ನಿಲಸೋಗೆ ಗ್ರಾಮದಲ್ಲಿ ವಿದ್ಯುತ್ ಸ್ಪರ್ಶದಿಂದ ಮೂವರು ಸಾವನ್ನಪ್ಪಿದ ಪ್ರಕರಣಕ್ಕೆ ಆಯಾ ಇಲಾಖಾ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ರೈತ ಸಂಘ ಮತ್ತು ಹಸಿರು ಸೇನೆ ಜಿಲ್ಲಾ ಸಂಚಾಲಕ ಮಹದೇವಸ್ವಾಮಿ ಆರೋಪಿಸಿದರು.

ಪಟ್ಟಣದ ರೈತ ಸಂಘದ ಕಚೇರಿಯಲ್ಲಿ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಮತ್ತು ದಲಿತ ಸಂಘರ್ಷ ಸಮಿತಿ ವತಿಯಿಂದ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಎಂ.ಎಲ್.ಹುಂಡಿ ಗ್ರಾಮದಲ್ಲಿ ಚಿರತೆ ದಾಳಿಗೆ ಯುವಕ ಬಲಿಯಾಗಿದ್ದು, ಸುತ್ತಮುತ್ತಲ ಗ್ರಾಮಗಳಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದೆ. ಅಂದಿನಿಂದಲೂ ವಿದ್ಯಾರ್ಥಿಗಳು ಶಾಲಾ–ಕಾಲೇಜಿಗೆ ಹೋಗಲು ಹಿಂಜರಿಯುತ್ತಿದ್ದು, ದನಗಾಹಿಗಳು ಕೂಡ ತಮ್ಮ ಜಾನುವಾರುಗಳನ್ನು ಮೇಯಿಸಲು ಸಾಧ್ಯವಾಗುತ್ತಿಲ್ಲ. ಈ ಹಿಂದೆಯೇ ಚಿರತೆ ಇರುವಿಕೆ ಬಗ್ಗೆ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರೂ, ಅರಣ್ಯ ಇಲಾಖೆ ಅಧಿಕಾರಿಗಳ ಬೇಜವಾಬ್ದಾರಿತನ ತೋರಿದ್ದಾರೆ ಎಂದು ಕಿಡಿಕಾರಿದರು.

ಘಟನೆ ನಂತರವೂ ಮಲ್ಲಿಕಾರ್ಜುನಸ್ವಾಮಿ ಬೆಟ್ಟದಲ್ಲಿ ದೇವರಿಗೆ ಪೂಜೆ ನಡೆಯುತ್ತಿದ್ದು, ನರಹಂತಕ ಚಿರತೆ ಸೆರೆ ಹಿಡಿಯುವ ತನಕ ಮಲ್ಲಪ್ಪನ ಬೆಟ್ಟದ ಅರಣ್ಯ ಪ್ರದೇಶವನ್ನು ನಿಷೇಧಿತ ಪ್ರದೇಶ ಎಂದು ಘೋಷಿಸಬೇಕು. ಅಲ್ಲಿವರೆಗೆ ಬೆಟ್ಟದಲ್ಲಿ ನಡೆಯುತ್ತಿರುವ ಪೂಜಾ ಕಾರ್ಯದ ತಡೆಗೆ ಸಂಬಂಧಿಸಿದ ಇಲಾಖಾ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್ ಮಾತನಾಡಿ, ತಾಲೂಕಿನ ವಿವಿಧೆಡೆ ವಿದ್ಯುತ್ ಅವಘಡ ಸಂಭವಿಸಿದ್ದು, ಇದು ಚೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿ. ಇತ್ತೀಚೆಗೆ ನಿಲಸೋಗೆ ಮತ್ತು ಹಿರಿಯೂರು ಗ್ರಾಮಗಳಲ್ಲಿ ನಡೆದ ದಾರುಣ ಘಟನೆಗಳನ್ನು ಶಾಸಕರು ಪಕ್ಷಾತೀತವಾಗಿ ಕಂಡು ಸಂತ್ರಸ್ತ ಕುಟುಂಬಗಳಿಗೆ ಸೂಕ್ತ ಪರಿಹಾರ ಕೊಡಿಸಬೇಕು ಎಂದರು.

ಎಂ.ಎಲ್.ಹುಂಡಿ ಮತ್ತು ನಿಲಸೋಗೆ ಗ್ರಾಮಗಳಲ್ಲಿ ನಡೆದ ಘಟನಾ ಸ್ಥಳಕ್ಕೆ ತಾಲೂಕು ದಂಡಾಧಿಕಾರಿಗಳು ಭೇಟಿ ನೀಡಿಲ್ಲ. ಈ ಬಗ್ಗೆ ಇದುವರೆಗೂ ಅಧಿಕಾರಿಗಳ ಸಭೆ ನಡೆಸಿಲ್ಲ. ಇದು ತಾಲೂಕಿನ ಜನರ ಮೇಲೆ ಅವರಿಗಿರುವ ಕಾಳಜಿ ತೋರಿಸುತ್ತದೆ ಎಂದು ಕಿಡಿಕಾರಿದರು.

ಸಭೆಯಲ್ಲಿ ರೈತ ಸಂಘದ ಜಿಲ್ಲಾ ಗೌರವಾಧ್ಯಕ್ಷ ಕೆ.ಜಿ.ಶಿವಪ್ರಸಾದ್, ವಿಭಾಗೀಯ ಸಂಚಾಲಕ ಮರಿಸ್ವಾಮಿ, ತಾಲೂಕು ಸಂಚಾಲಕ ಮನೋಜ್, ಟೌನ್ ಅಧ್ಯಕ್ಷ ಕಾಂತರಾಜು, ತಾಲೂಕು ಕಾರ್ಯದರ್ಶಿ ಸಂಪತ್ತು, ಜಯಶೇಖರಪ್ಪ, ಕೆ.ಎಂ.ಶಾಂತರಾಜು, ಎನ್.ಮಹೇಶ್ ಗುರುಸ್ವಾಮಿ ಇತರರಿದ್ದರು.

ಗಾವಡಗೆರೆಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ



ಹುಣಸೂರು, ನ.8– ತಾಲೂಕಿನ ಗಾವಡಗೆರೆ ಗ್ರಾಮದ ಶ್ರೀಗುರುಲಿಂಗ ಜಂಗಮದೇವರ ಮಠದಲ್ಲಿ ಬಿಜೆಪಿ ಮುಖಂಡ ಗಣೇಶ್ ಕುಮಾರಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಉಚಿತ ಕಣ್ಣಿನ ಶಸ್ತ್ರಚಿಕಿತ್ಸೆ ಮತ್ತು ತಪಾಸಣಾ ಶಿಬಿರ ನಡೆಯಿತು.

ಶಿಬಿರದಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿ ತಪಾಸಣೆಗೆ ಒಳಗಾದರು. ಈ ವೇಳೆ ಶಸ್ತ್ರಚಿಕಿತ್ಸೆ ಅವಶ್ಯಕತೆ ಇದ್ದ 130 ಮಂದಿಯನ್ನು ಬೆಂಗಳೂರಿನ ಶಂಕರ್ ಕಣ್ಣಿನ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಈ ವೇಳೆ ಶ್ರೀನಟರಾಜ ಸ್ವಾಮೀಜಿ, ಹುಣಸೂರಿನ ಕಾವೇರಿ ಆಸ್ಪತ್ರೆ ಡಾ.ಲೋಹಿತ್, ತಾಲೂಕು ಕುರುಬ ಸಮಾಜದ ಅಧ್ಯಕ್ಷ ಡಿ.ಕೆ. ಕುನ್ನೇಗೌಡ, ಎ.ಪಿ. ಸೋಮಣ್ಣ, ಬಸವರಾಜ್, ಡಾ.ಅಮೂಲ್ಯ, ಡಾ.ಶ್ರೀನಿವಾಸ್ ಬಾಬು, ಕೃಷಿ ಇಲಾಖೆ ಅಧಿಕಾರಿ ಶ್ರೀಕಾಂತ್, ಬಿಳಿಗಿರಿ ಗ್ರಾಪಂ ಅಧ್ಯಕ್ಷ ಮೋಹನ್, ಸದಸ್ಯರಾದ ಪ್ರಭಾಕರ್, ಶಿಕ್ಷಕರಾದ ವೆಂಕಟರಮಣ, ವಿಶ್ವನಾಥ್, ದಿನೇಶ್, ಮಲ್ಲೇಶ್ ಮತ್ತು ಗಾವಡಗೆರೆ ಗ್ರಾಪಂನ ಎಲ್ಲಾ ಸದಸ್ಯರು ಗ್ರಾಮಸ್ಥರು ಹಾಜರಿದ್ದರು.



ಜಯಪುರ ಹೋಬಳಿ ಕೋಟೆಹುಂಡಿ ಗ್ರಾಮದಲ್ಲಿ ಚೌಡಳ್ಳಿ ಮಾರಮ್ಮ ನೂತನ ದೇವಾಲಯ ನಿರ್ಮಾಣ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡ ಭೂಮಿಪೂಜೆ ನೆರವೇರಿಸಿದರು. ಈ ವೇಳೆ ಎಪಿಎಂಸಿ ಮಾಜಿ ಸದಸ್ಯ ಮಹದೇವು, ಗೋಪಾಲಗೌಡ, ಗ್ರಾಪಂ ಸದಸ್ಯ ಸುರೇಶ್ ಮಹದೇವ್, ಸಿ.ಮಹದೇವ್, ಪಿಡಿಒ ನರಹರಿ, ಕೋಟೆಹುಂಡಿ ಗ್ರಾಮದ ಯಜಮಾನರು ಮತ್ತು ಧನಗಹಳ್ಳಿ, ಡಿ.ಸಾಲುಂಡಿ, ಸುತ್ತಮುತ್ತಲ ಗ್ರಾಮಸ್ಥರಿದ್ದರು.



ತುಮಕೂರು ವಿಶ್ವವಿದ್ಯಾಲಯದಲ್ಲಿ ಬಾಕಿ ಇರುವ ವಾರ್ಷಿಕ ವರದಿ ಹಾಗೂ ಲೆಕ್ಕ ಪರಿಶೋಧನಾ ವರದಿಗಳನ್ನು ವಿಧಾನ ಮಂಡಲಕ್ಕೆ ಸಲ್ಲಿಸಲು ಆಗಿರುವ ವಿಳಂಬದ ಕುರಿತು ತುಮಕೂರಿನಲ್ಲಿ ಇಲಾಖಾ ಮುಖ್ಯಸ್ಥರು/ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಕಾಗದ ಪತ್ರಗಳ ಸಮಿತಿ ಅಧ್ಯಕ್ಷರೂ ಆದ ಶಾಸಕ ಸಾ.ರಾ.ಮಹೇಶ್ ಚರ್ಚೆ ನಡೆಸಿದರು.



ತಿ.ನರಸೀಪುರ ತಾಲೂಕಿನ ಚಂದಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಬಸವೇಶ್ವರ ದ್ವಾರವನ್ನು ರಾಜಬೊಪ್ಪೆಗೌಡನಪುರ ಸಂಸ್ಥಾನ ಮಠದ ಬಿ.ಎಸ್.ಜ್ಞಾನಾನಂದ ಚನ್ನರಾಜ ಅರಸ್ ಉದ್ಘಾಟಿಸಿದರು. ಈ ವೇಳೆ ಗ್ರಾಮಸ್ಥರಿದ್ದರು.



ಮೈಸೂರು ತಾಲೂಕಿನ ಅನಗಳ್ಳಿಯಲ್ಲಿ ಮೈಸೂರಿನ ಬೆಳಕು ಶೈಕ್ಷಣಿಕ ಮತ್ತು ಸಾಮಾಜಿಕ ಟ್ರಸ್ಟ್ (ಮೈಬೆಸ್ಟ್) ವತಿಯಿಂದ ಹೊಲಿಗೆ ಕೌಶಲ್ಯ ತರಬೇತಿ ಸಮಾರೋಪ ಸಮಾರಂಭ ಹಾಗೂ ಅರ್ಹತೆ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮ ನಡೆಯಿತು. ಈ ವೇಳೆ ಸಂಸ್ಥೆ ಅಧ್ಯಕ್ಷ, ಜಿಪಂ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ಗೋಪಾಲಪುರ ಗ್ರಾಪಂ ಉಪಾಧ್ಯಕ್ಷೆ ಪವಿತ್ರ, ತರಬೇತಿ ಪೂರ್ಣಗೊಳಿಸಿದ 28 ಮಂದಿಗೆ ಪ್ರಮಾಣಪತ್ರ ವಿತರಿಸಿದರು. ಗ್ರಾಪಂ ಸದಸ್ಯರಾದ ಮಹದೇವಸ್ವಾಮಿ, ಕಮಲ, ಮೈಬೆಸ್ಟ್ ಸಿಬ್ಬಂದಿ ವರ್ಗ ಹಾಜರಿದ್ದರು.

ಡಿ.6, ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶ

ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ



ನಂಜನಗೂಡು, ನ.8– ದಲಿತ ಸಂಘಟನೆಗಳನ್ನು ಒಗ್ಗೂಡಿಸುವ ಸಲುವಾಗಿ ಡಿ.6 ರಂದು ಬೆಂಗಳೂರಿನಲ್ಲಿ ನಡೆಯುವ ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶದಲ್ಲಿ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ನಾರಾಯಣ್ ಮನವಿ ಮಾಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ದಲಿತ ಸಂಘರ್ಷ ಸಮಿತಿಗಳ ಐಕ್ಯತಾ ಹೋರಾಟ ಸಮಿತಿಯಿಂದ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ದಲಿತ ಸಂಘಟನೆಗಳನ್ನು ಒಗ್ಗೂಡಿಸುವ ಸಲುವಾಗಿ ಡಿ.6 ರಂದು ಡಾ.ಬಿ.ಆರ್. ಅಂಬೇಡ್ಕರ್ ಅವರ ಪರಿನಿಬ್ಬಾಣ ದಿನದ ಅಂಗವಾಗಿ ಸ್ವಾತಂತ್ರ್ಯ, ಸಮಾನತೆ, ಸಹೋದರತೆ, ಸಾಮಾಜಿಕ ನ್ಯಾಯ ಮತ್ತು ಮೀಸಲಾತಿ ಆಶಯಗಳನ್ನು ನಾಶ ಮಾಡುತ್ತಿರುವ ಆರ್‌ಎಸ್‌ಎಸ್ ಮತ್ತು ಬಿಜೆಪಿ ದುರಾಡಳಿತದ ವಿರುದ್ಧ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗಾಗಿ ದಲಿತರ ಸಾಂಸ್ಕೃತಿಕ ಪ್ರತಿರೋಧ ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶವನ್ನು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ. ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ದಲಿತ ಮುಖಂಡ ಮಲ್ಲೇಶ್ ಮಾತನಾಡಿ, ರಾಜ್ಯ ಮತ್ತು ಕೇಂದ್ರ ಸರ್ಕಾರ ರೈತ, ದಲಿತ ವಿರೋಧ ನೀತಿಗಳನ್ನು ಅನುಸರಿಸುತ್ತಿದ್ದು, ಸಮಾವೇಶದ ಮೂಲಕ ನಮ್ಮನ್ನಾಳುವ ಸರ್ಕಾರಗಳಿಗೆ ಎಚ್ಚರಿಕೆ ನೀಡುತ್ತಿದ್ದೇವೆ. ಜನರನ್ನು ಜಾಗೃತಿಗೊಳಿಸುವ ಕೆಲಸ ಮಾಡಬೇಕು. ದೇಶದಲ್ಲಿ ಅರಾಜಕತೆ ಉಂಟಾಗಿದೆ. ಇಂತಹ ಜನವಿರೋಧಿ ಸರ್ಕಾರಗಳನ್ನು ಕಿತ್ತುಗೆಯುವ ಕೆಲಸ ಮಾಡಬೇಕು. ಆದ್ದರಿಂದ ದಲಿತ ಸಂಘಟನೆಗಳನ್ನು ಒಗ್ಗೂಡಿಸಿ, ತಾಲೂಕಿನಿಂದ 2 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರೊಂದಿಗೆ ಬೆಂಗಳೂರಿಗೆ ತೆರಳುತ್ತಿದ್ದೇವೆ ಎಂದರು. ದಲಿತ ಸಂಘರ್ಷ ಸಮಿತಿ ಹಿರಿಯ ಮುಖಂಡರಾದ ಬೆಟ್ಟಯ್ಯ ಕೋಟೆ, ಆಲಗೂಡು ಶಿವಕುಮಾರ್ ಸೇರಿದಂತೆ ಇತರರಿದ್ದರು.

ಮಲ್ಕುಂಡಿಯಲ್ಲಿ ಮಲೆ ಮಹದೇಶ್ವರರ ಆರಾಧನೆ



ಮಲ್ಕುಂಡಿ, ನ.8– ಕಾರ್ತಿಕ ಮಾಸದ ಅಂಗವಾಗಿ ಗ್ರಾಮದ ಮಲೆ ಮಹದೇಶ್ವರ ದೇವಾಲಯದ ಆವರಣದಲ್ಲಿ ಮಹದೇಶ್ವರರ ಆರಾಧನೆ ಹಾಗೂ ಗಂಗಾಪೂಜೆ ನೆರವೇರಿತು.


ಕಾರ್ತಿಕ ಸೋಮವಾರದ ಅಂಗವಾಗಿ ಮಹದೇಶ್ವರ ದೇವಾಲಯವನ್ನು ಬಣ್ಣ ಬಣ್ಣ ಹೂ, ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು. ಮುಂಜಾನೆಯೇ ದೇವರಿಗೆ ಅಭಿಷೇಕ ಸೇರಿದಂತೆ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ನೆರೆದಿದ್ದ ಭಕ್ತರು ದೇವರ ದರ್ಶನ ಪಡೆದರು. ಇದೇ ವೇಳೆ ಗ್ರಾಮಸ್ಥರಿಂದ ಅನ್ನ ಸಂತರ್ಪಣೆ ಆಯೋಜಿಸಲಾಗಿತ್ತು. ಮಂಗಳವಾರ ಮಧ್ಯಾಹ್ನ ದೇವಾಲಯದ ಬಳಿ ಇರುವ ಕೆರೆ ಬಳಿ ಗಂಗಾಪೂಜೆ ನೆರವೇರಿಸಿ, ಗ್ರಾಮದ ಪ್ರಮುಖ ಬೀದಿಗಳಲ್ಲಿ ಬಸವ ಹಾಗೂ ನಂದಿಕಂಬವನ್ನು ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು. ಇದೇ ವೇಳೆ ಮಕ್ಕಳಾಗದವರು ಹಾಗೂ ಭಕ್ತರು ಹರಕೆ ತೀರಿಸಿದರು.

ಡಾ.ಶಿವಕುಮಾರಸ್ವಾಮಿಗಳ ಪ್ರತಿಮೆಗೆ ಭವ್ಯ ಸ್ವಾಗತ



ಚುಂಚನಕಟ್ಟೆ, ನ.8– ಸಾಲಿಗ್ರಾಮ ತಾಲೂಕಿನ ಹಾಡ್ಯ ಗ್ರಾಮಕ್ಕೆ ಆಗಮಿಸಿದ ಡಾ.ಶಿವಕುಮಾರ ಸ್ವಾಮಿಗಳ ಪ್ರತಿಮೆಗೆ ಪೂಜೆ ಸಲ್ಲಿಸುವ ಮೂಲಕ ಭವ್ಯ ಸ್ವಾಗತ ಕೋರಲಾಯಿತು. ಗ್ರಾಮದಲ್ಲಿ ಪ್ರತಿಷ್ಠಾಪಿಸಲು ಉದ್ದೇಶಿಸಿರುವ ಶ್ರೀಗಳ 6 ಅಡಿ ಎತ್ತರದ ಪ್ರತಿಮೆ ಗ್ರಾಮ ಪ್ರವೇಶಿಸಿದ ಹಿನ್ನೆಲೆಯಲ್ಲಿ ಗಾವಡಗೆರೆ ಮಠದ ನಟರಾಜಶ್ರೀ, ಬೆಟ್ಟದಪುರ ಸಲಿಲಾಖ್ಯ ಮಠದ ಚನ್ನಬಸವದೇಶಿ ಕೇಂದ್ರ ಸ್ವಾಮಿ, ಅಂಕನಹಳ್ಳಿ ವಿಜಯಕುಮಾರಸ್ವಾಮೀಜಿ ಮತ್ತು ಹಾಡ್ಯ ಬಸವರಾಜಶ್ರೀಗಳ ನೇತೃತ್ವದಲ್ಲಿ ಗ್ರಾಮಸ್ಥರು ಬರಮಾಡಿಕೊಂಡರು. ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಪ್ರಸಾದ್, ಗ್ರಾಪಂ ಅಧ್ಯಕ್ಷೆ ಗಿರಿಜಮ್ಮ, ಮಾಜಿ ಅಧ್ಯಕ್ಷ ವೀರಭದ್ರಪ್ಪ, ಸದಸ್ಯ ಮಲ್ಲಿಕಾರ್ಜುನ, ಮಾಜಿ ಸದಸ್ಯ ರಘು, ಸಿದ್ದಗಂಗಾ ಟ್ರಸ್ಟ್ ಅಧ್ಯಕ್ಷ ಪಿಎಲ್‌ಪಿ ಕುಮಾರ್, ಖಜಾಂಚಿ ಕುಮಾರ್, ವಕೀಲ ಮಹದೇವಪ್ಪ, ಮುಖಂಡರಾದ ಮಹೇಶ್, ನಟರಾಜು, ತ್ರಯಂಬಕಸ್ವಾಮಿ, ನಾಗೇಶ್, ಅರ್ಚಕ ಜಗದೀಶ್, ಶಿವಪ್ರಕಾಶ್, ಇನ್ಸ್‌ಪೆಕ್ಟರ್ ಕೆ.ಶ್ರೀಕಾಂತ್, ಶಿಲ್ಪಿ ಗಣೇಶ್ ಮತ್ತಿತರರಿದ್ದರು.

ಅನಾಥ ಶವಗಳ ಮುಕ್ತಿದಾತ ಡಾ.ಮಾದೇಶ್ ಸೇವೆ ಅನನ್ಯ



ತಿ.ನರಸೀಪುರ, ನ.8– ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸಾವಿರಕ್ಕೂ ಹೆಚ್ಚು ಶವ ಸಂಸ್ಕಾರ ಮಾಡಿರುವ ಡಾ.ಮಾದೇಶ್ ಅವರ ಸೇವೆ ಅನನ್ಯ ಎಂದು ರಾಜ್ಯ ವಾಲ್ಮೀಕಿ ಸಂಘಟನೆಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ತಿಳಿಸಿದರು.

ಕನ್ನಡ ರಾಜ್ಯೋತ್ಸವದ ಅಂಗವಾಗಿ ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ನಡೆದ ಸರಳ ಸಮಾರಂಭದಲ್ಲಿ ಸಮಾಜ ಸೇವಕ ಹಾಗೂ ಅನಾಥ ಶವಗಳ ಮುಕ್ತಿದಾತರೂ ಆದ ಡಾ.ಎಂ.ಮಾದೇಶ್ ಅವರನ್ನು ಶ್ರೀ ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಸನ್ಮಾನಿಸಿ ಮಾತನಾಡಿದ ಅವರು, ಶವ ಕಂಡ ಕೂಡಲೇ ದೂರ ನಿಲ್ಲುವ ಕಾಲದಲ್ಲಿ ಅನಾಥ ಶವಗಳು ಸಿಕ್ಕ ಮಾಹಿತಿ ತಿಳಿದಾಕ್ಷಣ ಸ್ಥಳಕ್ಕೆ ತೆರಳಿ ತಮ್ಮ ಸ್ವಂತ ಖರ್ಚಿನಲ್ಲಿ ಶವ ಸಂಸ್ಕಾರ ನೆರವೇರಿಸುವ ಇವರ ಸೇವೆ ಶ್ಲಾಘನೀಯ. ಇಂತಹ ಅಪರೂಪದ ವ್ಯಕ್ತಿಗಳನ್ನು ಗುರುತಿಸಿ ರಾಜ್ಯ ಸರ್ಕಾರ ಪ್ರಶಸ್ತಿ ನೀಡಿ ಗೌರವಿಸಬೇಕಿದೆ ಎಂದರು.

ಈ ಬಾರಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಇವರ ಹೆಸರು ಚಾಲ್ತಿಯಲ್ಲಿತ್ತಾದರೂ ಕೊನೆ ಗಳಿಗೆಯಲ್ಲಿ ಹೆಸರು ಬದಲಾವಣೆಯಾಗಿದ್ದು ಬೇಸರ ತರಿಸಿದೆ. ಮುಂದಿನ ಬಾರಿಯಾದರೂ ಸರ್ಕಾರ ಇಂತಹ ಸಾಧಕರನ್ನು ಗುರುತಿಸಿ ರಾಜ್ಯ ಪ್ರಶಸ್ತಿ ನೀಡುವ ಕೆಲಸ ಮಾಡಬೇಕಿದೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ.ಎಂ.ಮಾದೇಶ್, ಯಾವುದೇ ಪ್ರಶಸ್ತಿ, ಸನ್ಮಾನಕ್ಕಾಗಿ ನಾನು ಅನಾಥ ಶವ ಸಂಸ್ಕಾರದಂತಹ ಕಾಯಕ ಮಾಡುತ್ತಿಲ್ಲ. ಈ ಕಾಯಕ ಮಾಡುತ್ತಿರುವುದರಿಂದ ನನ್ನ ಮನಸ್ಸಿಗೆ ಸಮಾಧಾನ ದೊರಕುತ್ತಿದ್ದು, ಅನಾಥವಾಗಿ ದೊರಕುವ ಶವಗಳು ಅನಾಥ ಶವಗಳಾಗದೇ ಅವಕ್ಕೂ ಮುಕ್ತಿ ಸಿಗಬೇಕೆಂಬ ಸದುದ್ದೇಶ ನನ್ನದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಯಡದೊರೆ ಮಹೇಶ್ ನಾಯಕ್, ಕಸಾಪ ಟೌನ್ ಅಧ್ಯಕ್ಷ ಕೃಷ್ಣಮೂರ್ತಿ, ದೇವರಾಜು, ಮುರುಳಿ, ರಂಗಸ್ವಾಮಿ, ಕಾಂತರಾಜ ಅರಸ್, ಮಾದೇಶ್, ಬಾಳೆ ಮಂಜು, ಕುಮಾರ್, ಭಾರತ ಮಾತ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ರಾಜೇಶ್ ಸೇರಿದಂತೆ ಮತ್ತಿತರರಿದ್ದರು.

ಕೋಟೆಯಲ್ಲಿ ರಾಷ್ಟ್ರೀಯ ಅಯೋಡಿನ್ ನಿಯಂತ್ರಣ ಕಾರ್ಯಕ್ರಮ



ಹೆಚ್.ಡಿ.ಕೋಟೆ, ನ.8– ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ವತಿಯಿಂದ ಬೀಚನಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ರಾಷ್ಟ್ರೀಯ ಅಯೋಡಿನ್ ನಿಯಂತ್ರಣ ಕಾರ್ಯಕ್ರಮ ನಡೆಯಿತು.

ತಾಲೂಕು ಆರೋಗ್ಯಾಧಿಕಾರಿ ಡಾ.ಟಿ. ರವಿಕುಮಾರ್ ಮತ್ತು ರಾಜ್ಯ ಕೈಗಾರಿಕಾ ಭದ್ರತಾ ಪಡೆ ಕಬಿನಿ ಜಲಾಶಯದ ಪೊಲೀಸ್ ಇನ್ಸ್‌ಪೆಕ್ಟರ್ ಶಿವಲಿಂಗ ಕುರೆನ್ನವರ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಟಿ. ರವಿಕುಮಾರ್ ಮಾತನಾಡಿ, ಅಯೋಡಿನ್ ಒಂದು ಸೂಕ್ಷ್ಮ ಪೋಷಕಾಂಶ. ಇದು ಮನುಷ್ಯನ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಅಗತ್ಯ. ಅಯೋಡಿನ್ ಸಾಕಷ್ಟು ಪ್ರಮಾಣದಲ್ಲಿ ನಮಗೆ ದೊರೆಯದಿದ್ದರೆ ಅನೇಕ ನ್ಯೂನತೆ ಉಂಟಾಗುತ್ತವೆ. ಅಯೋಡಿನ್ ಕೊರತೆಯಿಂದ ಮಕ್ಕಳಲ್ಲಿ ಬುದ್ಧಿ ಮಾಂದ್ಯತೆ, ಕಲಿಕೆಯಲ್ಲಿ ಹಿಂದುಳಿಯುವಿಕೆ, ಸರಿಪಡಿಸಲಾಗದ ದೈಹಿಕ ಮತ್ತು ಮಾನಸಿಕ ವಿಕಲತೆ, ಕುಂಠಿತ ಬೆಳವಣಿಗೆ, ಕಿವುಡು ಹಾಗೂ ಮೂಕತನ, ಮೆಳ್ಳಗಣ್ಣು, ಕುಬ್ಜತನ, ಅಂಗವಿಕಲತೆ ನಡೆಗೆಯಲ್ಲಿ ಸರಿಪಡಿಸಲಾಗದಂತಹ ಲೋಪ ದೋಷಗಳು, ವಯಸ್ಕರಲ್ಲಿ ನಿಶಕ್ತಿ ಕಾರ್ಯ ನಿರ್ವಹಣೆಯ ವೈಫಲ್ಯತೆ, ಗಳಗಂಡ ರೋಗ, ಗರ್ಭಿಣಿಯರಲ್ಲಿ ಪದೇ ಗರ್ಭಪಾತ, ಸತ್ತು ಹುಟ್ಟುವ ಮಕ್ಕಳ ಸಂಖ್ಯೆಯಲ್ಲಿ ಹೆಚ್ಚಳ, ಸಂತಾನೋತ್ಪತ್ತಿ ತೊಂದರೆ, ತಾಯಿ ಗರ್ಭದಲ್ಲಿರುವಾಗಲೇ ಶಿಶುವಿನ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಪ್ರಾರಂಭವಾಗುತ್ತದೆ. ಈ ವೇಳೆ ತಾಯಿಗೆ ಅಯೋಡಿನ್ ಅಂಶದ ಕೊರತೆ ಇದ್ದರೆ ಶಿಶುವಿನಲ್ಲಿ ಸರಿಪಡಿಸಲಾಗದಂತಹ ದೈಹಿಕ ಮತ್ತು ಮಾನಸಿಕ ತೊಂದರೆಗಳು ಉಂಟಾಗುತ್ತವೆ. ತಾಯಿಗೆ ಅಯೋಡಿನ್ ಕೊರತೆ ಅಲ್ಪ ಪ್ರಮಾಣದಲ್ಲಿದ್ದರೂ ಆರಂಭದಲ್ಲಿ ಮಗುವಿನ ಬೆಳವಣಿಗೆ ಸಹಜವಾಗಿ ಕಂಡರೂ ಕ್ರಮೇಣ ಕುಂಠಿತ ಬೆಳವಣಿಗೆ ಬುದ್ಧಿಮಾಂದ್ಯತೆ ಮತ್ತಿತರನ್ನು ನ್ಯೂನತೆ ಉಂಟಾಗಬಹುದು ಎಂದರು.

ಕತ್ತಿನ ಮುಂಭಾಗದಲ್ಲಿರುವ ಥೈರಾಯಿಡ್ ಗ್ರಂಥಿ ಊತವೇ ಗಳಗಂಡ ರೋಗ. ನಮ್ಮ ದೇಹಕ್ಕೆ ಸಾಕಷ್ಟು ಪ್ರಮಾಣದಲ್ಲಿ ಅಯೋಡಿನ್ ಅಂಶ ದೊರಕದಿದ್ದಲ್ಲಿ ಥೈರಾಯಿಡ್ ಗ್ರಂಥಿ ಗಾತ್ರ ಹೆಚ್ಚಾಗುತ್ತದೆ. ಇದು ಪ್ರಾರಂಭದಲ್ಲಿ ಕಣ್ಣಿಗೆ ಕಾಣಿಸುವುದಿಲ್ಲ. ಇದನ್ನು ತಜ್ಞ ವೈದ್ಯರು ಮಾತ್ರ ಪರೀಕ್ಷಿಸಿ ಪತ್ತೆ ಹಚ್ಚಬಲ್ಲರು. ಗಳಗಂಡ ರೋಗ ಹೆಚ್ಚಾದಾಗ ಮಾತ್ರ ಎಲ್ಲರಿಗೂ ಕಾಣುತ್ತದೆ. ಗಳಗಂಡ ರೋಗದೊಂದಿಗೆ ಅಯೋಡಿನ್ ಕೊರತೆ ಇದರ ನ್ಯೂನತೆಗಳು ಕಂಡು ಬರಬಹುದು.

ಕಾರ್ಯಕ್ರಮದಲ್ಲಿ ಗ್ರಾಪಂ ಸದಸ್ಯರಾದ ನಂದಿನಿ, ಸೀತಾ, ಆರೋಗ್ಯ ಇಲಾಖೆ ಸಿಬ್ಬಂದಿ ವರ್ಗದವರಾದ ನಾಗೇಂದ್ರ, ರವಿರಾಜ್, ಹನುಮಂತು, ನಾಗಮ್ಮ, ಶಾಲೆ ಶಿಕ್ಷಕ ವರ್ಗದವರಾದ ರಮೇಶ್, ರಘು, ಚೆನ್ನನಾಯ್ಕ, ಸುಮಾ, ಮಮತಾ, ಭವ್ಯ, ಆಶಾ ಕಾರ್ಯಕರ್ತೆಯರು, ಶಾಲೆ ಮಕ್ಕಳು ಹಾಜರಿದ್ದರು.

ಸಾಲಬಾಧೆ ರೈತ ಆತ್ಮಹತ್ಯೆ

ಹುಣಸೂರು, ನ.8– ಸಾಲಬಾಧೆ ತಾಳಲಾರದೇ ರೈತರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕಿರಂಗೂರು ಗ್ರಾಮದಲ್ಲಿ ಸೋಮವಾರ ರಾತ್ರಿ ನಡೆದಿದೆ.



ಗ್ರಾಮದ ನಿವಾಸಿ ಕೆ.ಬಿ.ರಾಮು(38) ಆತ್ಮಹತ್ಯೆ ಮಾಡಿಕೊಂಡವರು. ಇವರು ತಮ್ಮ ಜಮೀನಿನಲ್ಲಿ ಮುಸುಕಿನ ಜೋಳ, ರಾಗಿ ಮತ್ತು ಶುಂಠಿ ಬೆಳೆಯಲು ತಂದೆ ಬಸವೇಗೌಡರ ಹೆಸರಿನಲ್ಲಿ ಕಟ್ಟೆಮಳಲವಾಡಿಯ ಐಒಬಿ ಬ್ಯಾಂಕ್‌ನಲ್ಲಿ 5 ಲಕ್ಷ ರೂ. ಸಾಲ ಮಾಡಿದ್ದರು. ಆದರೆ ಬೆಳೆ ನಷ್ಟ ಹಾಗೂ ತಮ್ಮ ಅನಾರೋಗ್ಯಕ್ಕೆ ಹಣ ಹೊಂದಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಸಹೋದರ ಶಿವು ಹುಣಸೂರು ಗ್ರಾಮಾಂತರ ಠಾಣೆ ದೂರು ನೀಡಿದ್ದಾರೆ. ಮೃತರ ಮನೆಗೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ಹೇಳಿದರು.

ದಲಿತ ವ್ಯಕ್ತಿಗೆ ದೇವಸ್ಥಾನಕ್ಕೆ ನಿರ್ಬಂಧ

ನಿವೃತ್ತ ಶಿಕ್ಷಕ ಸೇರಿ 8 ಮಂದಿ ವಿರುದ್ಧ ಕೇಸ್

ಬೆಟ್ಟದಪುರ, ನ.8– ದೇವಸ್ಥಾನದಲ್ಲಿ ಪೂಜೆ ಮಾಡಲು ತೆರಳಿದ ದಲಿತ ವ್ಯಕ್ತಿಯನ್ನು ಪ್ರವೇಶಿಸದಂತೆ ತಡೆದು ಜಾತಿ ನಿಂದನೆ ಮಾಡಿ ಜೀವ ಬೆದರಿಕೆ ಹಾಕಿದ ಪ್ರಕರಣವೊಂದು ಪಿರಿಯಾಪಟ್ಟಣ ತಾಲೂಕಿನ ಬೆಕ್ಕರೆ ಗ್ರಾಮದಲ್ಲಿ ತಡವಾಗಿ ಬೆಳಕಿಗೆ ಬಂದಿದೆ.

ಸಂಪ್ರದಾಯದಂತೆ ಪೂಜೆ ನೆರವೇರಿಸಲು ತೆರಳಿದ ವ್ಯಕ್ತಿಯನ್ನು ಎಳೆದಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿ ದೇವಸ್ಥಾನಕ್ಕೆ ಪ್ರವೇಶಿಸಂತೆ ನಿರ್ಬಂಧಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನಿವೃತ್ತ ಶಿಕ್ಷಕ ಸೇರಿದಂತೆ 8 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಬೆಕ್ಕರೆ ಗ್ರಾಮದ ಮಹದೇವ ಎಂಬುವರು ಬಾಲಚಂದ್ರ ಬಸವೇಶ್ವರ ದೇವಸ್ಥಾನದಲ್ಲಿ ಅ.25 ರಂದು ಪೂಜೆ ಸಲ್ಲಿಸಲು ತೆರಳಿದಾಗ ನಿವೃತ್ತ ಶಿಕ್ಷಕ ಬಸವೇಗೌಡ ಎಂಬುವರು ಪ್ರವೇಶ ನಿರಾಕರಿಸಿದ್ದಾರೆ. ಅಲ್ಲದೇ ಇದನ್ನು ಪ್ರಶ್ನಿಸಿದಾಗ ಜಾತಿ ನಿಂದನೆ ಮಾಡಿ ಜೀವ ಬೆದರಿಕೆ ಒಡ್ಡಿದ್ದಾರೆ. ಬಸವೇಗೌಡ ಅವರಿಗೆ ಮುರಳೀಧರ್, ಪ್ರಸನ್ನ, ರವಿಕುಮಾರ್, ಚಂದ್ರಶೇಖರ್, ಬಸವ ರಾಜ್, ಮಹದೇವ ಹಾಗೂ ನವೀನ ಎಂಬುವರು ಸಾಥ್ ನೀಡಿದ್ದಾರೆ ಎಂದು ಆರೋಪಿಸಲಾಗಿದೆ. ಈ ಸಂಬಂಧ ನಿವೃತ್ತ ಶಿಕ್ಷಕ ಸೇರಿದಂತೆ 8 ಮಂದಿ ವಿರುದ್ಧ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಅಟ್ರಾಸಿಟಿ ಕೇಸ್ ದಾಖಲಾಗಿದೆ.

ಪುಟ್ಟನಿಂಗಮ್ಮ ನಿಧನ



ಹೆಚ್.ಡಿ.ಕೋಟೆ, ನ.8– ತಾಲೂಕಿನ ಕೋಳಗಾಲ ಗ್ರಾಮದ ನಾಯಕ ಜನಾಂಗದ ಮುಖಂಡ ರಾಜೇಂದ್ರ ಅವರ ತಾಯಿ ಪುಟ್ಟನಿಂಗಮ್ಮ(65) ಮಂಗಳವಾರ ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಸವಿನೆನಪು



ನೀವು ನಮ್ಮನ್ನಗಲಿ 11 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿ ನೀವು ಹಾಕಿಕೊಟ್ಟ ಹಾದಿಯಲ್ಲಿ ಸಾಗುತ್ತಿದ್ದೇವೆ. ನಿಮ್ಮ ಆತ್ಮಕ್ಕೆ ಶಾಂತಿ ಸಿಗಲಿ.

ದುಃಖತಪ್ತರು: ಮಗ ಬಿ.ಎಸ್.ಸುಬ್ರಮಣ್ಯ, ಮಕ್ಕಳು, ಸೊಸೆಯಂದಿರು, ಹಾಗೂ ಮೊಮ್ಮಕ್ಕಳು

ಲಿ|| ಬಸ್ವಸ್ವಾಮಿ

ನಿಧನ: 9–11–2011

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಹೆಚ್.ಡಿ.ಕೋಟೆ ತಾ|| ಹಂಪಾಪುರ ಹೋ|| ಮಲಾರದ ಹುಂಡಿ ಗ್ರಾಮದ ಶ್ರೀಮತಿ ವಿಮಲರವರು ಮಾಡುವ ವಿಜ್ಞಾಪನೆಗಳು. ಪೂಜ್ಯ ಪತಿಯವರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 9.11.2022 ಬುಧವಾರ ಮಧ್ಯಾಹ್ನ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಮನವಿ

ದುಃಖತಪ್ತರು: ಶ್ರೀಮತಿ ವಿಮಲ. ಕು|| ವನುಶಿತ, ಕುಟುಂಬ ವರ್ಗದವರು, ಗ್ರಾಮಸ್ಥರು.

ಶ್ರೀ ಬಿ.ಉಗ್ರೇಗೌಡ (ಸ್ವಾಮಿ)

ನಿಧನ : 30.10.2022

VACANCY FOR WOMEN IN MYSORE

MNC Company

Eligibility Criteria Age: 28-48 yrs

Education: Any Degree/ Diploma,

Salary : 15000 to 18000 + PF & ESI

Contact: 9880637868

DOCUMENT LOST

I, Mukeshkumar Residing at No 850, D-6, 26, 2nd Floor, Avalakki Venkatappa Street, Devaraja Mohalla, Mysore - 570001, have lost Absolute Sale deed No. MYS1-00526/201/2015 - 16 at home on 04/10/2022 Finders Please Contact:

8951899430

5ನೇ ವರ್ಷದ ಸವಿನೆನಪು



ಹೋಟೆಲ್ ರಾಜಣ್ಣ

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು: ಶ್ರೀಮತಿ ಲಕ್ಷ್ಮಿ, ಮಕ್ಕಳು, ದೀಕ್ಷಿತಾ, ವಿಜಯ್, ತಾಯಿ ಸಿದ್ದಮ್ಮ, ನಂಜಪ್ಪನಾಯ್ಕ. (ಸ್ವಾಮಿ.ಹೆಚ್.ಎನ್) ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

ಡೈಮಂಡ್ ಉತ್ಸವ

ಡೈಮಂಡ್ ಪ್ರದರ್ಶನ ಮತ್ತು ಮಾರಾಟ

8th to 14th Nov, 2022



ಪ್ರಾರಂಭಿಸಲಾಗುತ್ತಿದೆ ಕೋಟ್ಯೂರ್ ವಜ್ರದ ಆಭರಣಗಳು

ವಜ್ರದ ಆಭರಣ ಕ್ಯಾರಟ್‌ಗೆ ರೂ.2500/-* ರಿಯಾಯಿತಿ

ಪ್ರತಿ ಸಂದರ್ಭಕ್ಕೂ ಶೈಲೀಕೃತ ವಜ್ರದ ಆಭರಣಗಳು!

Since 1925

A. SHANKARA CHETTY & SONS

PLATINUM DIAMOND GOLD SILVER JEWELLERS

ಕೆ ಆರ್ ವೃತ್ತ, ಮೈಸೂರು | ಟೆಲಿಫೋನ್ : 0821 - 2423882 | ಮೊಬೈಲ್ : 88808 66661

EMI ಸೌಲಭ್ಯ ಮತ್ತು ವ್ಯಾಲೆಟ್ ಪಾರ್ಕಿಂಗ್ ಲಭ್ಯವಿದೆ | ಸಮಯ : ಬೆಳಗ್ಗೆ 11 ರಿಂದ ರಾತ್ರಿ 8 ರವರೆಗೆ

ಮೈಸೂರು ಮಿತ್ರ 43 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ನಿಮ್ಮ ಮಧುರ ನೆನಪಿನಲ್ಲಿ



ನೀವು ನಮ್ಮ ಜೊತೆಯಲಿಲ್ಲ ಆದರೂ ನಿಮ್ಮ ಮಧುರ ನೆನಪು ಮಾಸಿಲ್ಲ ನಿಮ್ಮ ಪ್ರೀತಿಯ ಜಯಲಕ್ಷ್ಮಿ ಪ್ರಶಾಂತ್ ಪ್ರಜ್ವಲ್.ಪಿ.ಗೌಡ

ಪ್ರಶಾಂತ್ ಹೆಚ್.ಬಿ

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮಾದಹಳ್ಳಿ ವಾಸ್ತವ್ಯ ನಾಗನಹಳ್ಳಿ ಹುಂಡಿ ಗ್ರಾಮದ ಬೊಮ್ಮೇಗೌಡರ ಮಗನಾದ ಶಿವಣ್ಣ ಹಾಗೂ ಕುಟುಂಬಸ್ಥರು ಮತ್ತು ಅದೇ ಗ್ರಾಮದ ಲೇಟ್ ಬೊಮ್ಮೇಗೌಡರ ಮಗನಾದ ಮರಿಗೌಡ ಮತ್ತು ಕುಟುಂಬಸ್ಥರು ಇರಾವ ಮೇರೆಗೆ ಪ್ರಚುರ ಪಡಿಸುತ್ತಿರುವ ಈ ಸಾರ್ವಜನಿಕ ಪ್ರಕಟಣೆಯ ಕ್ರಮವೇನೆಂದರೆ:

ಅದಾಗಿ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕುಪ್ಪೆಗೌಡನಹಳ್ಳಿ ಗ್ರಾಮದ ಸರ್ವೆ ನಂ.181ರ ಪೈಕಿ ಮರಿಗೌಡರ ಬಾಬ್ತು 2 ಎಕರೆ 4 ಗುಂಟೆ ಮತ್ತು ಶಿವಣ್ಣರವರ ಬಾಬ್ತು 2 ಎಕರೆ 11 ಗುಂಟೆ ಕೃಷಿ ಭೂಮಿಗೆ ಸಂಬಂಧಿಸಿದಂತೆ ವಿಜಯನಗರ, ಕೃಷ್ಣಬಂಕ, ಸೇವರೂ ನಗರದ ಮನೆ ನಂ 41–1 : 13–76 ರಲ್ಲಿ ವಾಸವಾಗಿರುವ ಲೇಟ್ ರಾಮ ಬೋರರ ರಾಮ್‌ರವರ ಮಗನಾದ ಸಣ್ಣ ಚಂದ್ರಶೇಖರ್ ರವರಿಗೆ ನಮ್ಮ ಕಕ್ಷಿದಾರರು ದಿನಾಂಕ 17.12.2019 ರಂದು ಕೊಟ್ಟಿರುವಂತಹ ಜಿ.ಪಿ.ಎ ಅನ್ನು ಈ ಮೂಲಕ ರದ್ದುಗೊಳಿಸುತ್ತಿದ್ದು, ಸಾರ್ವಜನಿಕರಾದಿಯ ಸಹ ಮೇಲ್ಕಂಡ ಸ್ವತ್ತುಗಳಿಗೆ ಸಂಬಂಧಿಸಿದಂತೆ ಸಣ್ಣ ಚಂದ್ರಶೇಖರರವರ ಜೊತೆಯಲ್ಲಿ ವ್ಯವಹಾರಿಸಬಾರದೆಂದು ಈ ಮೂಲಕ ತಿಳಿಸಲಾಗಿದೆ. ಒಂದು ವೇಳೆ ಈ ಪ್ರಕಟಣೆಯ ಹೊರತಾಗಿಯೂ ಸಾರ್ವಜನಿಕರು ಮೇಲ್ಕಂಡ ಭೂಮಿಗೆ ಸಂಬಂಧಿಸಿದಂತೆ ಸದರಿ ವ್ಯಕ್ತಿಯ ಜೊತೆಯಲ್ಲಿ ವ್ಯವಹಾರ ಮಾಡಿದ್ದಲ್ಲಿ ಅಂತಹ ವ್ಯವಹಾರಗಳು ನಮ್ಮ ಕಕ್ಷಿದಾರರ ಪಕ್ಷಗಳಿಗೆ ಬಾಧ್ಯವಾಗುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ಹೆಚ್.ಎಸ್.ಕುಮಾರ್, ಬಿ.ಎ.ಎಲ್‌ಎಲ್‌ಬಿ, ವಕೀಲರು, # 1411, 1ನೇ ಮಹಡಿ, 6ನೇ ಕ್ರಾಸ್, ತ್ಯಾಗರಾಜ ರಸ್ತೆ, ಮೈಸೂರು

ದಿನಾಂಕ: 08.11.2022

ಸ್ಥಳ: ಮೈಸೂರು

ಮೈಸೂರು ಮಿತ್ರ 43

ಜಾಹೀರಾತಿಗಾಗಿ ಸಂಪರ್ಕಿಸಿ:

Ph: 0821-2496522 / 23

Email: ad@mysurumithra.com

Office Space Showroom For Rent

1st Floor- 1000 Sqft Glass Building at JSS Layout 2nd Stage near police Layout, T.Narasipur Road, Mysuru, Contact

8886782970

100% NEEM WOOD PLYWOOD & DOORS

@ FACTORY DEPOT RATES

NEEM BOND PLATINUM™ 10yrs WARRANTY

CALL 99012 91267 98454 26862

ಸಾರ್ವಜನಿಕ ತಿಳುವಳಿಕೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ಕೆ.ಜಿ.ಕೊಪ್ಪಲು, 5ನೇ ಕ್ರಾಸ್, ಮನೆ ನಂ.2410 ರಲ್ಲಿ ವಾಸವಾಗಿರುವ ಲೇಟ್ ನಾಗರಾಜು ರವರ ಧರ್ಮಪತ್ನಿಯಾದ ಶ್ರೀಮತಿ ನಾಗಲಕ್ಷ್ಮಿ ರವರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಅದರ ಮಾಲೀಕರಾದ ಮೈಸೂರು ಸಿಟಿ, ವಿಜಯನಗರ, 2ನೇ ಹಂತ, ಹೈಟೆನ್ಷನ್ ಜೋಡಿ ರಸ್ತೆ, 22ನೇ ಮುಖ್ಯರಸ್ತೆ, ಮನೆ ನಂ.3080 ರಲ್ಲಿ ವಾಸವಾಗಿರುವ ಬಿ.ಸಿದ್ದರಾಜು ರವರ ಮಗನಾದ ಸುಮಾರು 60 ವರ್ಷ ವಯಸ್ಸಿನ ಶ್ರೀ ಬಿ.ಎಸ್.ರಮೇಶ್ ಹಾಗೂ ಬಿ.ಎಸ್.ರಮೇಶ್ ರವರ ಧರ್ಮಪತ್ನಿಯಾದ ಸುಮಾರು 47 ವರ್ಷ ವಯಸ್ಸಿನ ಶ್ರೀಮತಿ ರೇಖಾ.ಎಸ್ ರವರೊಂದಿಗೆ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಒಪ್ಪಿ ಸದರಿಯವರೊಂದಿಗೆ ಕ್ರಯದ ಕರಾರನ್ನು ಮಾಡಿಕೊಳ್ಳುವವರಿದ್ದಾರೆ. ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಬೇರೆ ಯಾರಿಗಾದರೂ ಹಕ್ಕು, ಹಿತಾಸಕ್ತಿ, ಸ್ವಾಧೀನ, ನ್ಯಾಯಾಲಯದಲ್ಲಿ ದಾವೆ ಇದ್ದ ಸಂಬಂಧ ವಗೈರೆಗಳು ಇದ್ದಲ್ಲಿ, ಈ ತಿಳುವಳಿಕೆ ಪ್ರಕಟಣೆಯೊಂದ 07 ದಿನಗಳೊಳಗಾಗಿ ನಮ್ಮ ಕಛೇರಿಗೆ ತಕರಾರನ್ನು ಸಲ್ಲಿಸತಕ್ಕದ್ದು, ಒಂದು ವೇಳೆ ಯಾವುದೇ ತಕರಾರು ಬಾರದಿದ್ದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಕ್ರಯದ ಕರಾರು ಪತ್ರವನ್ನು ನೋಂದಣಿ ಮಾಡಿಕೊಳ್ಳಲು ಸಿದ್ಧರಿರುತ್ತಾರೆಂದು ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ:

ಮೈಸೂರು ಸಿಟಿ, ಚಾಮರಾಜಮೊಹಲ್ಲಾ, ಜಯನಗರ ಬಡಾವಣೆ, 4ನೇ ಮುಖ್ಯರಸ್ತೆ, ನಿವೇಶನ ಸಂಖ್ಯೆ 82/ಎ, ಸಿ.ಹೆಚ್.7/ಎ ರ ನಿವೇಶನಕ್ಕೆ ಚಕ್ಕುಬಂದಿ:– ಪೂರ್ವಕ್ಕೆ : ಗಲ್ಲಿ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : 71ನೇ ನಂಬರ್ ಮನೆ, ದಕ್ಷಿಣಕ್ಕೆ : 82/ಎ ರ ಉಳಿಕೆ ಸ್ವತ್ತು. ಈ ಮಧ್ಯೆ ಇರುವ ವಿಸ್ತೀರ್ಣ ಪೂರ್ವ ಪಶ್ಚಿಮ 84 ಅಡಿ, ಉತ್ತರ ದಕ್ಷಿಣ 50 ಅಡಿಗಳ ಪೈಕಿ ಪೂರ್ವ ಪಶ್ಚಿಮ 30 ಅಡಿ, ದಕ್ಷಿಣೋತ್ತರ 27 ಅಡಿಗಳು ಹಾಗೂ ಇದಕ್ಕೆ ಹೊಂದಿಕೊಂಡಂತೆ ಪಶ್ಚಿಮದ ಕಡೆಗೆ ಇರುವ ಅಳತೆ ಪೂರ್ವಪಶ್ಚಿಮ 54 ಅಡಿ, ದಕ್ಷಿಣೋತ್ತರ 20 ಅಡಿಗಳುಳ್ಳ ಪೂರ್ತಾ ಖಾಲಿ ನಿವೇಶನ ಮತ್ತು ಇದಕ್ಕೆ ದಕ್ಷಿಣದ ಕಡೆಗೆ ಹೊಂದಿಕೊಂಡಂತೆ ಇರುವ 3×54 ಅಡಿ ಅಳತೆಯುಳ್ಳ ಕಾಮನ್ ಪ್ಯಾಸೇಜ್ ಸಹ ಒಳಗೊಂಡ ಪೂರ್ಣ ಸ್ವತ್ತನ್ನು ನಮ್ಮ ಕಕ್ಷಿದಾರರ ಕ್ರಯದ ಕರಾರು ಮಾಡಿಕೊಳ್ಳಲು ಇಚ್ಛಿಸಿರುವ ಸ್ವತ್ತಾಗಿರುತ್ತದೆ.

Sd/- J.Suresha, B.Com, LL.B., Advocate, KAR 155/1993. #1, 1stCross, 2nd Main, Jayanagara, Mysuru - 570014, Mob.: 9448322896

MMCB

ದಿ ಮೈಸೂರು ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.

ಜಗನ್ ಮೋಹನ ಅರಮನೆ ರಸ್ತೆ, ಮೈಸೂರು-24

ಸ್ಥಾಪನೆ -1959

ಮೈಸೂರಿನ ಪ್ರಮುಖ 'ಎ' ಗ್ರೇಡ್ ಸಹಕಾರಿ ಬ್ಯಾಂಕ್

25 ವರ್ಷಗಳಿಂದ ಸತತವಾಗಿ 25% ಡಿವಿಡೆಂಡ್‌ನ್ನು ಸದಸ್ಯರುಗಳಿಗೆ ನೀಡಲಾಗುತ್ತದೆ ಮತ್ತು ನಿವ್ವಳ ಎನ್.ಪಿ.ಎ 0% ಇರುತ್ತದೆ

ಮೈಸೂರು ಜನತೆಗೆ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು

ಆಕರ್ಷಕ ಠೇವಣಿಯ ಮೇಲೆ ಬಡ್ಡಿ ದರಗಳು

370 ದಿನಗಳಿಗೆ	7.5%
ಹಿರಿಯ ನಾಗರೀಕರಿಗೆ	8%

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

0821-2432938 / 2522759

ಬಂಡಿಪಾಳ್ಯ - 2489565 | ಹೆಬ್ಬಾಳ್ - 2515077

TEACHER TRAINING PROGRAMS

IMKTA Since 2003

IMKTA INDIA MYSORE

WWW.IMKTA.IN

Online course also available

Build a Career in Teaching

JOIN DIPLOMA MONTESSORI/ PRIMARY TEACHER TRAINING



GET PLACED IN INDIA, DUBAI, UAE, SHARJAH, OMAN, QATAR

- FOR SSLC, PUC OR ANY GRADUATES
- REGULAR / SATURDAY WITH PRACTICAL TRAINING
- NEW NEP BASED CURRICULM FOLLOWED
- 30,000+ ALUMNI
- 19 YEARS OF SUCCESS
- 22 BRANCHES IN INDIA
- 800+ SCHOOL PARTNERSHIP

100%

SRIRAMPURA BRANCH : ALPHA INTERNATIONAL SCHOOL, NEAR RING ROAD JUNCTION

DOWNLOAD IMKTA APP Google play

782 993 7469

WANTED

ACCOUNTANT: with 5 years experience, must have Tally & Practical knowledge with day to day accounts.

OFFICE EXECUTIVE: with 2 years experience, must be fluent in English, Hindi, Kannada and Tamil.

SITE ENGINEER: Diploma in Civil Engineering / B.E in Civil Engineering with minimum 2 years of experience.

LEGAL ASSOCIATE: Practical knowledge with minimum 2 years of experience.

Interested candidates

Call on: 8277529922

Email: resumes182@gmail.com

ಬೇಕಾಗಿದ್ದಾರೆ

ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.

10,000/- Basic Salary + 10,000/- Incentive

8884171888

75ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು



ಶ್ರೀಕಂಠು (ಮಿಲ್ಕಿ ಹೋಟೆಲ್) ಕೆ.ಜಿ.ಕೊಪ್ಪಲ್, ಮೈಸೂರು

ಶುಭಕೋರುವವರು: ಬಸವರಾಜು.ಎಸ್ ಹಾಗೂ ಸ್ನೇಹಿತರು

FOR RENT

INDUSTRIAL SHED

Size 2400 Sqft

#127, Koorgalli Industrial Area, Mysuru

Contact: 93421 54189

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

UPTO 50% OFF — DISCOUNT OFFER TILL 12th NOV — ಮಾರಾಟ

WOODEN - HANDCARVED ಪೀಠೋಪಕರಣಗಳು



ಭಾನುವಾರವೂ ತೆರೆದಿರುತ್ತದೆ | Debit & Credit Cards Accepted | 100% Assured TeakWood

After % - 12600 | After % - 32500 | After % - 22500 | After % - 24000 | After % - 10500

ಸ್ಥಳ: ರಾಜ್ಯ ಸರ್ಕಾರಿ ನೌಕರರ ಸಂಘದ ಕಟ್ಟಡ ವಾರ್ತಾ ಭವನದ ಹತ್ತಿರ, ಜೆ.ಕೆ.ಗ್ರೌಂಡ್ ಎದುರು, ದಾಸಪ್ಪ ವೃತ್ತದ ಹತ್ತಿರ, ಧನವಂತ್ರಿ ರಸ್ತೆ, ಮೈಸೂರು.

ನಿಸರ್ಗ ಪ್ಯಾರಡೈಸ್ — DEVELOPED PLOTS

HP

ONE OF THE HIGHTECH LAYOUT IN MYSURU

50 ACRES TOWNSHIP PROJECT

ಬುಕ್ಕಿಂಗ್ ತೆರೆದಿದೆ

30X40 | 30X50 | 40X60



- ತಕ್ಷಣ ಕ್ರಯ
- ಎಲ್ಲಾ ಸೌಲಭ್ಯಗಳನ್ನೊಳಗೊಂಡಿರುವ

ತ್ವರೆ ಮಾಡಿ! ಕೆಲವೇ ಸೈಟ್‌ಗಳು ಮಾತ್ರ

ಬ್ಯಾಂಕ್ ಸಾಲ ಸೌಲಭ್ಯವಿದೆ HDFC BANK LIC HFL ICICI Bank

ಹೈಲ್ಯಾಂಡ್ ಪ್ರಾಪರ್ಟೀಸ್ ಹುಣಸೂರು– ಮೈಸೂರು ಮುಖ್ಯ ರಸ್ತೆ, ಮೈಸೂರು

90713 86615 95133 01854

ದಿ–ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ.

ಶ್ರೀ ಹರ್ಷ ರಸ್ತೆ, ಮೈಸೂರು – 570001, ದೂ.: 2520026

ಚಿನ್ನದ ಒಡವೆಗಳ ಬಹಿರಂಗ ಹರಾಜು

ಈ ಕೆಳಕಂಡ ಸದಸ್ಯರು / ಗ್ರಾಹಕರು ನಮ್ಮ ಬ್ಯಾಂಕಿನಿಂದ ಚಿನ್ನದ ಒಡವೆಗಳ ಮೇಲೆ ಸಾಲ ಪಡೆದು ಇದುವರೆಗೂ ಎಲ್ಲಾ ತರಹದ ನೋಟೀಸುಗಳನ್ನು ಕೊಟ್ಟಾಗ್ಯೂ, ಸಾಲದ ಮೊಬಲಗು ಇತ್ಯಾದಿಗಳನ್ನು ತೀರಿಸದೇ ಇರುತ್ತಾರೆ. ಆದ್ದುದರಿಂದ ಇವರುಗಳ ಚಿನ್ನದ ಒಡವೆಗಳನ್ನು ಬ್ಯಾಂಕಿನ ನಿಯಮದ ರೀತ್ಯಾ ಬ್ಯಾಂಕಿನ ಕಛೇರಿಯ ಆವರಣದಲ್ಲಿ ದಿನಾಂಕ: 30.11.2022 ಬುಧವಾರ, ಮಧ್ಯಾಹ್ನ 2.00 ಗಂಟೆಗೆ ಸರಿಯಾಗಿ ಬಹಿರಂಗವಾಗಿ ಹರಾಜು ಮಾಡಲಾಗುತ್ತದೆ. ಬ್ಯಾಂಕಿನ ಷರತ್ತುಗಳಿಗೆ ಒಳಪಟ್ಟು ರೂ. 10000 ಗಳ ಠೇವಣಿ ಮಾಡಿ ಯಾರಾದರೂ ಭಾಗವಹಿಸಬಹುದು. ಹರಾಜಿನ ಮೊಬಲಗನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹರಾಜು ಒಪ್ಪಿದಲ್ಲಿ ಮೊಬಲಗನ್ನು ತಕ್ಷಣ ಬ್ಯಾಂಕಿಗೆ ಜಮಾ ಮಾಡಿ, ಆಭರಣಗಳನ್ನು ಪಡೆಯತಕ್ಕದ್ದು, ಇಲ್ಲದಿದ್ದಲ್ಲಿ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಕ್ರ.ಸಂ.	ಅಕೌಂಟ್ ನಂ.	ಸಾಲ ಪಡೆದ ದಿನಾಂಕ	ಸಾಲಗಾರರ ಹೆಸರು ಮತ್ತು ವಿಳಾಸ
1	607762	26.07.2021	ಡಿ.ದಾಕ್ಷಾಯಿಣಿ W/o ದಯಾನಂದ, 463/ಎ, 1ನೇ ಹಂತ, 2ನೇ ಕ್ರಾಸ್, ಗಾಯತ್ರಿಪುರಂ, ಮೈಸೂರು.
2	607763	26.07.2021	ಶಶಿಕಲಾ.ಆರ್ W/o ಎಂ.ರಾಜು, 277 ಕಾಂತರಾಜ್ ಅರಸ್ ರಸ್ತೆ, ಕುವೆಂಪುನಗರ, ಮೈಸೂರು.
3	607763	02.08.2021	ಕೆ.ಪ್ರದೀಪ್‌ಕುಮಾರ್ S/o ಎಸ್.ಕುಮಾರ್, 3592/1, 2ನೇ ಮೇನ್, 6ನೇ ಕ್ರಾಸ್, ತಿಲಕನಗರ, ಮೈಸೂರು.
4	607781	05.08.2021	ವೀರರಾಜನಾಯಕ S/o ಲೇ. ಸುಬ್ಬನಾಯಕ, 69, ಪಾರಿಜಾತ ಎಫ್ ಬ್ಲಾಕ್, ಜ್ಯೋತಿನಗರ, ಮೈಸೂರು.
5	607782	05.08.2021	ವೀರರಾಜನಾಯಕ S/o ಲೇ. ಸುಬ್ಬನಾಯಕ, 69, ಪಾರಿಜಾತ ಎಫ್ ಬ್ಲಾಕ್, ಜ್ಯೋತಿನಗರ, ಮೈಸೂರು.
6	607792	09.08.2021	ಹೆಚ್.ರವಿ S/o ಡಿ.ಹನುಮಯ್ಯ, 1823, ಟೆರಿಷಿಯನ್ ಕಾಲೇಜು ಎದುರು, ಟಿ.ಎನ್.ಪುರ ರಸ್ತೆ, ಮೈಸೂರು.
7	607793	09.08.2021	ಹೆಚ್.ರವಿ S/o ಡಿ.ಹನುಮಯ್ಯ, 1823, ಟೆರಿಷಿಯನ್ ಕಾಲೇಜು ಎದುರು, ಟಿ.ಎನ್.ಪುರ ರಸ್ತೆ, ಮೈಸೂರು.
8	607794	09.08.2021	ಹೆಚ್.ರವಿ S/o ಡಿ.ಹನುಮಯ್ಯ, 1823, ಟೆರಿಷಿಯನ್ ಕಾಲೇಜು ಎದುರು, ಟಿ.ಎನ್.ಪುರ ರಸ್ತೆ, ಮೈಸೂರು.
9	607795	09.08.2021	ಹೆಚ್.ರವಿ S/o ಡಿ.ಹನುಮಯ್ಯ, 1823, ಟೆರಿಷಿಯನ್ ಕಾಲೇಜು ಎದುರು, ಟಿ.ಎನ್.ಪುರ ರಸ್ತೆ, ಮೈಸೂರು.
10	607807	10.08.2021	ಚಿನ್ನಮಲ್ಲಿಕಾರ್ಜುನ S/o ಮಲ್ಲಿಕಾರ್ಜುನ, 173, 2ನೇ ಮೇನ್, 13ನೇ ಕ್ರಾಸ್, ಜಯನಗರ, ಮೈಸೂರು.
11	607802	10.08.2021	ಎ.ಹರೀಶ S/o ಅಪ್ಪಾಜಿ, 924, ಬಸವನಗುಡಿ, ಇಟ್ಟಿಗೆಗೂಡು, ನಜರ್‌ಬಾದ್ ಮೊಹಲ್ಲಾ, ಮೈಸೂರು.
12	607819	16.08.2021	ಕೆ.ಎಲ್.ಭರತ್‌ಕುಮಾರ್ S/o ಕೆ.ಬಿ.ಲವಕುಮಾರ್, 109, 2ನೇ ಕ್ರಾಸ್, 1ನೇ ಹಂತ, ಗಾಯತ್ರಿಪುರಂ, ಮೈಸೂರು.
13	607833	18.08.2021	ಮಧುಸೂದನ್.ಎಂ.ಎಸ್. S/o ಸಿದ್ದಯ್ಯ, EWS 246, 1ನೇ ಹಂತ, ಕುವೆಂಪುನಗರ, ಮೈಸೂರು
14	607834	18.08.2021	ಎಂ.ಎಸ್.ಮಧುಸೂದನ್ S/o ಸಿದ್ದಯ್ಯ, EWS 246, 1ನೇ ಹಂತ, ಕುವೆಂಪುನಗರ, ಮೈಸೂರು
15	607839	23.08.2021	ಕೆ.ಚಂದ್ರಶೇಖರ್ S/o ಕೊನೂರಿಚಟ್ಟಿಯಾರ್, 42 ಸೋನಾರ್ ಬೀದಿ, ಸಿ.ಹೆಚ್.ಮೊಹಲ್ಲಾ, ಮೈಸೂರು.
16	607840	23.08.2021	ಪರುಶುರಾಮ್.ಪಿ.ಎನ್ S/o ಪಿ.ಎಸ್.ನಾಗೇಶ್ವರ್‌ರಾವ್, 1063/90/ಇ 1ನೇ ಮುಖ್ಯರಸ್ತೆ, 7ನೇ ಕ್ರಾಸ್, ವಿದ್ಯಾರಣ್ಯಪುರಂ, ಮೈಸೂರು.
17	607850	30.08.2021	ಜಯಲಕ್ಷ್ಮಿ S/o ರಾಮಸ್ವಾಮಿ ಮೊದಲಿಯಾರ್, 541, 9ನೇ ಕ್ರಾಸ್, ಮಹದೇಶ್ವರ ಬಡಾವಣೆ, ಹೆಬ್ಬಾಳ್, ಮೈಸೂರು.
18	607851	30.08.2021	ರವಿ.ಎ.ಸಿ 154/5 2ನೇ ಕ್ರಾಸ್, 3ನೇ ಮೇನ್, 1ನೇ ಹಂತ, ಹೆಬ್ಬಾಳು, ಮೈಸೂರು.
19	607861	01.09.2021	ಕರ್ಣರಾಜು.ಹೆಚ್.ಎಂ. S/o ಹೆಚ್.ಬಿ.ಮಂಜುನಾಥ, 1023, ಅನ್ನಪೂರ್ಣೇಶ್ವರಿ ನಿಲಯ, 5ನೇ ಮೇನ್, ರಾಮಕೃಷ್ಣನಗರ, ಮೈಸೂರು.
20	607857	01.09.2021	ಕೆ.ಜಿ.ಕುಮಾರ್ S/o ಕೆ.ರಘುರಾಮ, 87, 4ನೇ ಮೇನ್, ಯಾದವಗಿರಿ, ದೇವರಾಜ ಮೊಹಲ್ಲಾ, ಮೈಸೂರು.
21	607858	01.09.2021	ಕೆ.ಜಿ.ಕುಮಾರ್ S/o ಕೆ.ರಘುರಾಮ, 87, 4ನೇ ಮೇನ್, ಯಾದವಗಿರಿ, ದೇವರಾಜ ಮೊಹಲ್ಲಾ, ಮೈಸೂರು.
22	607860	01.09.2021	ಆರ್.ವಿಷ್ಣುಕುಮಾರ್ S/o ರಾಜರಾವ್ ಜಾದವ್, 520, ಕಾಮಟಗೇರಿ, ನಜರ್‌ಬಾದ್, ಮೈಸೂರು.
23	607866	02.09.2021	ಮಹದೇವಸ್ವಾಮಿ S/o ರಾಚಪ್ಪಣ್ಣ, 343, 5ನೇ ಕ್ರಾಸ್, ಮಸೀದಿ ರಸ್ತೆ, ನಜರ್‌ಬಾದ್, ಮೈಸೂರು.
24	607879	08.09.2021	ಎನ್.ಆನಂದ S/o ಆರ್.ನಾರಾಯಣ, 41/ಬಿ, ಜೆ.ಬಿ. ಪಾಳ್ಯ, ಸಿದ್ದಾರ್ಥನಗರ, ಮೈಸೂರು
25	607880	08.09.2021	ಎನ್.ಆನಂದ S/o ಆರ್.ನಾರಾಯಣ, 41/ಬಿ, ಜೆ.ಬಿ. ಪಾಳ್ಯ, ಸಿದ್ದಾರ್ಥನಗರ, ಮೈಸೂರು
26	607883	13.09.2021	ಎನ್.ಅಶೋಕ S/o ನಾರಾಯಣಗೌಡ, 9, 7ನೇ ಕ್ರಾಸ್, ಎ.ಜಿ.ಬ್ಲಾಕ್, ಎನ್.ಆರ್.ಮೊಹಲ್ಲಾ, ಮೈಸೂರು.

ಸೂಚನೆ: ಹರಾಜಿನ ದಿನದಂದು, ಯಾವುದೇ ಕಾರಣದಿಂದ ಸರ್ಕಾರ ಬ್ಯಾಂಕಿಗೆ ರಜಾ ಘೋಷಿಸಿದ್ದಲ್ಲಿ, ಬ್ಯಾಂಕಿನ ವ್ಯವಹಾರ, ಮುಂದಿನ ತಾರೀಖಿನಂದು ಅದೇ ವೇಳೆಯಲ್ಲಿ ಹರಾಜನ್ನು ನಡೆಸಲಾಗುವುದು.

ದಿನಾಂಕ: 08.11.2022, ಸ್ಥಳ: ಮೈಸೂರು. ಸಹಿ/– ವ್ಯವಸ್ಥಾಪಕರು, (ಪ್ರಭಾರ)

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

ಚಾ.ವಿ.ಸ.ನಿ. ಮೈಸೂರು C.E.S.C, MYSORE

24 ಗಂಟೆಗಳ ಚಾವಿಸನಿನಿ ಶುಲ್ಕ ರಹಿತ ಸಹಾಯವಾಣಿ ಸಂಖ್ಯೆ 1912 ಗೆ ಸ್ವಾಗತ

ಗ್ರಾಹಕರು ತಮ್ಮ ವಿದ್ಯುತ್ ಅಡಚಣೆ/ಅವಘಡ, ಬಿಲ್ಲು, ಹಣ ಪಾವತಿಗಳು ಮತ್ತು ಇತರೆ ಕುಂದು ಕೊರತೆಗಳ ನಿವಾರಣೆಗಾಗಿ "ಕೇಂದ್ರೀಕೃತ ಗ್ರಾಹಕರ ದೂರು ನಿವಾರಣಾ ಕೇಂದ್ರದ" ಶುಲ್ಕ ರಹಿತ ಸಹಾಯವಾಣಿ ಸಂಖ್ಯೆ: 1912ಗೆ ಸಂಪರ್ಕಿಸಲು ವಿನಂತಿಸಲಾಗಿದೆ.

- ಕೇಂದ್ರೀಯ ದೂರು ನಿರ್ವಹಣಾ ಕೇಂದ್ರದಲ್ಲಿ ದಾಖಲಿಸಲಾದ ಎಲ್ಲಾ ದೂರುಗಳನ್ನು PGRS: Public Grievance Readressal System ನಲ್ಲಿ ದೂರು ದಾಖಲಾದ ತಕ್ಷಣ ತಂತ್ರಾಂಶದಲ್ಲಿ ಜನರೇಟ್ ಆದಂತಹ ಡಾಕೆಟ್/ದೂರಿನ ಸಂಖ್ಯೆಯು ದೂರುದಾರರು ನೀಡಿರುವ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್ ಮುಖಾಂತರ ರವಾನೆಯಾಗುತ್ತದೆ.
- ಮತ್ತು ಸಂಬಂಧಿಸಿದ ಚಾ.ವಿ.ಸ.ನಿ.ನಿ. ಉಪ ವಿಭಾಗಾಧಿಕಾರಿಗಳಿಗೆ/ ಶಾಖಾಧಿಕಾರಿಗಳಿಗೆ/ಸ್ಥಳೀಯ ಸೇವಾ ಕೇಂದ್ರಗಳಿಗೆ ದೂರನ್ನು ಪರಿಹರಿಸಲು ಕ್ರಮ ಕೈಗೊಳ್ಳುವಂತೆ ಎಸ್.ಎಂ.ಎಸ್ ಮುಖಾಂತರ ಮಾಹಿತಿ ರವಾನೆಯಾಗುತ್ತದೆ.
- ಸಂಬಂಧಿಸಿದ ಸ್ಥಳೀಯ ಸೇವಾ ಕೇಂದ್ರದ ಸಿಬ್ಬಂದಿಗಳು ದೂರುದಾರರ ಸ್ಥಾವರಕ್ಕೆ ಹೋಗಿ ತೊಂದರೆಯನ್ನು ನಿವಾರಿಸಿ ಕೇಂದ್ರೀಯ ದೂರು ನಿರ್ವಹಣಾ ಕೇಂದ್ರಕ್ಕೆ ವರದಿಯನ್ನು ನೀಡುತ್ತಾರೆ.
- ದೂರು ನಿವಾರಣೆಯಾದ ನಂತರ, ದೂರುದಾರರಿಗೆ ಕರೆ ಮಾಡಿ ಧೃಡೀಕರಿಸಿಕೊಂಡ ನಂತರ ದೂರನ್ನು ಮುಕ್ತಾಯಗೊಳಿಸಲಾಗುತ್ತದೆ.
- ಒಂದು ವೇಳೆ ಯಾವುದಾದರು ದೂರನ್ನು ಸರಿಪಡಿಸಲು ವಿಳಂಬವಾದಲ್ಲಿ ಕಾರಣಗಳನ್ನು ಅಥವಾ ದೂರಿನ ಸ್ಥಿತಿಯನ್ನು ತಂತ್ರಾಂಶದಲ್ಲಿ ನಮೂದಿಸಲಾಗುತ್ತದೆ.
- ಗ್ರಾಹಕರು ತಮ್ಮ ದೂರಿನ ಸ್ಥಿತಿಯನ್ನು ಆನ್‌ಲೈನ್‌ನಲ್ಲಿಯೇ ("http://www.cescmysorepgrs.com") ತಿಳಿಯಬಹುದು.
- ಮೇಲಾಧಿಕಾರಿಗಳು ದೂರು ದಾಖಲಾತಿ ಮತ್ತು ನಿವಾರಣೆಯ ದೈನಂದಿನ ವರದಿಯನ್ನು ತಂತ್ರಾಂಶದಿಂದ ಪಡೆದು ಮೇಲ್ವಿಚಾರಣೆ ವಹಿಸುತ್ತಾರೆ.
- ಪರಿವರ್ತಕಗಳು ವಿಫಲಗೊಂಡಲ್ಲಿ ಗ್ರಾಹಕರು **1912** ನಲ್ಲಿ ದೂರು ದಾಖಲಿಸುವುದು.

ಗ್ರಾಹಕರು ತಮ್ಮ ದೂರನ್ನು ಈ ಕೆಳಗಿನ ಪರ್ಯಾಯ ವಿಧಾನಗಳ ಮೂಲಕ ಸಹಾ ದಾಖಲಿಸಬಹುದಾಗಿರುತ್ತದೆ.

- ವಾಟ್ಸ್ ಆಪ್ ಸಂಖ್ಯೆ: 9448991912
- ದೂರವಾಣಿ ಸಂಖ್ಯೆ: 9220592205 ಗೆ "CESC" ಎಂದು ಟೈಪ್ ಮಾಡಿ ಎಸ್.ಎಂ.ಎಸ್ ಕಳುಹಿಸುವ ಮೂಲಕ
- ವೆಬ್‌ಸೈಟ್: http://www.cescmysorepgrs.com
- ಚಾವಿಸನಿನಿ ಮೊಬೈಲ್ ಆಪ್
- ಇ-ಮೇಲ್ ವಿಳಾಸ: ceschelpline@gmail.com
- ಫೇಸ್ ಬುಕ್ ಐ.ಡಿ : @cescmysore
- ಟ್ವಿಟರ್ ಅಕೌಂಟ್ ಐ.ಡಿ : @cescmysore
- ಊರ್ಜಾ ಮಿತ್ರಾ ಮೊಬೈಲ್ ಆಪ್

ಗ್ರಾಹಕರ ಮಾಹಿತಿಗಾಗಿ ವೆಬ್ ವಿಳಾಸ: https://www.cescmysore.karnataka.gov.in/contact-us ದಲ್ಲಿ ಸ್ಥಳೀಯ ಸೇವಾ ಕೇಂದ್ರ ಹಾಗೂ ಅಧಿಕಾರಿಗಳ ಮೊಬೈಲ್ ಸಂಖ್ಯೆಗಳು ಲಭ್ಯವಿರುತ್ತದೆ.